


# ಅಖಿಲ ಭಾರತ ಪತ್ರಿಕೆ

**ಏಪ್ರಿಲ್ 2022**

# ಯುಗಳ ತತ್ತ್ವಗಳ ಅವತಾರ

ಬೆಲೆ : 15/-



ಫೋಟೊ: ಇಮೇಜಿಂಗ್ ಸಾವಿತ್ರಿ

ಸ್ವರ್ಣಿಮದ ಯುಗಳ ಸರ್ಪಗಳು ಬ್ರಹ್ಮ-ಬ್ರಹ್ಮಾಂಡದೇಣಿಯಾಗಿ
ಜೀವ-ವಾಹಿನಿಯ ಕುಂಡಲಿಯ ಸರಣಿ-ಸರಣಿಗಳ ಮಾಲೆಯಾಗಿ
ಪೂರ್ಣಗೊಂಡಿಹವು ಮಂಡಲದಃಖಂಡ ಆವರಣ ರಕ್ಷೆಯಾಗಿ
ಪರಿಶುದ್ಧ ಮತ್ತೆ ಘನಬಲದಿ ತುಂಬಿ ಸಾಮರ್ಥ್ಯಶಾಲಿಯಾಗಿ
ಸಾಂದ್ರಪ್ರಜ್ಞೆ ಜೊತೆ ದೃಷ್ಟಾರ ದೃಷ್ಟಿಯಲಿ ದರ್ಶಗೊಂಡು ಪ್ರಕಟ.

**– ಪುಟ್ಟು ಕುಲಕರ್ಣಿ**

**(ಶ್ರೀ ಅರವಿಂದರ 'ಸಾವಿತ್ರಿ'; ದಳ 7 ರೇಣು 5 ಪುಟ 524)**

**ಅಖಿಲ ಭಾರತ ಪತ್ರಿಕೆ**
**ಏಪ್ರಿಲ್ 2022**

ಸಂಪುಟ: 32 ಸಂಚಿಕೆ: 04

## ಪರಿವಿಡಿ

# "ಯುಗಳ ತತ್ತ್ವಗಳ ಅವತಾರ"

ಜಡತ್ವದಲ್ಲಿ ದೈವತ್ವದ ಆವಿಷ್ಕಾರ. – ಶ್ರೀ ಅರವಿಂದರು

**ಶ್ರೀಮಾತೆ; ಶ್ರೀ ಅರವಿಂದರ ಅಭಿವ್ಯಕ್ತಿ** 7
ಅನು: ಡಾ॥ ಮಹಾದೇವ ಸಕ್ರಿ

**ಶ್ರೀ ಅರವಿಂದರು; ಶ್ರೀಮಾತೆಯವರ ಅಭಿವ್ಯಕ್ತಿ** 18
ಅನು: ನಾಗಜ್ಯೋತಿ

**"ಏಕತ್ವ"ವಾಗಿರುವ ಯುಗಳ ತತ್ತ್ವ** 24
ಅನು: ಪ್ರೊ. ವೀರಭದ್ರಪ್ಪ

**ಯುಗಳ ತತ್ತ್ವಗಳ ಅವತಾರ** 30
– ಪುಟ್ಟು ಕುಲಕರ್ಣಿ

**ಶ್ರೀ ಅರವಿಂದರ 'ಗೀತಾ ಪ್ರಬಂಧಗಳು'** 46
ಅನು: ಜಾನ್ವಿ

**ಶ್ರೀ ಅರವಿಂದರ "ಸ್ವರ್ಣ ಜ್ಯೋತಿ"** 63
ಅನು: ಶ್ರೀ ಪುಟ್ಟು ಕುಲಕರ್ಣಿ

**ವಾರ್ತಾಪತ್ರ** 64

**ಸಂಪಾದಕರು:**
ಶ್ರೀ ಪುಟ್ಟು ಕುಲಕರ್ಣಿ
ರಾಘವೇಂದ್ರ ಮಠದ ಹಿಂಭಾಗ,
ಗಿಬ್ ಸರ್ಕಲ್, ಹೆರವಟ್ಟ ರಸ್ತೆ,
ಕುಮಟಾ – 581 332.
ಫೋನ್: 9448774920
mayureshwarkp@gmail.com

**ಪರಿಶೀಲನಾ ಸಮಿತಿ**
ಡಾ॥ ಗುರುಲಿಂಗ ಕಾಪಸೆ
ಡಾ॥ ಆರ್.ಕೆ. ಕುಲಕರ್ಣಿ

**ಪ್ರಕಾಶಕರು:**
ಡಾ॥ ಅಜಿತ್ ಸಬ್ನೀಸ್
ಅಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ ಕರ್ನಾಟಕ,
ಶ್ರೀ ಅರವಿಂದ ಮಾರ್ಗ,
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು:**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.
ಫೋನ್: 080 – 2244 9882
http://abp.sirinudi.org

**ಡಿ.ಟಿ.ಪಿ.:**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ:**
ಶೇಷಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

## ಸಂಪಾದಕರ ಟಿಪ್ಪಣಿ

ಒಂದು ಅವತಾರವು ಮಾತ್ರ ಮತ್ತೊಂದು ಅವತಾರದ ಕುರಿತು ಅದರ ರಹಸ್ಯವನ್ನು ಪ್ರಕಾಶನಗೊಳಿಸಬಲ್ಲುದು. ಹಾಗಾದರೆ, ಇಲ್ಲಿ, ಶ್ರೀಮಾತೆಯವರ ರಹಸ್ಯದ ಕುರಿತು ಶ್ರೀ ಅರವಿಂದರನ್ನು ಬಿಟ್ಟು ಬೇರೆ ಯಾರು ಬೆಳಕು ಚೆಲ್ಲಬಲ್ಲರು? ಅದೇ ರೀತಿಯಲ್ಲಿಯೇ ಶ್ರೀ ಅರವಿಂದರ ರಹಸ್ಯದ ಕುರಿತು ಶ್ರೀಮಾತೆಯವರಲ್ಲದೇ ಇನ್ನಾರು ತಾನೆ ಬೆಳಕು ಚೆಲ್ಲಬಲ್ಲರು? ಇವರಿಬ್ಬರೂ ಏಕಕಾಲಕ್ಕೆ ಆಗಮಿಸಿರುವದು ಈ ನವೀನ ಯುಗದ ಅಪೂರ್ವ ಸಂದರ್ಭವಾಗಿದೆ. ಇದೊಂದು ನೂತನ ಸೃಷ್ಟಿಯಾಗಿದೆ. ನೂತನ ಯುಗದ ಮಾತೃಕೆಯಾಗಿದೆ. ಇದು ನಮಗೆ ಸ್ಪಂದಗೊಂಡರೂ ಸರಿ ಇಲ್ಲದಿದ್ದರೂ ಸರಿ, ಈಗಾಗಲೇ ನವೀನ ಯುಗವೊಂದು ನಿಧಾನವಾಗಿ ಉಗಮಗೊಂಡಿದೆ. ಮತ್ತೆ ಇದು ಅದನ್ನು ಸ್ಪಂದಿಸಿದ ಕೆಲವು ಆತ್ಮಗಳ ಮೂಲಕ ಮತ್ತೂ ವಿಕಾಸಗೊಳ್ಳಲು, ಪ್ರಗತಿಗೊಳ್ಳಲು ಘೋಷಣೆಗೊಳ್ಳುತ್ತಿದೆ. ಇದರ ಪ್ರಭಾವವು ಸೂರ್ಯನ ಕಿರಣಗಳ ಹಾಗೆಯೇ ಪ್ರಶಾಂತಪೂರ್ಣವಾಗಿರುವ ಸ್ಥಿತಿಯಲ್ಲಿ ಇದ್ದು, ಮೃದುಮಧುರ ಭಾವದಿಂದ ಭೂಮಿಯನ್ನು ಸ್ಪರ್ಶಿಸುತ್ತದೆ. ಈ ಸ್ಪರ್ಶದಿಂದ ಭೂಮಿಯು ಅಗಣಿತವಾಗಿರುವ ನವನವೀನ ಸಂಭಾವ್ಯಗಳ ಮೂಲಕ ಜೀವಂತಿಕೆಯಿಂದ ಪ್ರಫುಲ್ಲಿತವಾಗುತ್ತದೆ.

ಈ ಯುಗಳ–ಅವತಾರಗಳ ಕುರಿತು ಸಲ್ಲಿಸಲಾಗುತ್ತಿರುವ ಶ್ರದ್ಧಾಭಾವ ಮತ್ತು ಕೃತಜ್ಞತಾಪೂರ್ಣ ಭಾವದಿಂದ ಈ ಸಂಚಿಕೆಯು ರೂಪಿತಗೊಂಡಿದೆ. [ಎಐಎಮ್]

*

## ಸಂಪಾದಕೀಯ

### ಅವತಾರಗಳ ಅಂತರಾಳ

ಮಾನವನ ಪ್ರಜ್ಞೆಗೆ ಗೋಚರವಾಗಿರುವ ಆಕಾಶಕಾಯಗಳಲ್ಲಿ ಎಲ್ಲಿಯೂ "ಜೀವ–ಜೀವನ"ದ ವ್ಯವಸ್ಥೆ ಇದ್ದ ಬಗೆಗೆ ಇನ್ನೂ ದಾಖಲಾತಿಗಳು ಲಭ್ಯವಾಗಿಲ್ಲ. ಹಾಗಾದರೆ ಇಷ್ಟೊಂದು ಭೂಮಾತಿಭೂಮವಾಗಿರುವ ಅವಕಾಶ ವ್ಯಾಪ್ತಿಯಲ್ಲಿ ಈ ಭೂಮಿಯ ನಿವಾಸಿಯಾಗಿರುವ ಮಾನವನು ಇಷ್ಟೊಂದು ಏಕಾಕಿಯೇ? ಎನ್ನುವ ಅಪರೂಪದ ಪ್ರಶ್ನೆ ಮೂಡುತ್ತದೆ. ಇದು ಈ ರೀತಿ ಇರಲಿಕ್ಕಿಲ್ಲ ಎನ್ನುವದನ್ನು 'ಅವತಾರ'ದ ಘಟನೆಗಳು ಆಶಾದಾಯಕವಾದ ಕಿರಣಗಳನ್ನು ತೋರಿಸುತ್ತಿವೆ. ಇಲ್ಲಿಯವರೆಗೂ 'ಅವತಾರ'ವೆಂದು ಆರಾಧಿಸಲ್ಪಡುತ್ತಿರುವದು, ಆ ಊರ್ಧ್ವಾತಿ ಊರ್ಧ್ವದಿಂದ ಅವತರಣಗೊಂಡು ಬರುವ ದೈವೀ ಸ್ವರೂಪವೇ ಆಗಿದೆ. ಅಂದರೆ ಆ ಪರಮೋಚ್ಚ ತಾಣದಲ್ಲಿ–ಪರಾಕಾಶದಲ್ಲಿ– ಮಾನವನ ಮನೋಚೇತನಕ್ಕೆ ಅತ್ಯಪೂರ್ವವಾಗಿ ಕಾಣುತ್ತಿರುವ ಮತ್ತು ಮಾನವನೂ ಸಹಿತ ಅದನ್ನೇ ಪಡೆಯಬೇಕೆನ್ನುವ ಅಭೀಪ್ಸೆಯನ್ನು ಹುಟ್ಟು ಹಾಕಿದೆ. ಈ ಅಭೀಪ್ಸೆಯ ಕಾರಣದಿಂದಾಗಿ ಪ್ರಾರಂಭಗೊಂಡ ಚಲನೆಯು– ನಿಯತಿಯ ಆಣತಿಯಂತೆಯೇ– ಪೂರ್ಣತೆಯತ್ತಲೇ ಪ್ರಜ್ಞಾಪಥವನ್ನು ನಿರ್ಮಿಸಿಕೊಂಡಿದೆ.

ಮಾನವನ ಭೌಗೋಳಿಕ ನೆಲೆಯಲ್ಲಿಯೇ, ಪ್ರಾಕೃತಿಕ ಘಟನಾವಳಿಗಳಲ್ಲಿಯೇ ರೂಪುಗೊಂಡ ವಸ್ತು–ವಿಷಯಗಳ ಮೂಲಕವೇ ಸಾಕಾರಗೊಂಡು, ಅವತಾರದ ಹಂತಕ್ಕೆ ಆರಾಧಿಸಲ್ಪಡುತ್ತಿರುವ ಪರಮ ಶಕ್ತಿಗಳ ಅವತರಣದ ಸರಣಿಗಳ ವಿವರಗಳೆಲ್ಲವೂ ನಮಗೆ ಲಭ್ಯವಿವೆ. ಖಭೌತೀಯವಾಗಿಯೂ ಇಂತಹ ಘಟನೆಗಳು ಘಟಿಸಲು ಅವಶ್ಯವಿರುವ ಸೂಕ್ತ ವಾತಾವರಣದ ನಿರ್ಮಾಣದ ಕುರಿತೂ ಮಾಹಿತಿಗಳು ನಮ್ಮ ಸ್ಮೃತಿಕೋಶದಲ್ಲಿ ಸ್ಥಿತವಾಗಿ, ಶ್ರುತಿಗೊಂಡು ಅದರ ಮೂಲಕ ಸ್ಪಂದಗೊಂಡು, ಹೃದಯದಲ್ಲಿ ಸ್ಥಾನ ಪಡೆದು ಈಗಲೂ ಉಸಿರಾಡುತ್ತಿವೆ.

ಭೂಬದುಕಿನ ಆಕರ್ಷಣೆಯು ಮಾನವನ ಊರ್ಧ್ವಮುಖೀ ಪ್ರಗತಿಯನ್ನು ನಿಯಂತ್ರಿಸುತ್ತಿದೆಯೇ ಅಥವಾ ನಿರ್ಬಂಧಿಸುತ್ತಿದೆಯೇ ಎಂದು ಸೂಕ್ಷ್ಮವಾಗಿ ವಿಶ್ಲೇಷಿಸಿದಾಗ, ಇಲ್ಲಿ ಮಾನವನು ತನ್ನನ್ನು ತಾನೇ ನಿರ್ಬಂಧದ ಹಂತದಲ್ಲಿ ಇರಿಸಿಕೊಂಡಿರುವ ಸಂಗತಿಗಳೇ ಗೋಚರಿಸುತ್ತಿವೆ. ಮಾನವನ ವಿಕಾಸದ ಮೂಲಕ ದೈವತ್ವವನ್ನು ಪಡೆದುಕೊಳ್ಳುವ ಪಥದಲ್ಲಿ, ಇರುವ ಹಂತಗಳನ್ನು ನಿಯತಿ ನಿರ್ಧರಿಸುತ್ತಿದೆಯೇ? ಅಥವಾ ಮಾನವನ ಸದ್ಯದ ಗ್ರಹಿಕಾ ಸಾಮರ್ಥ್ಯಕ್ಕೆ ಆ

ಪರಮೋಚ್ಚವಾಗಿರುವ ಪ್ರಗಾಢವಾಗಿರುವ ಅನೂಹ್ಯವನ್ನು ಗ್ರಹಿಸಿಕೊಳ್ಳುವ ಸಾಮರ್ಥ್ಯವನ್ನು ಹಂತ ಹಂತವಾಗಿ ಪಡೆದುಕೊಳ್ಳುತ್ತಿದೆಯೇ? ಎನ್ನುವದನ್ನು ಅರಿತುಕೊಂಡರೆ, ಈ ಅವತಾರಗಳ ಅಂತರಾಳ ತನ್ನ ರಹಸ್ಯವನ್ನು ಬಿಟ್ಟುಕೊಡುತ್ತದೆ.

ಶ್ರೀ ಅರವಿಂದರು, ಈ ಅವತರಣದ ಸ್ವರೂಪದ ಸಂಪೂರ್ಣ ಗತಿಯನ್ನು –ಪ್ರಗತಿಯನ್ನು ವಿಶ್ಲೇಷಿಸುವ ಮೂಲಕ, ಮುಂದಿನ ಪ್ರಗತಿಯ ಕುರಿತೂ ದೃಷ್ಟಾರರಾಗಿ ಅಭಿವ್ಯಕ್ತಗೊಳಿಸಿದ್ದಾರೆ. ಆ ವಿಶ್ವಶಕ್ತಿಯು ಅವತರಣಗೊಂಡು ಬಂದಾಗಲೆಲ್ಲಾ ಮಾನವನು ಭಕ್ತಿಯ ಪರಾಕಾಷ್ಠೆಯಲ್ಲಿ ತನ್ನನ್ನು ಸಂಪೂರ್ಣ ಶರಣಾಗಿಸಿಕೊಂಡು, ಆ ಶಕ್ತಿಯ ಆರಾಧನೆಯಲ್ಲಿ ತನ್ಮಯತೆಯಲ್ಲಿ ತನ್ನನ್ನೆ ಮರೆತು ಬಿಡುತ್ತಾನೆ. ಆದರೆ ಈ ರೀತಿಯ “ಶರಣಾಗತಿ”ಯು ಮಾನವ ಪ್ರಜ್ಞೆಯ ವಿಕಾಸಕ್ಕೆ ಅಡೆತಡೆಯನ್ನು ಉಂಟುಮಾಡುತ್ತಿದೆ ಎನ್ನುವದು ಒಂದು ಗಮನಾರ್ಹ–ವಾಗಿರುವ ಸಂಗತಿಯಾಗಿದೆ. ತಾಯಿಯನ್ನು ಆಧರಿಸಿಯೇ ಸದಾಕಾಲಕ್ಕೂ ಯಾವ ಮಗುವೂ ಮುಂದುವರೆಯಲು ಸಾಧ್ಯವಿಲ್ಲ; ಕೆಲವೊಂದು ಹಂತದ ನಂತರ ತಾಯಿಯನ್ನು ಆದರಿಸಿ, ತನ್ನದೇ ಗತಿಯಲ್ಲಿ ಮುಂದೆ ಸಾಗಬೇಕಾದ ಅನಿವಾರ್ಯತೆಯು ಮಗುವಿಗೆ ಇರುತ್ತದೆ. ಇದು ಜ್ಞಾನದ ಮಾರ್ಗವನ್ನು ವಿಸ್ತಾರಗೊಳಿಸುತ್ತಿದ್ದು, ಪ್ರಜ್ಞಾ ವಿಕಾಸದಲ್ಲಿ ಅತ್ಯಂತ ಪ್ರಮುಖ ಪಾತ್ರವಾಗಿರುತ್ತದೆ.

ಇದು ಒಂದೇ ಕ್ಷಣದಲ್ಲಿ ಘಟಿಸುವ ಪವಾಡವಲ್ಲ. ಹೀಗಾಗಿ ಶ್ರೀ ಅರವಿಂದರು ಈ ನೂತನ ಮಾರ್ಗದ ಕುರಿತು ಬೆಳಕು ಚೆಲ್ಲುತ್ತಿದ್ದರೆ, ಅಲ್ಲಿ ಸದಾ ಸಹಾಯಕ್ಕಾಗಿ ವಾತ್ಸಲ್ಯದುಂಬಿದ ಶ್ರೀಮಾತೆಯ ಅವಶ್ಯಕತೆ ಇನ್ನೂ ಇದೆ ಎಂದಾಗುತ್ತದೆ. ಅದಕ್ಕಾಗಿಯೇ ಶ್ರೀಮಾತೆಯವರ ಅವತಾರದ ಆಂತರ್ಯವನ್ನು ಶ್ರೀ ಅರವಿಂದರು ತಿಳಿಸುತ್ತಾರೆ. ಮೊದಲ ಹೆಜ್ಜೆಯ ನಂತರ ತಾಯಿಯೂ ಸಹಿತ ಮಗುವನ್ನು ನಡೆಯಲು ಬಿಟ್ಟು, ಆಸರೆಗೆ ಕೇವಲ ಕಿರುಬೆರಳನ್ನು ಮಾತ್ರ ಹಿಡಿದುಕೊಳ್ಳಲು ಆಸ್ಪದ ಕೊಡುವಂತೆ, ಇಲ್ಲಿ ಶ್ರೀಮಾತೆಯ ವಾತ್ಸಲ್ಯಪೂರಿತ ರಕ್ಷಾಭಾವವಿರುತ್ತದೆ. ಅದರ ವಿಶ್ವಾಸದಲ್ಲಿಯೇ ಮುಂದೆ ಸಾಗಲು ಜ್ಞಾನ ಮಾರ್ಗದ ಪಥವನ್ನು ‘ಕಾಲ’ವು ಆಯಾ ಅವತಾರಗಳ ಮೂಲಕ ಸೂಕ್ತಗೊಳಿಸಿದೆ.

ಅವತರಣಗೊಂಡು ಬರುವಲ್ಲಿ ಇರುವ ವೇಗವು ವೇಗೋತ್ಕರ್ಷದಿಂದ ಮತ್ತೂ ಮತ್ತೂ ವೃದ್ಧಿಸುತ್ತಾ ಹೋಗುತ್ತದೆ. ಅದರ ಆ ವೇಗೋತ್ಕರ್ಷದ ಪರಮಾವಧಿಯನ್ನು ಶಿವನ ಜಟಾಶಕ್ತಿ ಮಾತ್ರ ತಡೆದುಕೊಳ್ಳುವದು. ಇದಕ್ಕೆ ಪರ್ಯಾಯವಾಗಿ, ಅವರೋಹಣದ ಪ್ರಕ್ರಿಯೆಯು ಸಂಪೂರ್ಣವಾಗಿ ತನ್ನ ನಿಯತಿ ನಿರ್ಧಾರಿತ ಕಾರ್ಯವನ್ನು ಪೂರೈಸಿಯಾಗಿದೆ. ಇನ್ನೇನಿದ್ದರೂ ಮುಂದಿನ ಚಲನೆ ಎಂದರೆ

ಆರೋಹಣ. ಇಲ್ಲಿ ಎಷ್ಟೇ ವೇಗವಿದ್ದರೂ ವಿಮೋಚನಾ ವೇಗವು ನಿರ್ಧಾರವಾಗಬೇಕಿದೆ. ಇಲ್ಲದಿದ್ದಲ್ಲಿ, ಭೂಮಿಯ ಗುರುತ್ವವೇ ಆಕರ್ಷಣೆಯಾಗಿ ಬಂಧನಕಾರಿಯಾಗಿ ಹಿಡಿದಿಟ್ಟುಕೊಳ್ಳುತ್ತಿದೆ. ಈ ಸವಾಲನ್ನು ಯಶಸ್ವಿಯಾಗಿ ನಿಭಾಯಿಸುವ 'ಅವತಾರ'ದ ಕುರಿತು ಶ್ರೀ ಅರವಿಂದರು ಶ್ರೀಮಾತೆಯವರ ಮೂಲಕ, ಮತ್ತು ಶ್ರೀಮಾತೆಯವರು ಶ್ರೀ ಅರವಿಂದರ ಮೂಲಕ ಪ್ರಸ್ತುಪಡಿಸುದ್ದಾರೆ. ಇವರಿಬ್ಬರೂ ಒಂದೇ ಶಕ್ತಿಯ ಎರಡು ಆಯಾಮಗಳು. ಇದರ ರಹಸ್ಯವನ್ನು ಮಾನವ ಕುಲವು ಅರಿತುಕೊಳ್ಳಬೇಕಾಗಿದೆ. ಆರೋಹಣದ ಪ್ರಕ್ರಿಯೆಯಲ್ಲಿ–ಪಥದಲ್ಲಿ ಬರುವ ಎಲ್ಲ ಸಂಗತಿಗಳೂ ನೂತನವೇ ಆಗಿರುತ್ತವೆ. ಅದರಲ್ಲೂ ಈ ಆರೋಹಣವೂ ಸಹಿತ ನಿಯತಿಯ ಪ್ರಕಾರ ಮಾನವ ಕುಲಕ್ಕೆ ನೂತನವೇ ಆಗಿದೆ.

ಈ ಶತಮಾನದಲ್ಲಿ ಮಾನವನ ಪ್ರಜ್ಞೆಯ ಪ್ರಗತಿಯಂತೂ ವೇಗೋತ್ಕರ್ಷದ ಪರಮೋಚ್ಚ ಸ್ಥಿತಿಯಲ್ಲಿ ಇದೆ. ಆಕಾಶದಲ್ಲಿ ಇತ್ತಿಚೆಗೆ ನಡೆದಿರುವ ಸಂಶೋಧನೆಗಳು, ಬೇರೆ ಬೇರೆ ಗ್ರಹಗಳಲ್ಲೂ–ಆಕಾಶಕಾಯಗಳಲ್ಲೂ– ಜೀವ ಜಾಲ ಇದೆ ಎನ್ನುವದಕ್ಕೆ ಪುರಾವೆ ಒದಗಿಸುತ್ತಿವೆ. ಮಂಗಳ ಗ್ರಹದ ಮೇಲೆ ನಡೆದ ಶೋಧನಾ ವರದಿಗಳಂತೂ ನೂತನ ಆವಿಷ್ಕಾರಕ್ಕೆ –ಅಥವಾ ಮಾನವನು ಏಕಾಕಿಯಲ್ಲ ಎನ್ನುವದಕ್ಕೆ– ಸಮರ್ಥಶೀಲ ಪುರಾವೆಗಳನ್ನು ನೀಡುತ್ತಿವೆ. ಉಪನಿಷತ್ತುಗಳ ಮೂಲಕ ಪ್ರಾಚೀನ ಚಿಂತನಾ ವಿಧಾನಗಳು ಹೇಗೆ ಆಕಾಶೀಯ ಸಂಗತಿಗಳನ್ನು ಸ್ಪಂದನಗೊಳಿಸಿಕೊಂಡಿತ್ತೋ, ಇದೀಗ ವಿಜ್ಞಾನದ ನವನವೀನ ಆವಿಷ್ಕಾರಗಳ ಮುಖಾಂತರ, ಆಧುನಿಕ ಮಾನವನು ಈ ಆಕಾಶ–ಜೀವನದ ಸಂಗತಿಗಳ ಜೊತೆಗೆ ಸಮಸ್ಪಂದಿಯಾಗುತ್ತಿದ್ದಾನೆ.

ಇದರ ಕುರಿತು ಮಾರ್ಗವನ್ನು ನಿಮಿಸುತ್ತಿರುವದೇ ಈಗಿನ ಅವತಾರದ ಅಂತರಾಳವಾಗಿದೆ. ಹೀಗಾಗಿಯೇ ಇದು ಸದಾ ಅರೋಹಣದ ಸಂಗತಿಗಳಲ್ಲಿಯೇ ಪ್ರಗತಿಗೊಳ್ಳುತ್ತಲಿದೆ. ಇಂತಹ ಪ್ರಗತಿಯು ಸದ್ಯ ಲಭ್ಯವಿರುವ ಭೂಬದುಕನ್ನೂ ಸಹಿತ ವಿಕಾಸದ ಹಾದಿಯಲ್ಲಿಯೇ ಕೊಂಡೊಯ್ಯುವಂತೆ ಸಾಧನೆಗಳು ಇರಬೇಕಾಗಿದೆ ಎನ್ನುವದನ್ನು ಶ್ರೀಮಾತೆಯವರ ಅವತಾರದ ಮೂಲಕ ಸ್ಪಂದನಗೊಳ್ಳಬಹುದಾಗಿದೆ. ವಿಕಾಸದ ಪರಮೋಚ್ಚವೆಂದರೆ, ಇನ್ನೂ ಅಪರಿಪೂರ್ಣತೆಯಲ್ಲಿ ಇರುವ ಅಭೀಪ್ಸೆ–ಯೊಂದು ಪರಿಪೂರ್ಣತೆಯತ್ತ ಸಾಗಲು ದಾಪುಗಾಲು ಹಾಕಿದಂತೆ ಎನ್ನುವದನ್ನು, ಈ ಯುಗಳ ಶಕ್ತಿಗಳ ಅವತಾರದ ಸ್ವರೂಪವಿದೆ. ಇದರ ಕುರಿತು ಅಧ್ಯಯನದ ಮೂಲಕ ಹಲವು ಆಯಾಮಗಳನ್ನೂ ಸೃಷ್ಟಿಸುವ ಎಲ್ಲ ಅವಕಾಶವೂ ಮಾನವನ ಬದುಕಿಗೆ ಇದೆ ಎನ್ನುವದೇ ಈ ನೂತನ ಅವತಾರದ ಅಂತರಾಳವಾಗಿದೆ. [ಪಿಪಿಕೆ]



ನಾವು ಯಾರನ್ನು ಶ್ರೀಮಾತೆಯವರೆಂದು ಪೂಜಿಸುತ್ತೇವೆಯೊ, ಅವರು ಏಕವಾಗಿದ್ದರೂ ಬಹು–ಬಾಹುವಾಗಿರುವ (ಬಹುಮುಖ ಆಯಾಮವಾಗಿರುವ) ದಿವ್ಯ ಪ್ರಜ್ಞಾಶಕ್ತಿಯಾಗಿದ್ದಾರೆ, ಅವರ ಚಲನೆಯನ್ನು ಅನುಸರಿಸುವುದು ಕ್ಷಿಪ್ರ ಮನಸ್ಸಿಗೂ ಮತ್ತು ಅತ್ಯಂತ ಮುಕ್ತ ಹಾಗೂ ವ್ಯಾಪಕವಾದ ಬುದ್ಧಿಮತ್ತೆಗೂ ಸಹ ಅಸಾಧ್ಯ. ಶ್ರೀಮಾತೆಯವರು ಸರ್ವೋಚ್ಚ ಪ್ರಜ್ಞೆಯಾಗಿದ್ದಾರೆ ಹಾಗೂ ಶಕ್ತಿಯಾಗಿದ್ದಾರೆ ಮತ್ತು ಅವರು ಸೃಷ್ಟಿಸಿರುವ ಎಲ್ಲದರ ಮೇಲೆ, ಅತಿ ಎತ್ತರದಲ್ಲಿದ್ದಾರೆ. ಅವರ ಮೈದಾಳುವಿಕೆಯ ಮುಖಾಂತರ ನಿರ್ಮಿತಿಗೊಂಡಿರುವ ಅವರ ಪಥಗಳನ್ನು ಕೊಂಚವಾದರೂ ಕಾಣಬಹುದು ಮತ್ತು ಅನುಭವಿಸಬಹುದು. ಅವರ ಮಾರ್ಗಗಳು ಹೆಚ್ಚು ಸ್ಪಂದನಗೊಳ್ಳುವಂತಿವೆ, ಯಾಕೆಂದರೆ, ಅವಳು ತನ್ನ ಜೀವಿಗಳಲ್ಲಿ ಯಾರಿಗೆ ವ್ಯಕ್ತವಾಗಲೆಂದು ಸಮ್ಮತಿಸುತ್ತಾಳೊ, ಅವರಲ್ಲಿ ಹೆಚ್ಚು ನಿಗದಿಗೊಳಿಸಲ್ಪಟ್ಟ ಹಾಗೂ ಪರಿಮಿತ ಮನಸ್ಥಿತಿಯು ಮತ್ತು ದೇವತೆಯ ಕ್ರಿಯೆಯು ರೂಪಗೊಳ್ಳುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/2 – ಶ್ರೀ ಅರವಿಂದರು**

**ಅನು: ಡಾ॥ ಮಹಾದೇವ ಸಕ್ರಿ, ವಿಜಯಪುರ**

# ಶ್ರೀಮಾತೆ; ಶ್ರೀ ಅರವಿಂದರ ಅಭಿವ್ಯಕ್ತಿ

**– ಅನುವಾದ: ಡಾ॥ ಮಹಾದೇವ ಸಕ್ರಿ, ವಿಜಯಪುರ**

## ಜೀವನ ಪಥದಲ್ಲಿ ಸಾಗಲು ಬೇಕಾದ ಎರಡು ಸಂಗತಿಗಳು

ಎಲ್ಲ ಭಯ, ಆಪತ್ತು ಮತ್ತು ವಿಪತ್ತಿನ ವಿರುದ್ಧ ಶಸ್ತ್ರಸಜ್ಜಿತವಾಗಿ ಜೀವನದ ಮುಖಾಂತರ ಸಾಗಲು ಯಾವಾಗಲೂ ಜೊತೆಯಾಗಿ ಹೋಗುವ ಎರಡು ಸಂಗತಿಗಳು ಮಾತ್ರ ಸಾಕು – ದಿವ್ಯಮಾತೆಯವರ ಅನುಗ್ರಹ ಮತ್ತು ಶ್ರದ್ಧೆ, ಪ್ರಾಮಾಣಿಕತೆ ಮತ್ತು ಶರಣಾಗತಿಗಳಿಂದ ಮಾಡಿದಂಥ ನಿನ್ನಲ್ಲಿಯ ಆಂತರಿಕ ಸ್ಥಿತಿ. ನಿನ್ನ ಶ್ರದ್ಧೆಯು ಶುದ್ಧವಾಗಿರಲಿ, ನಿರ್ಭೀತ ಮತ್ತು ಪರಿಪೂರ್ಣವಾಗಿರಲಿ. ಮನೋಮಯದಲ್ಲಿನ ಅಹಂಕಾರಯುಕ್ತ ನಂಬಿಕೆ, ಮಹದಾಸೆ, ಹೆಮ್ಮೆ, ಪ್ರತಿಷ್ಠೆ, ಮನೋದಾರ್ಷ್ಟ್ಯ, ಮೊಂಡುಚೇತನ, ವೈಯಕ್ತಿಕ ಬೇಡಿಕೆ, ನಿಮ್ಮ ಸ್ವಭಾವದ ಕ್ಷುಲ್ಲಕ ತೃಪ್ತಿಗಳಿಗಾಗಿ ಇಚ್ಛೆಗಳಿಂದ ಕಳಂಕಿತವಾದ ಪ್ರಾಣಪುರುಷನು ಸ್ವರ್ಗದೆಡೆ, ಮೇಲೆ ಕಾಂತಿಗೊಳ್ಳಲಾರದಂಥ ಅಲ್ಪ ಹಾಗೂ ಹೊಗೆಯಿಂದ ಕೂಡಿದ, ಮಂಕಾದ ಪ್ರಕಾಶವಾಗಿದೆ. ದೈವೀ ಕಾರ್ಯಕ್ಕಾಗಿ ಮತ್ತು ದೈವೀ ಪ್ರಕಟಣೆಗಾಗಿ ಕೊಡಲ್ಪಟ್ಟ ನಿಮ್ಮ ಜೀವನವನ್ನು ಆದರಿಸಿರಿ. ಶುದ್ಧತೆ, ಬಲ, ಬೆಳಕು, ವಿಶಾಲತೆ, ಸ್ಥಿರತೆ, ದೈವೀ ಪ್ರಜ್ಞೆಯ ಆನಂದ ಮತ್ತು ನಿನ್ನ ಜೀವನ, ಮನಸ್ಸು ದೇಹವನ್ನು ಪರಿವರ್ತಿಸುವ ಹಾಗೂ ಪರಿಪೂರ್ಣಗೊಳಿಸುವ ದೈವೀ ಪ್ರಜ್ಞೆಯ ಆಗ್ರಹದ ಹೊರತು ಬೇರೆ ಏನನ್ನೂ ಬಯಸಬೇಡ. ದೇವರನ್ನು, ಆಧ್ಯಾತ್ಮಿಕ ಹಾಗೂ ಅತಿಮಾನಸ ಸತ್ಯ, ಪ್ರಥ್ವಿಯ ಮೇಲೆ ನಿನ್ನಲ್ಲಿ ಆಯ್ಕೆ ಮಾಡಲ್ಪಟ್ಟ ಎಲ್ಲರಲ್ಲೂ ಅದರ ಸಾಕ್ಷಾತ್ಕಾರ, ಮತ್ತು ಅದರ ಸೃಷ್ಟಿಗಾಗಿ ಮತ್ತು ವಿರೋಧಿ ಶಕ್ತಿಗಳ ಮೇಲೆ ಅದರ ಜಯದ ಹೊರತು ಬೇರೆ ಏನನ್ನೂ ಕೇಳಬೇಡ.

ನಿಮ್ಮ ಪ್ರಾಮಾಣಿಕತೆ ಮತ್ತು ಸಮರ್ಪಣೆಗಳು ಶುದ್ಧವಾಗಿರಲಿ ಹಾಗೂ ಪೂರ್ಣವಾಗಿರಲಿ. ನಿಮ್ಮನ್ನು ನೀವು ಸಮರ್ಪಿಸಿಕೊಳ್ಳುವಾಗ, ಪೂರ್ಣವಾಗಿ ಅರ್ಪಿಸಿಕೊಳ್ಳಿ, ಬೇಡಿಕೆ ಇಲ್ಲದೆ, ಶರತ್ತಿಲ್ಲದೆ, ಸಂಕೋಚವಿಲ್ಲದೆ, ನಿಮ್ಮಲ್ಲಿಯ ಎಲ್ಲವೂ ದಿವ್ಯಮಾತೆಗೆ ಸಂಬಂಧಿಸಿದಂತೆ ಮತ್ತು ತನ್ನತನಕ್ಕೆ ಅಥವಾ ಇನ್ನಾವುದೇ ಪ್ರಾಬಲ್ಯಕ್ಕೆ ಕೊಡಲು ಏನೂ ಉಳಿಯದಂತೆ ಪೂರ್ಣವಾಗಿ ಅರ್ಪಿಸಿಕೊಳ್ಳಿ.

ನಿಮ್ಮ ನಂಬಿಕೆ, ಪ್ರಾಮಾಣಿಕತೆ ಮತ್ತು ಸಮರ್ಪಣೆಗಳು ಹೆಚ್ಚು ಪೂರ್ಣವಾದಂತೆ, ಅನುಗ್ರಹ ಮತ್ತು ರಕ್ಷಣೆ ಹೆಚ್ಚು ನಿಮ್ಮೊಡನಿರುತ್ತದೆ. ದಿವ್ಯಮಾತೆಯವರ ಅನುಗ್ರಹ

ಮತ್ತು ರಕ್ಷಣೆ ನಿಮ್ಮೊಂದಿಗಿದ್ದಾಗ, ನಿಮ್ಮ ತಂಟೆಗೆ ಬರಲು ಯಾರಿಗೆ ಸಾಧ್ಯ ಅಥವಾ ನೀವು ಯಾರಿಗೆ ಹೆದರಬೇಕು? ಸ್ವಲ್ಪ ಭಯವಿದ್ದರೂ, ಅದು ನಿಮ್ಮನ್ನು ಎಲ್ಲ ತೊಂದರೆಗಳ, ಅಡೆತಡೆಗಳ ಮತ್ತು ಅಪಾಯಗಳ ಮುಖಾಂತರ ಕೊಂಡೊಯ್ಯುತ್ತದೆ; ತನ್ನ ಪೂರ್ಣ ಉಪಸ್ಥಿತಿಯಿಂದ ಆವೃತಗೊಂಡು ಶ್ರೀಮಾತೆಯವರ ಎಲ್ಲ ಆಪತ್ತುಗಳ ಬಗ್ಗೆ ಅಸಡ್ಡೆ ಹೊಂದಿದ, ಎಷ್ಟೇ ಪ್ರಭಾವಿಯಾದ ಯಾವುದೇ ಹಗೆತನದಿಂದ ಬಾಧಿತವಾಗದ (ಈ ಜಗತ್ತಿನಿಂದಾಗಲಿ ಅಥವಾ ಕಾಣದ ಬೇರೆ ಜಗತ್ತಿನಿಂದಾಗಲಿ) ಪಥದ ಮೇಲೆ ನಿರ್ಭೀತಿಯಿಂದ ಸಾಗಬಹುದು. ಅದರ ಸ್ಪರ್ಶವು ಎಲ್ಲ ಪೀಡೆಗಳನ್ನು ಅವಕಾಶಗಳನ್ನಾಗಿ, ಅಸಫಲತೆಯನ್ನು ಸಫಲತೆಯಲ್ಲಿ ಮತ್ತು ದುರ್ಬಲತೆಯನ್ನು ಎಡವದ ಸತ್ವಗಳಲ್ಲಿ ಪರಿವರ್ತಿಸಬಹುದು. ದಿವ್ಯಮಾತೆಯವರ ಅನುಗ್ರಹವು ಆ ಮಹಾ ಚೈತನ್ಯದ ಅನುಮೋದನೆ–ಯಾಗಿರುವದರಿಂದ, ಇಂದು ಅಥವಾ ನಾಳೆ ಅದರ ಪರಿಣಾಮವು ನಿಶ್ಚಿತವಾಗಿದೆ, ತಪ್ಪಿಸಲಾಗದ ಹಾಗೂ ಎದುರಿಸಲಾಗದ ಕಟ್ಟಳೆಯಾಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/8–9**

**ಪರಿವರ್ತನೆಗಾಗಿ ಬೇಕಾದ ಮೂರು ಸಂಗತಿಗಳು**

ಈ ಪರಿವರ್ತನೆಯನ್ನು ನೀನು ಬಯಸುವುದಾದರೆ, ಯಾವುದೇ ಅಡ್ಡಿ ಇಲ್ಲದೆ, ಪ್ರತಿರೋಧವಿಲ್ಲದೆ ನಿನ್ನನ್ನು ನೀನು ಶ್ರೀಮಾತೆಯವರ ಕರಗಳಲ್ಲಿ ಮತ್ತು ಅವರ ಪ್ರಭಾವಗಳಲ್ಲಿ ಹಾಕಿಕೊ, ಮತ್ತು ಅವರು ತಮ್ಮ ಕಾರ್ಯವನ್ನು ನಿನ್ನಲ್ಲಿ ಅಡೆತಡೆಯಿಲ್ಲದೆ ಮಾಡಲು ಬಿಡು. ಅರಿವು, ಮೃದುತ್ವ, ಸಂಪೂರ್ಣವಾದ ಸಮರ್ಪಣೆ ಈ ಮೂರು ಸಂಗತಿಗಳು ನಿನ್ನಲ್ಲಿ ಇರಲೇಬೇಕು. ನಿನ್ನ ಮಾನಸದಲ್ಲಿ ಹಾಗೂ ಆತ್ಮದಲ್ಲಿ, ಹೃದಯದಲ್ಲಿ ಹಾಗೂ ಜೀವನದಲ್ಲಿ ಮತ್ತು ನಿನ್ನ ದೇಹದ ಪ್ರತಿ ಕೋಶಗಳಲ್ಲಿ ಎಚ್ಚರವುಳ್ಳವನಾಗಿರಬೇಕು, ಶ್ರೀಮಾತೆಯವರ ಮತ್ತು ಅವರ ಪ್ರಭಾವಗಳ ಹಾಗೂ ಅವುಗಳ ಚಟುವಟಿಕೆಯ ಬಗ್ಗೆ ಜಾಗೃತವಾಗಿರು; ನಿನ್ನ ಅಸ್ಪಷ್ಟತೆಯಲ್ಲಿ ಮತ್ತು ನಿನ್ನ ಅಜಾಗೃತ ಭಾಗಗಳಲ್ಲಿ ಹಾಗೂ ಕ್ಷಣಗಳಲ್ಲಿ ಸಹ ಅವರು ಕಾರ್ಯ ಮಾಡಬಹುದು ಮತ್ತು ಮಾಡುತ್ತಾರೆ, ನೀವು ಅವರೊಡನೆ ಜಾಗೃತವಾಗಿದ್ದಾಗಿನ ಹಾಗೂ ಸಂಭಾಷಿಸುವಾಗಿನ ಸಂಗತಿಯಂತೆ ಇದು ಅಲ್ಲ. ಅವರ ಸ್ಪರ್ಶಕ್ಕೆ ನಿನ್ನ ಸಹಜ ಗುಣವು ಮೃದುವಾಗಿರಬೇಕು, – ಸ್ವಾವಲಂಬಿ ತಿಳಿಗೇಡಿ ಮನಸ್ಸು ಪ್ರಶ್ನೆ ಮಾಡುವಂತೆ, ಸಂದೇಹಿಸುವಂತೆ, ಕಲಹಮಾಡುವಂತೆ

ಪ್ರಶ್ನೆಯನ್ನು ಮಾಡುವುದಲ್ಲ ಮತ್ತು ಅದು ತನ್ನ ಜ್ಞಾನೋದಯದ ಹಾಗೂ ಬದಲಾವಣೆಯ ಶತ್ರುವಾಗಿದೆ; ಮನುಷ್ಯನಲ್ಲಿನ ಪ್ರಾಣವು ಒತ್ತಿ ಹೇಳುವಂತೆ ಮತ್ತು ತನ್ನ ಮೊಂಡು ಬಯಕೆಗಳನ್ನು ಹಾಗೂ ಮನಸ್ತಾಪಗಳು ಪ್ರತಿಯೊಂದು ದೈವೀ ಪ್ರಭಾವವನ್ನು ನಿರಂತರವಾಗಿ ವಿರೋಧಿಸುವಂತೆ ತನ್ನ ಸ್ವಂತ ಚಲನೆಗಳ ಮೇಲೆ ಒತ್ತಾಯ ಮಾಡುವುದಿಲ್ಲ; ಮನುಷ್ಯನ ಭೌತಿಕ ಪ್ರಜ್ಞೆಯು ತಡೆಯುವಂತೆ ತಡೆಯೊಡ್ಡುವುದಿಲ್ಲ, ಮತ್ತು ಅದು ಅಶಕ್ತತೆಯಲ್ಲಿ, ಜಡತ್ವದಲ್ಲಿ ಮತ್ತು ತಮಸ್ಸಿನಲ್ಲಿ ಬೇರೂರಿದೆ, ಅಲ್ಪದಲ್ಲಿ ಹಾಗೂ ಅಂಧಕಾರದಲ್ಲಿ ತನ್ನ ತೃಪ್ತಿಗಳಿಗೆ ಅಂಟಿಕೊಳ್ಳುತ್ತ ತನ್ನ ಆತ್ಮಶೂನ್ಯ ಕಾರ್ಯವನ್ನು ಅಥವಾ ತನ್ನ ಸೋಮಾರಿತನವನ್ನು ಅಥವಾ ತನ್ನ ನಿಷ್ಕ್ರಿಯತೆಯನ್ನು ತೊಂದರೆ ಮಾಡುವಂಥ ಪ್ರತಿ ಸ್ಪರ್ಶದ ವಿರುದ್ಧ ಕೂಗುತ್ತದೆ. ನಿನ್ನ ಆಂತರಿಕ ಹಾಗೂ ಬಾಹ್ಯ ಪುರುಷನ ಸಂಪೂರ್ಣ ಶರಣಾಗತಿಯು ಈ ಮೃದುತ್ವವನ್ನು ನಿನ್ನ ಸಹಜ ಗುಣದ ಎಲ್ಲ ಭಾಗಗಳಲ್ಲಿ ತರುತ್ತದೆ; ವಿವೇಕ ಹಾಗೂ ಬೆಳಕಿಗೆ, ಶಕ್ತಿಗೆ, ಮಾಧುರ್ಯಕ್ಕೆ ಹಾಗೂ ಸೌಂದರ್ಯಕ್ಕೆ ಮೇಲಿನಿಂದ ಕೆಳಗೆ ಹರಿದು ಬರುವ ಪರಿಪೂರ್ಣತೆಗೆ ನಿರಂತರವಾಗಿ ತೆರೆದುಕೊಳ್ಳುವುದರಿಂದ ಪ್ರಜ್ಞೆಯು ನಿನ್ನಲ್ಲಿ ಜಾಗೃತಗೊಳ್ಳುತ್ತದೆ. ದೇಹವೂ ಸಹ ಜಾಗೃತಗೊಳ್ಳುತ್ತದೆ ಮತ್ತು ಅತಿಮಾನಸ ವಿಶಿಷ್ಟ ಪ್ರಜ್ಞಾ ಶಕ್ತಿಗೆ ಎಂದಿಗೂ ಗುರುತಿಸಲಾಗದ ಪ್ರಜ್ಞೆಯೊಂದಿಗೆ ಒಂದಾಗುತ್ತದೆ, ಮೇಲಿನಿಂದ ಹಾಗೂ ಕೆಳಗಿನಿಂದ ಮತ್ತು ಅದರ ಸುತ್ತಲಿನಿಂದ ಹೊರಸೂಸುವ ಅವರ ಎಲ್ಲ ಪ್ರಭಾವಗಳನ್ನು ಅನುಭವಿಸು ಮತ್ತು ಪರಮ ಪ್ರೇಮಕ್ಕೆ ಮತ್ತು ಆನಂದಕ್ಕೆ ಪುಳಕಿತವಾಗು.

**ದಿವ್ಯಮಾತೆಯವರ ಕಾರ್ಯವಿಧಾನಗಳು**

ನಿಮ್ಮ ಎಚ್ಚರಿಕೆಯಲ್ಲಿರಿ, ಮತ್ತು ತನ್ನನ್ನು ಮೀರಿದ ವಿಷಯಗಳನ್ನು ಸಹ ತನ್ನದೇ ಆದ ನಿಯಮಗಳು ಮತ್ತು ಮಾನದಂಡಗಳಿಗೆ, ತನ್ನದೇ ಸಂಕುಚಿತ ತರ್ಕಗಳು ಮತ್ತು ತಪ್ಪು ಅನಿಸಿಕೆಗಳಿಗೆ, ತನ್ನದೇ ತಳವಿಲ್ಲದ ಆಕ್ರಮಣಕಾರಿ ಅಜ್ಞಾನಕ್ಕೆ ಮತ್ತು ತನ್ನದೇ ಅಲ್ಪ ಆತ್ಮವಿಶ್ವಾಸದ ಜ್ಞಾನಕ್ಕೆ ಒಳಪಡಿಸಲು ಇಷ್ಟಪಡುವ ನಿಮ್ಮ ಪುಟ್ಟ ಐಹಿಕ ಮನಸ್ಸಿನಿಂದ, ದಿವ್ಯಮಾತೆಯನ್ನು ಅರ್ಥಮಾಡಿಕೊಳ್ಳಲು ಮತ್ತು ನಿರ್ಣಯಿಸಲು ತನ್ನ ಅರ್ಧಬೆಳಗಿದ ಅಸ್ಪಷ್ಟ ಬಂದೀಖಾನೆಯಲ್ಲಿ ಬಂದಿಯಾದ ಮಾನವನ ಮನಸ್ಸು ದಿವ್ಯಶಕ್ತಿಯ ಹೆಜ್ಜೆಗಳ ಬಹುಮುಖ ಸ್ವಾತಂತ್ರ್ಯವನ್ನು ಅನುಸರಿಸುವುದಿಲ್ಲ. ಅವಳ ದೃಷ್ಟಿಯ ತೀವ್ರತೆ ಹಾಗೂ ಸಂಕೀರ್ಣತೆ ಮತ್ತು ಕ್ರಿಯೆಯು, ತನ್ನ ಮುಗ್ಗರಿಸುತ್ತಿರುವ ಗ್ರಹಿಕೆಯನ್ನು ಮೀರುವುದು; ಅವಳ ಚಲನೆಯ

ಕ್ರಮಗಳು ಅದರ ಕ್ರಮಗಳಲ್ಲಿ ಅವಳ ಭಿನ್ನ ಬಹು ವ್ಯಕ್ತಿತ್ವಗಳ ತ್ವರಿತ ಬದಲಾವಣೆಯಿಂದ ಅವಳ ತಾಳಗಳ ರಚಿಸುವಿಕೆಯಿಂದ ಮತ್ತು ತಾಳಗಳ ಮುರಿಯುವಿಕೆಯಿಂದ ಅವಳ ವೇಗೋತ್ಕರ್ಷಗಳಿಂದ ಮತ್ತು ಅವಳ ವೇಗನಿಧಾನಗಳಿಂದ, ಸಮಸ್ಯೆಗಳೊಡನೆ ವ್ಯವಹರಿಸುವ ಅವಳ ವಿಭಿನ್ನ ಮಾರ್ಗಗಳಿಂದ, ಈಗ ಈ ರೇಖೆಯನ್ನು ನಂತರ ಮತ್ತೊಂದನ್ನು, ಅವಳ ಎತ್ತಿಕೊಳ್ಳುವಿಕೆಯಿಂದ ಮತ್ತು ಬೀಳಿಸುವಿಕೆಯಿಂದ ಮತ್ತು ಅವುಗಳನ್ನು ಒಟ್ಟಿಗೆ ಕೂಡಿಸುವಿಕೆಯಿಂದ ದಿಗ್ಭ್ರಮೆಗೊಂಡಾಗ, ಅದು ಸುತ್ತುತ್ತಿರುವಾಗ ಹಾಗೂ ಅಜ್ಞಾನದ ಜಟಿಲತೆಗಳ ಮುಖಾಂತರ ಉನ್ನತ ಬೆಳಕಿಗೆ ಮೇಲೆ ವಿಸ್ತಾರವಾಗುತ್ತಿರುವಾಗ ಪರಮ ಪ್ರಭಾವದ ಮಾರ್ಗವನ್ನು ಅದು ಕಂಡುಹಿಡಿಯಲಾರದು. ನಿಮ್ಮಾತ್ಮವನ್ನು ಅವಳಿಗೆ ತೆರೆದುಕೊಳ್ಳಿ ಮತ್ತು ಚೈತ್ಯ ಗುಣದಿಂದ ಅವಳನ್ನು ಸ್ಪರ್ಶಿಸಲು ತೃಪ್ತರಾಗಿ ಮತ್ತು ಕೇವಲ ಸತ್ಯಕ್ಕೆ ನೇರ ಪ್ರತಿಕ್ರಿಯೆ ಮಾಡುವ ಚೈತ್ಯ ನೋಟದೊಂದಿಗೆ ಅವಳನ್ನು ನೋಡು. ಆಗ ಶ್ರೀಮಾತೆಯವರು ತಾವಾಗಿಯೇ ನಿಮ್ಮ ಮನಸ್ಸು, ಹೃದಯ ಮತ್ತು ಭೌತಿಕ ಪ್ರಜ್ಞೆಯನ್ನು ಬೆಳಗಿಸುತ್ತಾರೆ ಮತ್ತು ಅವರಿಗೆ ಅವಳ ಮಾರ್ಗಗಳನ್ನು, ಮತ್ತು ಅವಳ ಸ್ವಭಾವವನ್ನು ತಿಳಿಯಪಡಿಸುತ್ತಾಳೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/25**

**ಮಧ್ಯಸ್ಥಿಕೆ ವಹಿಸುವ ಪ್ರಭಾವ**

ಸುಪ್ರಮಾನಸ ಬದಲಾವಣೆಯು ಅಧಿಕೃತ ಆಜ್ಞೆಯಾಗಿದೆ ಮತ್ತು ಭೂ–ಪ್ರಜ್ಞೆಯ ವಿಕಸನದಲ್ಲಿ ಅನಿವಾರ್ಯವಾಗಿದೆ; ಅದರ ಮೇಲ್ಮುಖ ಆರೋಹಣವು ಮುಕ್ತಾಯ–ಗೊಂಡಿಲ್ಲ ಮತ್ತು ಮನಸ್ಸು ಅದರ ಕೊನೆಯ ಶಿಖರವಲ್ಲ. ಆದರೆ, ಬದಲಾವಣೆಯು ಬರಬಹುದು, ರೂಪವನ್ನು ಪಡೆದುಕೊಳ್ಳಬಹುದು ಮತ್ತು ಬಹುಕಾಲ ಉಳಿಯಬಹುದು, ಬೆಳಕು ಬಂದಾಗ ಅದನ್ನು ತ್ಯಜಿಸದೆ, ಮಾನ್ಯಮಾಡುವ ಬಯಕೆಯೊಂದಿಗೆ ಕೆಳಗಿನಿಂದ ಕರೆಯ ಅಗತ್ಯ ಅಲ್ಲಿದೆ ಮತ್ತು ಮೇಲಿನಿಂದ ಸರ್ವೋಚ್ಚದ ಅನುಮೋದನೆಯ ಅಗತ್ಯ ಅಲ್ಲಿದೆ. ಅನುಮೋದನೆ ಮತ್ತು ಕರೆಯ ನಡುವೆ ಮಧ್ಯಸ್ಥಿಕೆ ವಹಿಸುವ ಸತ್ವವು ದಿವ್ಯಮಾತೆಯವರ ಉಪಸ್ಥಿತಿಯಾಗಿದೆ ಹಾಗೂ ಸತ್ವವಾಗಿದೆ. ಶ್ರೀಮಾತೆಯವರ ಪ್ರಭಾವ ಮತ್ತು ಯಾವುದೇ ಮನುಷ್ಯ ಪ್ರಯತ್ನ ಹಾಗೂ ತಪಸ್ಸು ಮಾತ್ರ ಮುಚ್ಚಳವನ್ನು ಸಿಗಿಯಲಾರದು ಮತ್ತು ಹೊದಿಕೆಯನ್ನು ಹರಿಯಲಾರದು ಮತ್ತು ಪಾತ್ರೆಯನ್ನು ರೂಪಿಸಲಾರದು ಮತ್ತು

ಈ ಕತ್ತಲೆಯ ಮಿಥ್ಯೆಯ, ಸಾವಿನ, ಬಳಲುತ್ತಿರುವ ಸತ್ಯದ, ಬೆಳಕಿನ, ದಿವ್ಯ ಜೀವನದ ಮತ್ತು ಅಮರತ್ವದ ಆನಂದದ ಜಗತ್ತಿನಲ್ಲಿ ಕೆಳತರಲಾರದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/26**

**ಶ್ರೀಮಾತೆಯವರೆಡೆಗೆ ಹೊರಳಿದಂಥವರು**

ಶ್ರೀಮಾತೆಯವರೆಡೆಗೆ ಹೊರಳಿದ ಪ್ರತಿಯೊಬ್ಬರೂ ನನ್ನ ಯೋಗವನ್ನು ಮಾಡುತ್ತಿದ್ದಾರೆ. ನಾವು ಪೂರ್ಣಯೋಗವನ್ನು "ಮಾಡ ಬಹುದೆಂದು ಭಾವಿಸುವುದು ಒಂದು ದೊಡ್ಡ ಪ್ರಮಾದ" – ಅಂದರೆ, ನಮ್ಮ ಸ್ವಂತ ಶ್ರಮದಿಂದ ಯೋಗದ ಎಲ್ಲ ಆಯಾಮಗಳನ್ನು ಪಾಲಿಸುವುದು ಮತ್ತು ನೆರವೇರಿಸುವುದು. ಯಾವ ಮನುಷ್ಯ ಪ್ರಾಣಿಯೂ ಅದನ್ನು ಮಾಡಲಾರದು. ನಾವೇನು ಮಾಡಬೇಕೆಂದರೆ, ನಮ್ಮನ್ನು ನಾವು ಶ್ರೀಮಾತೆಯವರಿಗೆ ಸಮರ್ಪಿಸಿಕೊಳ್ಳುವುದು, ಭಕ್ತಿಯಿಂದ, ಸೇವೆಯಿಂದ, ಅಭೀಪ್ಸೆಯಿಂದ ಅವರಿಗೆ ತೆರೆದುಕೊಳ್ಳುವುದು; ಆಗ ಶ್ರೀಮಾತೆಯವರು ತಮ್ಮ ಜ್ಯೋತಿಯಿಂದ ಮತ್ತು ಶಕ್ತಿಯಿಂದ ಸಾಧನೆಯನ್ನು ಮಾಡಲು ಸಹಾಯ ಮಾಡುತ್ತಾರೆ. ಒಬ್ಬ ಮಹಾನ್ ಪೂರ್ಣಯೋಗಿಯಾಗುವ ಅಥವಾ ಅತಿಮಾನಸ ಪುರುಷನಾಗುವ ಒಂದು ಹಿರಿಯಾಸೆಯನ್ನು ಹೊಂದುವುದು ಸಹ ತಪ್ಪು ಮತ್ತು ಆ ದಿಸೆಯಲ್ಲಿ ನಾನು ಎಷ್ಟು ಚಲಿಸಿದ್ದೇನೆ ಎಂದು ನಮ್ಮನ್ನು ನಾವು ಪ್ರಶ್ನಿಸಿಕೊಳ್ಳಬೇಕು. ಸಮರ್ಪಿಸಿಕೊಳ್ಳುವುದು ಮತ್ತು ನೀವೇನಾಗಬೇಕೆಂದು ಅವರು ಬಯಸುತ್ತಾರೊ ಅದನ್ನಾಗಲು ಬಯಸುವುದು ಸರಿಯಾದ ನಿಲುವಾಗಿದೆ. ಉಳಿದದ್ದನ್ನು ಶ್ರೀಮಾತೆಯವರ ತೀರ್ಮಾನಕ್ಕೆ ಬಿಟ್ಟು ಬಿಡುವುದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/151–52**

**ಶ್ರೀಮಾತೆಯವರು ಯಾವಾಗಲೂ ಉಪಸ್ಥಿತರಿರುತ್ತಾರೆ**

*ನಾನು ಶ್ರೀಮಾತೆಯವರಿಂದ ತುಂಬಾ ದೂರವಿದ್ದೇನೆ ಎಂದು ಕೆಲವೊಮ್ಮೆ ಯಾಕೆ ಅನುಭವವಾಗುತ್ತದೆ? ಅವರು ನಿರತಂರವಾಗಿ ನನ್ನೊಂದಿಗಿರುವ ಅನುಭವವನ್ನು ಬಯಸುತ್ತೇನೆ.*

ಶ್ರೀಮಾತೆಯವರು ಯಾವಾಗಲೂ ನಿನ್ನೊಂದಿಗಿದ್ದಾರೆ. ಅವರ ಇರವನ್ನು ಯವಾಗಲೂ ಅನುಭವಿಸಲು ನೀನು ಅಜ್ಞಾನದ ಬಲಗಳನ್ನು ದೂರ ಎಸೆಯಬೇಕು.

*

*“ಶ್ರೀಮಾತೆಯವರು ಯಾವಾಗಲೂ ನಿನ್ನೆಡೆಗೆ ನೋಡುತ್ತಿದ್ದಾರೆ ಎಂಬಂತೆ ವರ್ತಿಸು; ಯಾಕೆಂದರೆ ಅವರು ಯಾವಾಗಲೂ ಉಪಸ್ಥಿತರಿದ್ದಾರೆ” ಎಂದು ನೀವು ಹೇಳಿದ್ದೀರಿ. ನಮ್ಮ ಎಲ್ಲ ಕ್ಷುಲ್ಲಕ ವಿಚಾರಗಳು ಶ್ರೀಮಾತೆಯವರಿಗೆ ಎಲ್ಲ ಸಮಯದಲ್ಲೂ ಗೊತ್ತು ಅಥವಾ ಅವರು ಏಕಾಗ್ರವಾಗಿದ್ದಾಗ ಮಾತ್ರ ಗೊತ್ತು ಎಂದು ಅರ್ಥವೆ?*

ಶ್ರೀಮಾತೆಯವರು ಯಾವಾಗಲೂ ನಿಮ್ಮ ಕಡೆ ನೋಡುತ್ತಿರುತ್ತಾರೆ ಎಂದು ಹೇಳಲಾಗಿದೆ. ಇದರರ್ಥ, ಅವರ ಭೌತಿಕ ಮನಸ್ಸಿನಲ್ಲಿ ಅವರು ಸದಾ ನಿನ್ನ ಬಗ್ಗೆ ಯೋಚಿಸುತ್ತಿದ್ದಾರೆ ಮತ್ತು ನಿನ್ನ ಯೋಚನೆಗಳನ್ನು ಗಮನಿಸುತ್ತಿದ್ದಾರೆ ಎಂದಲ್ಲ. ಅವರು ಎಲ್ಲ ಕಡೆ ಇರುವುದರಿಂದ ಮತ್ತು ತಮ್ಮ ವಿಶ್ವಾತ್ಮಕ ಜ್ಞಾನದಿಂದ ಎಲ್ಲ ಕಡೆಯೂ ಕ್ರಿಯಾಶೀಲವಾಗಿದ್ದರಿಂದ ಅದರ ಅವಶ್ಯಕತೆ ಇಲ್ಲ.

*ನಮ್ಮ ಯೋಚನೆಗಳನ್ನು ಅವರ ಜೊತೆ ಹೆಚ್ಚು ಸಂವಹನ ಮಾಡಿದರೆ, ಅವರ ಶಕ್ತಿಗಳಿಗೆ ನಮ್ಮನ್ನು ನಾವು ಹೆಚ್ಚು ತೆರೆದುಕೊಳ್ಳುತ್ತೇವೆ ಮತ್ತು ನಮ್ಮ ಸಮರ್ಪಣೆಯು ಹೆಚ್ಚು ಪರಿಣಾಮಕಾರಿಯಾಗುತ್ತದೆ, ಅಲ್ಲವೆ?*

ಹೌದು ಸರಿಯಾಗಿ ಹೇಳಿದಿರಿ.

*

*ಶ್ರೀಮಾತೆಯವರು ಯಾವ ಅರ್ಥದಲ್ಲಿ “ಸರ್ವವ್ಯಾಪಿ”ಯಾಗಿದ್ದಾರೆ? ಅವರು ಈ ವಿಶ್ವದಲ್ಲಿ ಅವತರಿಸಿದ್ದರಿಂದ ಮತ್ತು ಅಲ್ಲಿ ಕಾರ್ಯಗತವಾಗಿರುವ ಶಕ್ತಿಗಳ ಪೂರ್ಣಜ್ಞಾನವನ್ನು ಹೊಂದಿದ್ದರಿಂದ, ಹೌದೆ? ವಿಶ್ವವ್ಯಾಪಿ ಅಥವಾ “ಎಲ್ಲೆಲ್ಲೂ” ಎನ್ನುವುದು ಭೌತಿಕ ಮಟ್ಟದ ಮೇಲೆ ಸಂಭವಿಸುವ ಎಲ್ಲ ಸಂಗತಿಗಳ ಮತ್ತು ಘಟನೆಗಳ ಬಗ್ಗೆ ಶ್ರೀಮಾತೆಯವರಿಗೆ ತಿಳಿದಿದೆಯೆ?*

ಲಾಯ್ಡ್ ಜಾರ್ಜ್ (ಬ್ರಿಟನ್‌ನ ಮಾಜಿ ಪ್ರಧಾನಿ) ಇವತ್ತು ಬೆಳಗಿನ ಉಪಹಾರದಲ್ಲಿ ಏನು ಸೇವಿಸಿದರು ಅಥವಾ ರೂಸವೆಲ್ಟ (ಅಮೆರಿಕದ ಮಾಜಿ ಅಧ್ಯಕ್ಷ) ತಮ್ಮ ಪತ್ನಿಗೆ ಸೇವಕರ ಬಗ್ಗೆ ಏನು ಹೇಳಿದರು ಎನ್ನುವುದು ಸರಿಯೆ? ಭೌತಿಕ ಮಟ್ಟದಲ್ಲಿ ಜರುಗುವ ಇಂತಹ ಎಲ್ಲ ಘಟನಗಳ ಬಗ್ಗೆ ಶ್ರೀಮಾತೆಯವರು ಮಾನವರ ರೀತಿ ಯಾಕೆ ತಿಳಿದುಕೊಳ್ಳಬೇಕು? ಅವರ ಮೂರ್ತರೂಪದಲ್ಲಿ ಬ್ರಹ್ಮಾಂಡದ ಶಕ್ತಿಗಳು ಕಾರ್ಯ ಮಾಡುವ ಬಗ್ಗೆ ತಿಳಿದುಕೊಳ್ಳುವುದು ಮತ್ತು ತಮ್ಮ ಕಾರ್ಯಕ್ಕೆ ಅವುಗಳನ್ನು ಬಳಸಿಕೊಳ್ಳುವುದು ಅವರ ವ್ಯವಹಾರ; ಉಳಿದಂತೆ, ಅವರು ತಮಗೇನು ಬೇಕು

ಅದನ್ನು ಅರಿತುಕೊಳ್ಳುತ್ತಾರೆ, ಕೆಲವೊಮ್ಮೆ ಅವರ ಅಂತರಾತ್ಮದಿಂದ, ಕೆಲವೊಮ್ಮೆ ತಮ್ಮ ಭೌತಿಕ ಮನಸ್ಸಿನಿಂದ. ವಿಶಾತ್ಮದಲ್ಲಿ ಎಲ್ಲ ಜ್ಞಾನವೂ ಲಭ್ಯವಿದೆ, ಆದರೆ ಕಾರ್ಯಮಾಡಲು ಏನು ಬೇಕಾಗಿದೆ ಅದನ್ನು ಮಾತ್ರ ಅವರು ಮುಂದೆ ತರುತ್ತಾರೆ.

*

*ನೀವು ಹೀಗೆ ಬರೆದಿದ್ದಿರಿ: "ಶ್ರೀಮಾತೆಯವರು ನಿಮ್ಮ ಕಡೆ ನೋಡುತ್ತಿದ್ದರು (ಯಾಕೆಂದರೆ ಅವರು ನೋಡುತ್ತಿದ್ದಾರೆ, ನಿಜಕ್ಕೂ ಅವರು ಯಾವಾಗಲೂ ಇದ್ದಾರೆ) ಎಂಬಂತೆ ವರ್ತಿಸು." ಇನ್ನೊಂದೆಡೆ ನೀವು ಇತ್ತೀಚೆಗೆ ನನಗೆ ಹೀಗೆ ಬರೆದಿದ್ದೀರಿ, ಶ್ರೀಮಾತೆಯವರಿಗೆ ಭೌತಿಕವಾಗಿ ಎಲ್ಲ ಕಡೆಯೂ ಇರಲು ಸಾಧ್ಯವಾಗುವುದಿಲ್ಲ ಎಂದು. ನಾನು ಇದರ ಬಗ್ಗೆ ಶ್ರೀಮಾತೆಯವರಿಗೆ ಕೇಳಿದಾಗ, ನಾನು ಹಲವು ಸ್ಥಳಗಳಲ್ಲಿ ಇರಬಹುದು ಎಂದು ಹೇಳಿದರು. ಈ ಎರಡೂ ವಿರೋಧಾತ್ಮಕ ಹೇಳಿಕೆಗಳಿಂದ ಹೇಗೆ ಸಮಾಧಾನ ಹೊಂದುವುದು?*

ಭೌತಿಕವೆನ್ನುವುದನ್ನು ದೈಹಿಕವಾಗಿ, ಅವರ ಗೋಚರಿಸುವ ಮೂರ್ತ ಲೌಕಿಕ ದೇಹವೆಂದು ಅರ್ಥಮಾಡಿಕೊಂಡರೆ, ನಿಸ್ಸಂಶಯವಾಗಿ ಅದು ಆಗಲಾರದು. ಶ್ರೀಮಾತೆಯವರಿಗೆ ನೀನು ಆ ಪ್ರಶ್ನೆಯನ್ನು ಕೇಳಿದಾಗ ನೀನು ಆ ರೀತಿಯಾಗಿ ಅರ್ಥೈಸುವಿ ಎಂದು ಅವರಂದುಕೊಂಡಿರಲಿಲ್ಲ – ತಾನು ಎಲ್ಲೆಲ್ಲೂ ಉಪಸ್ಥಿತಳಿರಬಹುದು ಎಂದು ಹೇಳಿದ್ದು ತಮ್ಮ ಪ್ರಜ್ಞೆಯಲ್ಲಿ ಎಂಬ ಅರ್ಥದಲ್ಲಿ. ಉಪಸ್ಥಿತವಿರುವುದು ಪ್ರಜ್ಞೆ, ದೇಹ (ಪುರುಷ) ಅಲ್ಲ; ದೇಹವು ಪ್ರಜ್ಞೆಯ ಕಾರ್ಯ ಚಟುವಟಿಕೆಗಾಗಿ ಇರುವ ಆಸರೆ ಮತ್ತು ಉಪಕರಣ ಮಾತ್ರವಾಗಿದೆ. ಶ್ರೀಮಾತೆಯವರು ವ್ಯಕ್ತಿಗತವಾಗಿ ತಮ್ಮ ಪ್ರಜ್ಞೆಯಲ್ಲಿ ಉಪಸ್ಥಿತರಿರಬಹುದು. ವಿಶ್ವಾತ್ಮಕ ಉಪಸ್ಥಿತಿಯು ಯಾವಾಗಲೂ ಅಲ್ಲಿದೆ ಮತ್ತು ವಿಶ್ವವ್ಯಾಪಿ ಹಾಗೂ ವ್ಯಕ್ತಿಗತ ಉಪಸ್ಥಿತಿಗಳು ಒಂದೇ ಇರುವಿಕೆಯ ಎರಡು ಅಂಶಗಳಾಗಿವೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/169–71**

**ಶ್ರೀಮಾತೆಯವರ ಶಕ್ತಿ ಏನು?**

*ಯೋಗಶಕ್ತಿ ಎಂದರೇನು? ಯೋಗದ ಮನಃಶಕ್ತಿ ಎಂದರೇನು, ಯೋಗದ ಜೀವನ ಶಕ್ತಿ ಎಂದರೇನು ಮತ್ತು ದೈಹಿಕ ಶಕ್ತಿ ಎಂದರೇನು?*

ಯೋಗ ಪ್ರಜ್ಞೆಯಲ್ಲಿ ನಮಗೆ ಸಂಗತಿಗಳ ಅರಿವು ಮಾತ್ರವಲ್ಲದೆ, ಶಕ್ತಿಗಳ ಅರಿವು, ಶಕ್ತಿಗಳ ಅರಿವು ಮಾತ್ರವಲ್ಲ, ಈ ಶಕ್ತಿಗಳ ಹಿಂದಿರುವ ಜಾಗೃತ ಅರಿವು ಸಹ ಇದೆ: ನಮಗೆ ನಮ್ಮಲ್ಲಿರುವ ಎಲ್ಲದರ ಅರಿವು ಮಾತ್ರವಲ್ಲದೆ ವಿಶ್ವದಲ್ಲಿರುವ ಎಲ್ಲದರ ಬಗ್ಗೆ ಕೂಡ ಅರಿವಿದೆ. ಈ ಹೊಸ ಪ್ರಜ್ಞೆಯು ಬೆಳವಣಿಗೆಯ ಒಡನಾಡಿಯಾಗಿರುವ ಶಕ್ತಿಯೊಂದಿಗೆ ಮತ್ತು ತಕ್ಷಣ ಅದರೊಂದಿಗೆ ಬೆಳೆಯುತ್ತದೆ ಮತ್ತು ತನ್ನನ್ನು ತಾನು ಪರಿಪಕ್ವಗೊಳಿಸಲು ಸಹಾಯ ಮಾಡುತ್ತದೆ. ಈ ಶಕ್ತಿಯು ಯೋಗಶಕ್ತಿಯಾಗಿದೆ. ಇಲ್ಲಿ ಅದು ಸುಪ್ತವಾಗಿದೆ ಮತ್ತು ನಮ್ಮ ಆಂತರಿಕ ಪುರುಷನ ಎಲ್ಲ ಚಕ್ರಗಳಲ್ಲಿ ಮೇಲ್ಮುಖವಾಗಿ ಸುತ್ತಿಕೊಂಡಿದೆ, ಅದು ಮೂಲಾಧಾರದಲ್ಲಿದೆ ಮತ್ತು ತಂತ್ರ ವಿದ್ಯೆಯಲ್ಲಿ ಅದನ್ನು ಕುಂಡಲಿನಿ ಶಕ್ತಿ ಎಂದು ಕರೆಯುತ್ತಾರೆ. ಅದು ದಿವ್ಯಶಕ್ತಿಯಾಗಿ ನಮ್ಮ ತಲೆಯ ಮೇಲಿದೆ – ಸುರುಳಿಯಾಕಾರದಲ್ಲಿದೆ, ಒಳಗೊಂಡಿದೆ, ಸುಪ್ತವಾಗಿದೆ, ಆದರೆ ಜಾಗೃತವಾಗಿದೆ, ಸಮರ್ಥವಾಗಿದೆ, ಜ್ಞಾನವುಳ್ಳದ್ದಾಗಿದೆ, ವ್ಯಾಪಿಸಿದೆ ಹಾಗೂ ವಿಸ್ತಾರವಾಗಿದೆ; ಅದು ಅಲ್ಲಿ ಅಭಿವ್ಯಕ್ತಿಗಾಗಿ ಕಾಯುತ್ತಲಿದೆ ಮತ್ತು ಈ ಶಕ್ತಿಗೆ, ಶ್ರೀಮಾತೆಯವರ ಪ್ರಭಾವಕ್ಕೆ ನಮ್ಮನ್ನು ನಾವು ತೆರೆದುಕೊಳ್ಳಬೇಕು. ಅದು ಮನಸ್ಸಿನಲ್ಲಿ ತನ್ನನ್ನು ತಾನು ದಿವ್ಯ ಮಾನಸ ಶಕ್ತಿಯಾಗಿ ಅಥವಾ ವಿಶ್ವ ಮಾನಸ ಶಕ್ತಿಯಾಗಿ ಪ್ರಕಟಗೊಳ್ಳುತ್ತದೆ ಮತ್ತು ವೈಯಕ್ತಿಕ ಮನಸ್ಸು ಮಾಡಲಾರದ ಎಲ್ಲವನ್ನೂ ಅದು ಮಾಡುತ್ತದೆ; ಆಗ ಅದು ಯೋಗ ಮನಃಶಕ್ತಿಯಾಗಿರುತ್ತದೆ. ಅದೇ ತೆರನಾಗಿ ಅದು ಪ್ರಾಣಿಕದಲ್ಲಿ ಅಥವಾ ಭೌತಿಕದಲ್ಲಿ ಅಭಿವ್ಯಕ್ತಗೊಂಡು ಕಾರ್ಯ ಪ್ರಾರಂಭಿಸಿದಾಗ ಅದು ಯೋಗ ಜೀವನಶಕ್ತಿ ಅಥವಾ ಯೋಗ ದೇಹಶಕ್ತಿ ಎನ್ನುವುದು ಸ್ಪಷ್ಟ. ಬಾಹ್ಯವಾಗಿ ಮತ್ತು ಮೇಲ್ಮುಖವಾಗಿ ಆಸ್ಫೋಟಿಸುತ್ತ, ತನ್ನನ್ನು ತಾನು ಕೆಳಗಿನಿಂದ ವಿಶಾಲತೆಯಲ್ಲಿ ವ್ಯಾಪಿಸುತ್ತ ಅದು ಈ ಎಲ್ಲ ರೂಪಗಳಲ್ಲಿ ಎಚ್ಚೆತ್ತುಕೊಳ್ಳಬಹುದು; ಅಥವಾ ಕೆಳಗಿಳಿಯಬಹುದು ಮತ್ತು ಅಲ್ಲಿ ಸಂಗತಿಗಳಿಗಾಗಿ ಒಂದು ನಿಶ್ಚಿತ ಪ್ರಭಾವವಾಗಬಹುದು; ಅದು ತನ್ನ ಕಾರ್ಯ ಮಾಡುತ್ತ, ತನ್ನ ಆಳ್ವಿಕೆಯನ್ನು ಸ್ಥಾಪಿಸುತ್ತ ದೇಹದಲ್ಲಿ ಕೆಳಗೆ ಸುರಿಸಬಹುದು, ಮೇಲಿನಿಂದ ವಿಶಾಲತೆಯಲ್ಲಿ ವ್ಯಾಪಿಸುತ್ತ ನಮ್ಮಲ್ಲಿಯ ಅತ್ಯಂತ ನಿಮ್ನವನ್ನು ನಮ್ಮ ಮೇಲಿರುವ ಅತ್ಯುನ್ನತಕ್ಕೆ ಸಂಪರ್ಕಿಸುತ್ತದೆ, ವ್ಯಕ್ತಿಯನ್ನು ಬ್ರಹ್ಮಾಂಡದಲ್ಲಿ ಅಥವಾ ಸಂಪೂರ್ಣತೆಯಲ್ಲಿ ಮತ್ತು ಉತ್ಕೃಷ್ಟತೆಯಲ್ಲಿ ಬಿಡುಗಡೆ ಮಾಡುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/192**

## ಕಷ್ಟಗಳು ಮತ್ತು ಶ್ರೀಮಾತೆಯವರ ಸಹಾಯ

ಅಸಮಾಧಾನಗೊಳ್ಳದೆ ಇರುವುದು, ಪ್ರಶಾಂತವಾಗಿರುವುದು ಹಾಗೂ ವಿಶ್ವಾಸದಿಂದಿರುವುದು ಸರಿಯಾದ ಮನೋಭಾವವಾಗಿದೆ, ಆದರೆ ಶ್ರೀಮಾತೆಯವರ ಸಹಾಯವನ್ನು ಸ್ವೀಕರಿಸುವುದೂ ಮತ್ತು ಅವರ ಆತುರದಿಂದ ಯಾವುದೇ ಕಾರಣಕ್ಕೂ ಮರಳಿ ಕುಗ್ಗದೆ ಇರುವುದು ಸಹ ಅವಶ್ಯಕವಾಗಿದೆ. ನಾವು ಅಶಕ್ತತೆಯ ಕಲ್ಪನೆಗಳನ್ನು, ಪ್ರತಿಕ್ರಿಯಿಸುವ ಅಸಮರ್ಥತೆಯನ್ನು ತೃಪ್ತಿಪಡಿಸಲೇಬಾರದು ಮತ್ತು ಲೋಪಗಳ ಹಾಗೂ ಅಪಜಯಗಳ ಮೇಲೆ ಅತಿಯಾಗಿ ನೆಲೆಯಾಗಿರುವುದು ಮತ್ತು ಅವುಗಳಿಂದ ಮನಸ್ಸನ್ನು ಯಾತನೆಯಲ್ಲಿ ಹಾಗೂ ಲಜ್ಜೆಯಲ್ಲಿ ಇರುವುದಕ್ಕೆ ಅವಕಾಶಕೊಡುವ ಕಲ್ಪನೆಗಳನ್ನು ತೃಪ್ತಿಪಡಿಸಬಾರದು; ಈ ಕಲ್ಪನೆಗಳು ಮತ್ತು ಭಾವನೆಗಳು ಕೊನೆಯಲ್ಲಿ ದುರ್ಬಲಗೊಳಿಸುವ ವಸ್ತುಗಳಾಗುತ್ತವೆ. ತೊಂದರೆಗಳು, ಎಡರುಗಳು ಅಥವಾ ಸೋಲುಗಳು ಇದ್ದಾಗ, ನಾವು ಅವಗಳೆಡೆಗೆ ಸಮಾಧಾನದಿಂದ ನೋಡಬೇಕು ಮತ್ತು ಅವುಗಳ ನಿವಾರಣೆಗಾಗಿ ನೆಮ್ಮದಿಯಲ್ಲಿ ನಿರಂತರವಾಗಿ ದೈವೀ ಸಹಾಯವನ್ನು ಯಾಚಿಸಬೇಕು, ಆದರೆ ನಾವು ನಿರಾಸೆ ಹೊಂದಬಾರದು ಅಥವಾ ನೋವನ್ನು ಅನುಭವಿಸಬಾರದು ಅಥವಾ ಧೈರ್ಯಗೆಡಬಾರದು. ಯೋಗ ಮಾರ್ಗವು ಸರಳವಾದ ಮಾರ್ಗವಲ್ಲ ಮತ್ತು ನಮ್ಮ ಪ್ರಕೃತಿಯ ಬದಲಾವಣೆಯು ಒಂದು ದಿನದಲ್ಲಿ ಆಗಲಾರದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/294**

ಸಮರ್ಪಣೆಯು ಶ್ರೀಮಾತೆಯವರಿಗೆ ಇರಬೇಕು – ಶಕ್ತಿಗೂ ಸಹ ಅಲ್ಲ, ಶ್ರೀಮಾತೆಯವರಿಗೆ ಮಾತ್ರ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/147**

ನಿಮ್ಮನ್ನು ನೀವು ಶ್ರೀಮಾತೆಯವರಿಗೆ ಮುಕ್ತವಾಗಿರಿಸಿಕೊಳ್ಳಿ, ಅವರನ್ನು ಯಾವಾಗಲೂ ಸ್ಮರಿಸಿರಿ ಮತ್ತು ಉಳಿದ ಎಲ್ಲ ಪ್ರಭಾವಗಳನ್ನು ತಿರಸ್ಕರಿಸುತ್ತ ಅವರ ಶಕ್ತಿಯು ನಿಮ್ಮಲ್ಲಿ ಕಾರ್ಯಮಾಡಲು ಬಿಡಿ – ಅದು ಯೋಗದ ನಿಯಮ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/109**

ಶ್ರೀಮಾತೆಯವರ ಜಯವು ಮೂಲತಃ ಪ್ರತಿಯೊಬ್ಬ ಸಾಧಕ ತನ್ನ ಮೇಲೆ ಸಾಧಿಸಿದ ಜಯವಾಗಿದೆ. ಆ ನಂತರ ಮಾತ್ರ ಯಾವುದೇ ರೀತಿಯ ಬಾಹ್ಯ ಕಾರ್ಯವು ಸಮರಸವಾದ ಪರಿಪೂರ್ಣತೆಗೆ ಬರುವುದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/331 – ಶ್ರೀ ಅರವಿಂದರು**



*ನಿಮ್ಮ ಪುಸ್ತಕ " ದಿ ಮದರ್"ನಲ್ಲಿ ನೀವು ಶ್ರೀಮಾತೆಯವರ (ನಮ್ಮ ಶ್ರೀಮಾತೆಯವರ) ಕುರಿತು ಹೇಳಿಲ್ಲವೆ?*

ಹೌದು.

*ತರ್ಕಾತೀತ ಹಾಗೂ ವಿಶ್ವಾತ್ಮಕ ಶ್ರೀಮಾತೆಯವರ ಉಪಸ್ಥಿತಿಯ ಅಗಾಧವಾದ ಈ ಎರಡು ಮಾರ್ಗಗಳ ಪ್ರಭಾವವನ್ನು ಒಳಗೊಂಡ ವ್ಯಕ್ತಿಗತ ದಿವ್ಯಮಾತೆ ಅವರಲ್ಲವೆ?*

ಹೌದು.

*ಶ್ರೀಮಾತೆಯವರು ಅಂಧಕಾರದಲ್ಲಿ, ಮಿಥ್ಯೆಯಲ್ಲಿ, ಪ್ರಮಾದದಲ್ಲಿ ಮತ್ತು ಸಾವಿನಲ್ಲಿ ನಮಗಾಗಿ ತಮ್ಮ ಗಾಢವಾದ ಹಾಗೂ ಉತ್ಕಟವಾದ ಪ್ರೇಮದಲ್ಲಿ ಕೆಳಗಿಳಿದು ಬಂದಿಲ್ಲವೆ (ನಮ್ಮ ಮಧ್ಯದಲ್ಲಿ).*

ಹೌದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/31 – ಶ್ರೀ ಅರವಿಂದರು**

**ಸಾಧನೆಯಲ್ಲಿ ಮಹತ್ತರ ಹೆಜ್ಜೆ**

ಶ್ರೀಮಾತೆಯವರು ಶ್ರೀ ಅರವಿಂದರ ಶಿಷ್ಯೆಯಲ್ಲ. ನನಗಾದ ಸಾಕ್ಷಾತ್ಕಾರ ಹಾಗೂ ಅನುಭವ ಅವರ ಯೌವನದಲ್ಲಿಯೇ ಪ್ರಾರಂಭವಾಗಿತ್ತು. ಅವರು ಹನ್ನೆರಡು ಅಥವಾ ಹದಿಮೂರು ವರ್ಷದವರಿದ್ದಾಗ, ಅನೇಕ ಶಿಕ್ಷಕರು ಪ್ರತಿದಿನ ಸಾಯಂಕಾಲ ಬಂದು ಅವರಿಗೆ ವಿವಿಧ ಆಧ್ಯಾತ್ಮಿಕ ವಿಷಯಗಳನ್ನು ಬೋಧಿಸುತ್ತಿದ್ದರು. ಅವರೊಲ್ಲಬ್ಬರು ಕಪ್ಪು ಬಣ್ಣದ ಏಶಿಯಾದ ವ್ಯಕ್ತಿಯಾಗಿದ್ದರು. ಅವರು ನನ್ನನ್ನು ಮೊದಲ ಸಲ ಭೇಟಿಯಾದಾಗ ಬಹು ಕಾಲದಿಂದ ನೋಡುತ್ತಲಿದ್ದ ಆ ಕಪ್ಪು ಬಣ್ಣದ ಏಶಿಯಾದ ವ್ಯಕ್ತಿ ನಾನೇ ಎಂದು ತಕ್ಷಣವೆ ಅವರು ಗುರುತಿಸಿದರು. ಅವರು ಇಲ್ಲಿಗೆ (ಪಾಂಡಿಚೇರಿಗೆ) ಬಂದು ಒಂದು ಸಮಾನವಾದ ಉದ್ದೇಶಕ್ಕೆ ಕಾರ್ಯಮಾಡುವುದು ಎಂದು ದೈವೀ ಲಿಖಿತವಾಗಿತ್ತು. ಶ್ರೀಮಾತೆಯವರು ಭಾರತಕ್ಕೆ ಬರುವ ಮುಂಚೆಯೇ ಬೌದ್ಧ ಯೋಗದಲ್ಲಿ ಮತ್ತು ಗೀತಾ ಯೋಗದಲ್ಲಿ ನಿಷ್ಣಾತರಾಗಿದ್ದರು. ಉನ್ನತ ಸಂಶ್ಲೇಷಣೆಯ (ಸಂಯೋಗ) ಕಡೆಗೆ ಚಲಿಸುವ ಯೋಗವು ಅವರದಾಗಿತ್ತು. ಅದಾದ ನಂತರ, ಅವರು ಇಲ್ಲಿಗೆ ಆಗಮಿಸುವುದು ಸ್ವಾಭಾವಿಕವಾಗಿತ್ತು. ನನ್ನ ಯೋಗಕ್ಕೆ ಒಂದು ನಿರ್ದಿಷ್ಟ ರೂಪವನ್ನು ಕೊಡಲು ಸಹಾಯ ಮಾಡಿದ್ದಾರೆ ಮತ್ತು ಮಾಡುತ್ತಲಿದ್ದಾರೆ, ಅವರ ಸಹಕಾರವಿಲ್ಲದೆ ಇದು ಸಾಧ್ಯವಾಗುತ್ತಿರಲಿಲ್ಲ. ಶ್ರೀಮಾತೆಯವರಿಗೆ ಸಮರ್ಪಿಸಿಕೊಳ್ಳುವುದು ಈ ಯೋಗದ ಎರಡು ಶ್ರೇಷ್ಠ ಹಂತಗಳಲ್ಲಿ ಒಂದಾಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/36**

## ದಿವ್ಯಮಾತೆ ಮತ್ತು ಪ್ರಕೃತಿ

ಶ್ರೀಮಾತೆಯವರನ್ನು ನಿಮ್ನ ಪ್ರಕೃತಿ ಹಾಗೂ ಅದರ ಬಲಗಳ ಪ್ರಕ್ರಿಯೆಯೊಂದಿಗೆ ಗುರುತಿಸುವುದು ತಪ್ಪಾಗುತ್ತದೆ. ಇಲ್ಲಿ ಪ್ರಕೃತಿಯು ಅಜ್ಞಾನದ ಕಾರ್ಯಕ್ಕೆ ಮಂಡಿಸಲಾದ ಒಂದು ಪ್ರಕ್ರಿಯೆ ಮಾತ್ರವಾಗಿದೆ. ಹೇಗೆ ಬೌದ್ಧಿಕ, ಪ್ರಾಣಿಕ ಅಥವಾ ದೈಹಿಕ ಅಜ್ಞಾನ ಪುರುಷನು ದೈವೀ ಪುರುಷನಲ್ಲವೋ (ಅದು ದೈವಿಕದಿಂದ ಬಂದಿದ್ದರೂ) ಹಾಗೆಯೇ, ಪ್ರಕೃತಿಯ ಪ್ರಕ್ರಿಯೆ ದಿವ್ಯಮಾತೆಯಲ್ಲ. ಅವರ ಕೆಲ ಅಂಶವು ಈ ಪ್ರಕ್ರಿಯೆಯಲ್ಲಿ ಮತ್ತು ಅದರ ಹಿಂದೆ ಅದನ್ನು ವಿಕಾಸಾತ್ಮಕ ಉದ್ದೇಶಕ್ಕೆ ಉಳಿಸಲು ಅಲ್ಲಿದೆ ಎನ್ನುವುದರಲ್ಲಿ ಸಂಶಯವಿಲ್ಲ – ಆದರೆ ಅವರು ತಮ್ಮಲ್ಲಿ ತಾವೇನಾಗಿದ್ದಾರೊ ಅದು ಅವಿದ್ಯೆಯ ಶಕ್ತಿಯಲ್ಲ, ಆದರೆ ಮುಕ್ತಿಗಾಗಿ ಹಾಗೂ ದೈವೀ ಪಾಲನೆಗಾಗಿ ದೈವೀ ಪ್ರಜ್ಞೆ, ಪ್ರಭಾವ, ಜ್ಯೋತಿ, ಪರಾ ಪ್ರಕೃತಿಯಾಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/62 – ಶ್ರೀ ಅರವಿಂದರು**

## ಶ್ರೀ ಅರವಿಂದರು; ಶ್ರೀಮಾತೆಯವರ ಅಭಿವ್ಯಕ್ತಿ

**– ಅನುವಾದ: ನಾಗಜ್ಯೋತಿ, ಮಾನ್ವಿ**

ಜಗತ್ತಿನ ಇತಿಹಾಸದಲ್ಲಿ ಶ್ರೀ ಅರವಿಂದರು ಏನನ್ನು ಪ್ರತಿನಿಧಿಸುತ್ತಾರೋ ಅದು ಬೋಧನೆಯಲ್ಲ, ದಿವ್ಯ ದರ್ಶನದ ಅರಿವು ಅಲ್ಲ; ಇದು ಒಂದು "ಪರಾತ್ಪರದ" ನೇರವಾದ ನಿಖರವಾದ ಕಾರ್ಯವಾಗಿರುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 13/3**

## ಶ್ರೀ ಅರವಿಂದರು ಜಗತ್ತಿಗೆ ದೈವೀ ಭವಿಷ್ಯದ ಭರವಸೆಯನ್ನು ತಂದರು

ಶ್ರೀ ಅರವಿಂದರು ಭೂಮಿಗೆ ಬಂದಿರುವದು ಕೇವಲ ಬೋಧನೆ ನೀಡಲು ಅಥವಾ ಈಗಾಗಲೇ ಇರುವ ಪಂಥ ಅಥವಾ ಬೋಧನೆಯೊಂದಿಗೆ ಸ್ಪರ್ಧಿಸುವ ಪಂಥವನ್ನು ನಿರ್ಮಿಸುವ ಸಲುವಾಗಿ ಅಲ್ಲ. ಆದರೆ ಭೂತವನ್ನು ದಾಟುವ ಮಾರ್ಗ ತೋರಿಸಲು ಮತ್ತು ಅಂತರ್ಭೂತವಾಗಿರುವ ಹಾಗೂ ಅತ್ಯಾವಶ್ಯವಾಗಿರುವ ಭವಿಷ್ಯದೆಡೆಗೆ ಮಾರ್ಗವನ್ನು ನಿಶ್ಚಿತಗೊಳಿಸಿ ನಿರ್ಮಿಸಲು ಬಂದಿದ್ದಾರೆ.

*

ಶ್ರೀ ಅರವಿಂದರು ಭೂತಕಾಲಕ್ಕಾಗಲೀ, ಇತಿಹಾಸಕ್ಕಾಗಲಿ ಸೇರಿದವರಲ್ಲ. 'ಭವಿಷ್ಯ'ದ ಸಾಕ್ಷಾತ್ಕಾರದೆಡೆಗೆ ಮುನ್ನಡೆಯುತ್ತಿರುವದೇ ಶ್ರೀ ಅರವಿಂದರು. ಹೀಗೆ ವೇಗವಾಗಿ ಮುನ್ನಡೆಯಲು ಹಾಗೂ ಈ ಮಾರ್ಗದಲ್ಲಿ ವೇಗದಲ್ಲಿ ಸಾಗಲು ನಿತ್ರಾಣಗೊಂಡು ಹಿಂದುಳಿಯದಂತೆ, ಸದಾ ಶಾಶ್ವತವಾಗಿರುವ ಯೌವನವನ್ನು ಪಡೆಯಲೇ ಬೇಕಾಗಿದೆ.

*

ಅವರು ಯಾವಾಗಲೂ ನಮ್ಮ ಜೊತೆಯಲ್ಲಿಯೇ ಇರುತ್ತಾರೆ. [ಕೈ ಬರಹದಲ್ಲಿಯೂ ಸಹಿತ]

*

ಹೇ ಪ್ರಭುವೇ, "ನಿನ್ನ ಕಾರ್ಯ" ಪೂರ್ಣಗೊಳ್ಳುವವರೆಗೂ "ನೀನು" ನಮ್ಮ ಜೊತೆಗೇ ಇರುತ್ತೇನೆ ಎಂದು ಮುಂಜಾನೆಯಲ್ಲಿ ನಮಗೆ ಭರವಸೆಯನ್ನು ಕೊಟ್ಟಿದ್ದೀಯಾ. ಕೇವಲ ಮಾರ್ಗದರ್ಶನ ಮಾಡುವ ಮತ್ತು ಪ್ರಕಾಶಿಸುವ ಪ್ರಜ್ಞೆಯಾಗಿ ಅಲ್ಲ. ಆದರೆ ನಮ್ಮ ಕಾರ್ಯದಲ್ಲಿನ ಕ್ರಿಯಾತ್ಮಕ 'ಸಾನಿಧ್ಯ'ವಾಗಿಯೂ ಸಹ ನೀನು ಇರುತ್ತೀಯಾ. 'ನೀವು' ಇಲ್ಲಿಯೇ ನೆಲೆಸುತ್ತೀರಿ, ಈ ಭೂಮಿಯು ರೂಪಾಂತರಗೊಳ್ಳುವವರೆಗೂ, ನೀವು ಈ ಭೂಮಿಯನ್ನು ತೊರೆದು ಹೋಗುವದಿಲ್ಲ ಎಂದು ನಿಶ್ಚಿತವಾದ ನುಡಿಗಳಲ್ಲಿ 'ನೀವೇ' ಭರವಸೆಯನ್ನು ನೀಡಿದ್ದೀರಿ. ಈ ಅಸಾಧಾರಣವಾದ 'ಸಾನಿಧ್ಯ'ಕ್ಕೆ ನಾವೆಲ್ಲ ಯೋಗ್ಯರಾಗುವಂತೆ ಕರುಣಿಸಿ, ಮತ್ತು ಇನ್ನು ಮುಂದೆ 'ನಿಮ್ಮ ಉತ್ಕೃಷ್ಟ' 'ಕೆಲಸ' ನೆರವೇರಬೇಕೆಂದು ಹಾಗೂ ಈ ಒಂದೇ ಒಂದು ಸಂಕಲ್ಪಕ್ಕಾಗಿ ಹೆಚ್ಚು ಹೆಚ್ಚು ಪರಿಪೂರ್ಣವಾಗಿ ನಮ್ಮನ್ನು ನಾವು ಇದಕ್ಕೆ ಮೀಸಲಾಗಿಸಿಕೊಳ್ಳುವಂತೆ ಮಾಡಿರಿ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/4–6**

ಶ್ರೀ ಅರವಿಂದರು ದೇಹತ್ಯಾಗ ಮಾಡುವಾಗ, ಅವರು ನಮ್ಮನ್ನು ತೊರೆದು ಹೋಗುವದಿಲ್ಲ ಎಂದು ಹೇಳಿದ್ದರು. ಅದೇ ರೀತಿಯಲ್ಲಿ ಈ ಇಪ್ಪತ್ತೊಂದು ವರ್ಷಗಳ ಕಾಲವೂ ಅವರು ನಮ್ಮೊಂದಿಗೆ ಯಾವಾಗಲೂ ಇದ್ದಾರೆ. ಅವರ ಪ್ರಭಾವಕ್ಕೆ ತೆರೆದುಕೊಂಡವರಿಗೆ ಮತ್ತು ಅವರನ್ನು ಸ್ವೀಕರಿಸುವವರಿಗೆ ಮಾರ್ಗದರ್ಶನ ನೀಡುತ್ತಾ, ಸಹಾಯ ಮಾಡುತ್ತಿದ್ದಾರೆ.

ಅವರ ಜನ್ಮಶತಮಾನೋತ್ಸವದ ವರ್ಷ(1972)ದಲ್ಲಿ, ಅವರ ಸಹಾಯವೂ ಮತ್ತೂ ಬಲವಾಗಿ ದೊರೆಯುತ್ತಿದೆ, ನಮ್ಮನ್ನು ಹೆಚ್ಚು ಹೆಚ್ಚು ತೆರೆದಿಟ್ಟುಕೊಳ್ಳುವದು ಮತ್ತು ಅದರ ಸದುಪಯೋಗವನ್ನು ಹೇಗೆ ಪಡೆದುಕೊಳ್ಳಬಹುದೆನ್ನುವದನ್ನು ತಿಳಿದುಕೊಳ್ಳುವದು ನಿಮಗೆ ಬಿಟ್ಟ ವಿಚಾರವಾಗಿದೆ. ಭವಿಷ್ಯವು ಕೇವಲ ವೀರ ಆತ್ಮಗಳಿಗಿದೆ. ನಮ್ಮ ಶ್ರದ್ಧೆ ಎಷ್ಟು ಬಲವಾಗಿ ಮತ್ತು ಹೆಚ್ಚು ಸಾರ್ವತ್ರಿಕವಾಗಿರುತ್ತದೆಯೂ ಅಷ್ಟು ಹೆಚ್ಚು ಶಕ್ತಿಶಾಲಿಯಾದ ಮತ್ತು ಪರಿಣಾಮಕಾರಿಯಾದ ಸಹಾಯವನ್ನು ಸ್ವೀಕರಿಸುತ್ತೇವೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/17**


**ಶ್ರೀ ಗುರುವಿಗಾಗಿ ತನುಧಾರಿಯಾಗಿ ಬಂದಂಥ ಸದಾಶಿವಗೆ ।**
**ಅನಂತಾನಂತ ನತಿಯ ಉಪಕೃತಿಯ ಒಪ್ಪಿಸುವೆವು ಇವಗೆ ॥**
**ಎಷ್ಟು ದುಡಿದೆನೀನೆಷ್ಟು ಪಡೆದೆ, ಹೇ ನಮೋ ನಮ–ಓ ನಿನಗೆ ।**
**ಕಷ್ಟವೇನು, ಸಂಘರ್ಷವೇನು, ಪಾಡೇನು ತಾಳ್ಮೆಯೇನು ॥**
**ನಮಗಾಗಿ ಕಲ್ಪ ನಮಗಾಗಿ ಶಿಲ್ಪ ಸಾಧಿಸಿದೆ ನಮಗೆ ನೀನು ।**
**ಬಾಗಿ ಕೂಗಿ ಬೇಡುವೆವು ನಿನಗೆ ಅರೋಹಣವು ಕೂಡ ನೋಡು ॥**
**ನಮ್ಮ ಸಂಪದವು ನಿನ್ನ ಪ್ರಾಪ್ತಿ ಇದ ಮರೆಯದಂತೆ ಮಾಡು ॥**

**– ಅನು: ದ.ರಾ. ಬೇಂದ್ರೆ**

*

ತೋರಿಕೆಗಳಿಂದ ನಾವು ದಿಗ್ಭ್ರಮೆಗೆ ಒಳಗಾಗಬಾರದು. ಶ್ರೀ ಅರವಿಂದರು ನಮ್ಮನ್ನು ತೊರೆದಿಲ್ಲ. ಶ್ರೀ ಅರವಿಂದರು ಎಂದೆಂದಿಗೂ ಇರುವಂತೆ, ಜೀವಂತವಾಗಿಯೇ ಇಲ್ಲಿ ಇದ್ದಾರೆ. ಅವರ ಕಾರ್ಯವನ್ನು ಎಲ್ಲಾ ಪ್ರಾಮಾಣಿಕತೆಯೊಂದಿಗೆ, ತವಕದೊಂದಿಗೆ ಮತ್ತು ಅತ್ಯಾವಶ್ಯಕವಾಗಿರುವ ಪ್ರಾಮಾಣಿಕತೆಯೊಂದಿಗೆ, ತವಕದೊಂದಿಗೆ ಮತ್ತು ಅವಶ್ಯಕವಾಗಿರುವ ಏಕಾಗ್ರತೆಯೊಂದಿಗೆ ಸಾಕ್ಷಾತ್ಕರಿಸಿಕೊಳ್ಳವದು ನಮಗೆ ಬಿಟ್ಟ ವಿಚಾರವಾಗಿರುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/7** **– ಶ್ರೀಮಾತೆ**



ಶ್ರೀ ಅರವಿಂದರನ್ನು ಯಾರು ತಾನೇ ಅರಿಯಲು ಸಾಧ್ಯ? ಅವರು ವಿಶ್ವದಷ್ಟೇ ವಿಶಾಲವಾಗಿ ಮತ್ತು ಅವರ ಬೋಧನೆಗಳೂ ಅನಂತ ವಾಗಿವೆ.

ಅವರಿಗೆ ಸ್ವಲ್ಪ ಹತ್ತಿರವಾಗಲು ಇರುವ ಒಂದೇ ಒಂದು ಮಾರ್ಗವೆಂದರೆ, ಅವರನ್ನು ಪ್ರಾಮಾಣಿಕವಾಗಿ ಪ್ರೀತಿಸುವದಾಗಿದೆ. ಜೊತೆಗೆ ಅವರ ಕಾರ್ಯಕ್ಕಾಗಿ ಪ್ರತಿಯೊಬ್ಬರೂ ತಮ್ಮನ್ನು ತಾವು ತೊಡಗಿಸಿಕೊಳ್ಳಬೇಕಾಗಿದೆ. ಶ್ರೀ ಅರವಿಂದರು ಮುನ್ಸೂಚಿಸಿರುವಂತೆ ಜಗತ್ತಿನ ರೂಪಾಂತರಕ್ಕಾಗಿ ಪ್ರತಿಯೊಬ್ಬರೂ ತಮಗೆ ಅತ್ಯತ್ತಮವಾದುದನ್ನು ಮಾಡಲು ಮತ್ತು ತಮಗೆ ಎಷ್ಟು ಸಾಧ್ಯವೋ ಅಷ್ಟು ಕೊಡುಗೆಯನ್ನು ಕೊಡಬೇಕಾಗುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 12/397** **– ಶ್ರೀಮಾತೆ**

**ಶಾಶ್ವತ ಜನನ**

ಇಂದು ಸಂಜೆ, ನಿಮ್ಮ ಪ್ರಶ್ನೆಗಳಿಗೆ ಉತ್ತರಿಸುವ ಬದಲು, ಶ್ರೀ ಅರವಿಂದರನ್ನು ನೆನೆದು, ಅವರ ಮೇಲೇ ಧ್ಯಾನವನ್ನು ಮಾಡೋಣ. ಶ್ರೀ ಅರವಿಂದರು ನಮಗಾಗಿ ಏನನ್ನು ಮಾಡಿದ್ದಾರೋ 'ಅದಕ್ಕಾಗಿ' ಅವರನ್ನು ಕೃತಜ್ಞತೆಯಿಂದ ಸ್ಮರಿಸೋಣ. ಅದನ್ನು ಜೀವಂತವಾಗಿಡುವ ಪ್ರಯತ್ನ ಮಾಡೋಣ. ಆ ಕಾರ್ಯವನ್ನು ಅವರು ಪ್ರಕಾಶಮಾನವಾದ, ಜೀವಂತಿಕೆಯಿಂದ ಕೂಡಿದ ಮತ್ತು ಕ್ರಿಯಾತ್ಮಕ ಪ್ರಜ್ಞೆಯಲ್ಲಿ ಈಗಲೂ ಮಾಡುತ್ತಲೇ ಇದ್ದಾರೆ. ಇಂತಹ ಪ್ರಜ್ಞೆಯಿಂದ ಯಾವ ಶ್ರೇಷ್ಠ ಸಾಕ್ಷಾತ್ಕಾರವನ್ನು ಈ ಪೃಥ್ವಿಗಾಗಿ ಮಾಡಲು ಅವರು ಘೋಷಿಸಿದರೋ, ಆ ಕಾರ್ಯವನ್ನು ಇನ್ನೂ, ಈಗಲೂ ಅವರು ಮುಂದುವರೆಸಿಕೊಂಡು ಮಾಡುತ್ತಲೇ ಇದ್ದಾರೆ.

ನಾಳೆಯ ದಿನ ಅವರ ಹುಟ್ಟು ಹಬ್ಬದ ವಾರ್ಷಿಕೋತ್ಸವವಿದೆ. ಈ ಜನನ ದಿನವು ವಿಶ್ವದ ಇತಿಹಾಸದಲ್ಲಿ ಶಾಶ್ವತತೆಯ ಜನನವಾಗಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 9/172**

*ಶ್ರೀ ಅರವಿಂದರ ಜನನವನ್ನು ವಿಶ್ವದ ಇತಿಹಾಸದಲ್ಲಿನ ಶಾಶ್ವತ ದಿನವೆಂದು ನೀವು ಹೇಳಿದ್ದೀರಿ. ಹಾಗಾದರೆ ನಿರ್ದಿಷ್ಟವಾಗಿ "ಶಾಶ್ವತ" ಎನ್ನುವದರ ಅರ್ಥವೇನು?*

ಈ ವಾಕ್ಯವನ್ನು ನಾಲ್ಕು ವಿವಿಧ ಊರ್ಧ್ವ ಪ್ರಜ್ಞೆಯ ಸ್ತರದಲ್ಲಿ ಅರ್ಥೈಸಲಾಗುವದು.

1) ಭೌತಿಕವಾಗಿ, ಜನನದ ಪರಿಣಾಮವು ಜಗತ್ತಿಗೆ ಶಾಶ್ವತ ಪ್ರಾಮುಖ್ಯತೆ–ಯಾಗಿರುತ್ತದೆ.

2) ಮಾನಸಿಕವಾಗಿ, ಈ ಜನನವನ್ನು ವಿಶ್ವದ ಇತಿಹಾಸದಲ್ಲಿ ಶಾಶ್ವತವಾಗಿಯೇ ನೆನಪಿಟ್ಟುಕೊಳ್ಳಲಾಗುತ್ತದೆ.

3) ಚೈತ್ಯ ಪುರುಷವಾಗಿ, ಭೂಮಿಯ ಮೇಲೆ ಕಾಲ–ಕಾಲಕ್ಕೆ ಮರುಕಳಿಸುತ್ತಲೇ ಇರುವ ಜನನ ಇದಾಗಿದೆ.

4) ಆಧ್ಯಾತ್ಮಿಕವಾಗಿ, ಈ ಭೂಮಿಯ ಮೇಲೆ "ಶಾಶ್ವತ"ತೆಯ ಜನನವಾಗಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/10**

ಇಲ್ಲಿರುವ ಪ್ರಶ್ನೆ ಎಂದರೆ, ಯಾವ ಪದಭಾಗದಲ್ಲಿ ಶ್ರೀ ಅರವಿಂದರ ಬಗೆಗೆ ಮಾತನಾಡಿದೆ ಎನ್ನುವದಾಗಿದೆ. ಇಂದು ಅವರ ಜನ್ಮದಿನದ ಹಿಂದಿನ ದಿನ ಇದೆ. ಮತ್ತು ನಾನು ಈಗಾಗಲೇ "ಶಾಶ್ವತ ಜನನ" ಎಂದು ಕರೆದಿದ್ದೇನೆ. ಈಗ "ಶಾಶ್ವತ" ಎಂದರೆ ಏನು ಎಂದು ನನಗೆ ಕೇಳಲಾಗಿದೆ.

ಖಚಿತವಾಗಿಯೂ ಶಬ್ದಗಳನ್ನು ಅಕ್ಷರಶಃ ನೋಡಿದರೆ, "ಶಾಶ್ವತ ಜನನ" ಹೆಚ್ಚು ಮಹತ್ವಪೂರ್ಣವೆಂದು ಅನಿಸುವದಿಲ್ಲ. ಆದರೆ ನಿಜವಾಗಿಯೂ, ಒಂದು ಭೌತಿಕ ವಿವರಣೆ ಅಥವಾ ತಿಳುವಳಿಕೆ, ಒಂದು ಮಾನಸಿಕ ಅರ್ಥೈಸುವಿಕೆ, ಒಂದು ಚೈತ್ಯ ಪುರುಷನ ತಿಳುವಳಿಕೆ ಮತ್ತು ಆಧ್ಯಾತ್ಮಿಕ ತಿಳುವಳಿಕೆ ಹೇಗೆ ಇರಬಹುದು ಎಂದು ನಾನು ನಿಮಗೆ ವಿವರಿಸುತ್ತೇನೆ.

ಶ್ರೀ ಅರವಿಂದರು ಕೈಗೆತ್ತಿಕೊಂಡಿರುವ ಬದಲಾವಣೆಯ ಶಕ್ತಿಶಾಲಿಯಾಗಿರುವ ಕೆಲಸವು, ಯಶಸ್ಸಿನ ಪಥವನ್ನು ನಿರ್ಮಿಸುತ್ತದೆ, ಎನ್ನುವ ವಿಶ್ವಾಸವನ್ನು ಎಂದಿಗೂ ಒಂದು ಕ್ಷಣವೂ ಅನುಮಾನಿಸಬೇಡ. ಅದು ಖಚಿತವಾಗಿಯೂ ನಿಜವಾಗಿದೆ. ನಮ್ಮ ಕೈಯಲ್ಲಿರುವ ಕೆಲಸದ ವಿಷಯದ ಮೇಲೆ ಅನುಮಾನದ ನೆರಳು ಯಾವುದೂ ಇರಬಾರದು. ರೂಪಾಂತರವು ಆಗಿಯೇ ಆಗುತ್ತದೆ. ಯಾವುದೂ ಎಂದಿಗೂ ಅದನ್ನು ನಿಲ್ಲಿಸಲಾರದು. 'ಸರ್ವಶಕ್ತನ' ವಿಷಯವನ್ನು ಯಾವುದೂ ತಡೆಯುವದಿಲ್ಲ. ಬಹುಕಾಲದ ಹೋರಾಟವು ಚಿರವಾದ ವಿಜಯವಾಗಿಯೇ ಪರಿವರ್ತನಗೊಳ್ಳುವದು, ಅಂತಹ ಶ್ರೇಷ್ಠ ಸಮಯವು ಬರುವದರ ಒಳಗೇ, ಎಲ್ಲ ಅಧೈರ್ಯ ಮತ್ತು ನಿಶ್ಶಕ್ತತೆಯನ್ನು ತೊರೆಯಬೇಕು. ಜೊತೆಗೆ ಧೀರತ್ವದಿಂದ ಮುನ್ನಡೆಯಬೇಕು. ಅದಕ್ಕಾಗಿ ನಿರ್ಧರಿಸಿ.

ಈ ರೀತಿಯ ಶಾಶ್ವತತೆಯ ಎಡೆಗೆ ನಡೆಯುವ ರೂಪಾಂತರಣವು, ಅದಕ್ಕಾಗಿ ಇರುವ ಚಲನೆಯಲ್ಲಿ, ಪ್ರತಿಯೊಬ್ಬ 'ಅವತಾರಿಯೂ' ಪರಿಪೂರ್ಣ ಸಾಕ್ಷಾತ್ಕಾರದ ಹರಿಕಾರನಾಗಿರುತ್ತಾನೆ.

ಆದರೂ ಮನುಷ್ಯರು ಭವಿಷ್ಯದ ಅವತಾರವನ್ನು ವಿರೋಧಿಸಿ, ಭೂತಕಾಲದ ಅವತಾರವನ್ನು ದೇವರೆಂದು ಭಾವಿಸುವ ಪ್ರವೃತ್ತಿಯನ್ನು ಹೊಂದಿದ್ದಾರೆ. ಈಗ ಪುನಃ ಶ್ರೀ ಅರವಿಂದರು ನಾಳಿನ ಸಾಕ್ಷಾತ್ಕಾರವನ್ನು ಜಗತ್ತಿಗೆ ಸಾರಲು ಬಂದಿದ್ದಾರೆ;

ಮತ್ತು ಅವರಿಗಿಂತ ಮೊದಲು ಬಂದವರೊಂದಿಗೆ ಪುನಃ ಅವರ ಸಂದೇಶವು, ಅದೇ ರೀತಿಯಲ್ಲಿಯೇ ವಿರೋಧವನ್ನೂ ಎದುರಿಸಬೇಕಾಗುತ್ತದೆ.

ಆದರೆ ಮುಂದೆ ಶ್ರೀ ಅರವಿಂದರು ಯಾವ ಸತ್ಯವನ್ನು ಬಹಿರಂಗಪಡಿಸಿದರು ಎನ್ನುವದು ಸಾಬೀತಾಗುತ್ತದೆ, ಮತ್ತು ಅವರ ಕಾರ್ಯವೂ ಸಾಧಿಸಲ್ಪಡುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/21–22**

*ಒಮ್ಮೆ ಸುಪ್ರಮಾನಸ ಪ್ರಜ್ಞೆಯು ಸ್ಥಿರವಾಗಿ ಪ್ರತಿಷ್ಠಾಪಿತಗೊಂಡಿತು ಎಂದಾದ ಮೇಲೆ, 'ಅವತಾರಿ'ಯು ಮತ್ತೆ ಈ ಭೂಮಿಯ ಮೇಲೆ ಜನ್ಮ ತೆಗೆದುಕೊಳ್ಳುವ ಅವಶ್ಯಕತೆ ಇರುತ್ತದೆಯೇ?*

ಅತಿಮಾನಸವು ಭೂಮಿಯ ಜೀವಿಗಳಲ್ಲಿ ಪ್ರಕಟವಾದರೆ, ಈ ಪ್ರಶ್ನೆಗೆ ಉತ್ತರಿಸುವದು ಸುಲಭವಾಗುತ್ತದೆ. ನಾನು ಯಾವಾಗಲೂ ಕೇಳುತ್ತಿರುವದೇನೆಂದರೆ, ಶ್ರೀ ಅರವಿಂದರು 'ಕೊನೆಯ ಅವತಾರ'ವಾಗಿದ್ದಾರೆ ಎನ್ನುವ ಮಾತು.

ಆದರೆ ಅವರು ಮಾನವ ದೇಹದಲ್ಲಿರುವ ಕೊನೆಯ ಅವತಾರವಾಗಿದ್ದಾರೆ. ಮುಂದೇನಾಗುತ್ತದೆ ಎನ್ನುವದು ನನಗೆ ತಿಳಿದಿಲ್ಲ. ....

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 10/253 – ಶ್ರೀಮಾತೆ**

## "ಏಕತ್ವ"ವಾಗಿರುವ ಯುಗಳ ತತ್ತ್ವ

**– ಅನುವಾದ: ಪ್ರೊ. ವೀರಭದ್ರಪ್ಪ ಕೆ., ರಾಯಚೂರು**

ಇಂದು ಶ್ರೀ ಅರವಿಂದರ ಜನ್ಮ ಶತಮಾನೋತ್ಸವದ ಮೊದಲ ದಿನ. ಅವರು ತಮ್ಮ ದೇಹ ತ್ಯಾಗ ಮಾಡಿ ಹೋದರೂ ಕೂಡ ನಮ್ಮೆಲ್ಲರ ಮಧ್ಯೆ ಜೀವಂತ ಮತ್ತು ಕ್ರಿಯಾತ್ಮಕವಾಗಿದ್ದಾರೆ.

ಶ್ರೀ ಅರವಿಂದರು ಭವಿಷ್ಯತ್ತಿಗೆ ಸೇರಿದವರು ಅವರು ಭವಿಷ್ಯತ್ತಿನ ಹರಿಕಾರ. ದೈವೀ ಸಂಕಲ್ಪ ಮಾಡಿರುವ ವೈಭವದ ಭವಿಷ್ಯತ್ತನ್ನು ಸಾಕಾರಗೊಳಿಸಲು ಅವರು ನಮಗಿನ್ನೂ ಮಾರ್ಗ ತೋರಿಸುತ್ತಿದ್ದಾರೆ.

ಯಾರಿಗೆಲ್ಲ ಮಾನವತೆಯನ್ನು ಬೆಳೆಸಬೇಕಾಗಿದೆಯೋ, ಅವರೆಲ್ಲರೂ ಸಹಕರಿಸಬೇಕು...... ಭಾರತದ ಭವ್ಯ ಭವಿಷ್ಯದ ಬಗ್ಗೆ ಮತ್ತು ಅದರ ಜ್ಞಾನದ ಕೆಲಸದ ಬಗ್ಗೆ ದೂರದೃಷ್ಟಿ ಇರುವವರೆಲ್ಲ ಸಹಕರಿಸಬೇಕು.

*

*ಶ್ರೀಮಾತೆ ಮತ್ತು ಶ್ರೀ ಅರವಿಂದರ ಸಂಪರ್ಕ ಹೊಂದಿದವರೆಲ್ಲಾ, ಯಾವ ರೀತಿಯಾಗಿ ಶ್ರೀ ಅರವಿಂದರ ಜನ್ಮಶತಾಬ್ದಿಯನ್ನು ಆಚರಿಸಬೇಕು?*

ಅಭೀಪ್ಸೆಯಿರಲಿ ಮತ್ತು ವಿಧೇಯರಾಗಿರಿ ಮತ್ತು ನಿಮ್ಮ ಪ್ರಯತ್ನದಲ್ಲಿ ಪಟ್ಟು ಬಿಡದಿರಿ.

*ಸಾಮಾನ್ಯವಾಗಿ ಜನರು ಶ್ರೀ ಅರವಿಂದರ ಜನ್ಮಶತಾಬ್ದಿಯನ್ನು ಹೇಗೆ ಆಚರಿಸಬೇಕು?*

ಅವರನ್ನು ತಿಳಿದುಕೊಳ್ಳಲು, ಪ್ರಗತಿ ಸಾಧಿಸುವಲ್ಲಿ ಪ್ರಯತ್ನವನ್ನು ಹಾಕಿರಿ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/14**

ಶ್ರೀ ಅರವಿಂದರ ಜನ್ಮಶತಮಾನೋತ್ಸವದಲ್ಲಿ ಒಂದು ಒಳ್ಳೆಯ ಶ್ರದ್ಧಾಂಜಲಿಯನ್ನು ಅವರಿಗೆ ಸಲ್ಲಿಸುವುದೆಂದರೆ, ನಮಗೆ ಬೆಳೆಯಲು ಹಸಿವಿರಬೇಕು ಮತ್ತು ನಮ್ಮ ಸತ್ತೆಯ ಎಲ್ಲಾ ಭಾಗಗಳನ್ನು ಆ ದೈವೀ ಪ್ರಭಾವಕ್ಕೆ ತೆರೆದುಕೊಳ್ಳಬೇಕು, ಇದನ್ನು ಅರುಹಲೆಂದು ಅವರು ಈ ಭೂಮಿಯ ಮೇಲೆ ಜನ್ಮತಾಳಿದ್ದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/20**

ಶ್ರೀ ಅರವಿಂದರ ಪ್ರಜ್ಞೆಗೆ ನಿಮ್ಮನ್ನು ತೆರೆದಿಟ್ಟುಕೊಳ್ಳಿ ಮತ್ತು ಅದು ನಿಮ್ಮ ಜೀವನವನ್ನು ಪರಿವರ್ತಿಸಲಿ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/14**

## ಶ್ರೀ ಅರವಿಂದರ ಸಂದೇಶ

ಭವಿಷ್ಯದ ಸುಂದರ ಜಗತ್ತನ್ನು ಸಾಕ್ಷಾತ್ಕರಿಸಿಕೊಳ್ಳುವುದು, ಇದನ್ನು ಹೇಳಲೆಂದೇ ಶ್ರೀ ಅರವಿಂದರು ಈ ಭೂಮಿಗೆ ಬಂದರು.

ಈ ಜಗತ್ತು ಎಂತಹ ವೈಭವದ ಕಡೆ ಹೋಗುತ್ತಿದೆಯೆಂದು ನಿಖರವಾಗಿ ಅವರು ಹೇಳುತ್ತಾರೆ ವಿನಾ ಬರೀ ಆಶಿಸುವುದಿಲ್ಲ. ಈ ಜಗತ್ತೇನೂ ಅಕಸ್ಮಾತಾಗಿ ಆದ ಘಟನೆ ಅಲ್ಲ. ಜಗತ್ತು ಒಂದು ಕೌತುಕ, ಅದನ್ನು ವ್ಯಕ್ತಪಡಿಸುವತ್ತ ಚಲಿಸುತ್ತಿದೆ. ಈ ಜಗತ್ತು ಭವಿಷ್ಯತ್ತಿನ ಸೌಂದರ್ಯದ ಬಗ್ಗೆ ಖಚಿತತೆಯನ್ನು ಬಯಸುತ್ತದೆ ಮತ್ತು ಶ್ರೀ ಅರವಿಂದರು ಅಂತಹ ಒಂದು ಭರವಸೆಯನ್ನು ಕೊಡುತ್ತಾರೆ. ಶ್ರೀ ಅರವಿಂದರು ಯಾವುದೇ ದೇಶಕ್ಕೆ ಸೀಮಿತವಾಗಿರದೆ ಈ ಭೂಮಿಗೇ ಸೇರಿದವರು. ಅವರ ತತ್ತ್ವ ಬೋಧನೆ ನಮ್ಮನ್ನು ಉತ್ತಮವಾದ ಭವಿಷ್ಯತ್ತಿನೆಡೆಗೆ ಕರೆದೊಯ್ಯುತ್ತದೆ.

ಶ್ರೀ ಅರವಿಂದರು, ಸುಪ್ರಮಾನಸ ಜಗತ್ತು ಭೂಮಿಯ ಮೇಲೆ ಪ್ರಕಟವಾಗುತ್ತದೆ ಎಂದು ಹೇಳಲು ಭೂಮಿಗೆ ಬಂದರು ಮತ್ತು ಬರೀ ಸುಪ್ರಮಾನಸ ಪ್ರಕಟವಾಗುತ್ತದೆ ಎಂದು ಹೇಳದೆ, ಆಂಶಿಕವಾಗಿ ಸುಪ್ರಮಾನಸ ಶಕ್ತಿಯನ್ನು ಧಾರಣೆ ಮಾಡಿದರು ಮತ್ತು ಅದು ಪ್ರಕಟವಾಗಲು ಏನು ಮಾಡಬೇಕೆಂದು ಉದಾಹರಣೆಯಾದರು.

## ಶ್ರೀ ಅರವಿಂದರು ಮತ್ತು ಶ್ರೀಮಾತೆ

ನಾನು ಶ್ರೀ ಅರವಿಂದರ ಶಕ್ತಿ ಮಾತ್ರ ಇದ್ದೇನೆ ಮತ್ತು ಎಲ್ಲ ಮಕ್ಕಳ ಮಾತೇ ಇದ್ದೇನೆ.

ನನ್ನ ಮಕ್ಕಳಲ್ಲಿ ನನ್ನ ಪ್ರಜ್ಞೆ ಮತ್ತು ನನ್ನ ಸತ್ತೆಯ ಸಮಾನವಾದ ಅಂಶ ಇದೆ. ಯಾವಾಗ ಪರಿವರ್ತನೆ ಸಾಕಾರವಾಗುತ್ತದೆಯೋ ಎಲ್ಲರೂ ನನ್ನ ಮತ್ತು ಶ್ರೀಅರವಿಂದರ ಒಂದು ಅಂಶವನ್ನು ಸಮಾನವಾಗಿ ಪ್ರಕಟಿಸುವ ಹಕ್ಕು ಹೊಂದಿದ್ದಾರೆ.

ಒಂದು ಹೊಸ ಮತ್ತು ದೈವೀ ಜಗತ್ತು ಭೂಮಿಯ ಮೇಲೆ ಸಾಮಾನ್ಯವಾಗಿ ಪ್ರಕಟವಾಗಲು ಎಲ್ಲರೂ ಒಗ್ಗಟ್ಟಿನಿಂದ ಮತ್ತು ಏಕತೆಯಿಂದ ಇರಬೇಕು.

ಎಲ್ಲರೂ ತಮ್ಮ ಅಂಶವನ್ನು ತರಬೇಕು ಆದರೆ ಎಲ್ಲಾ ಭಾಗಗಳು ಒಗ್ಗಟ್ಟಿನ ಶಕ್ತಿಯಿಂದ ಮಾಡದಿದ್ದರೆ ಒಂದು ಪೂರ್ಣತೆಯು ಬರಲಾರದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/84,**

(ಶ್ರೀಮಾತೆಯವರು ಕೆಂಪು ಕಮಲವನ್ನು ಶ್ರೀ ಅರವಿಂದರ ಮತ್ತು ಬಿಳಿ ಕಮಲವನ್ನು ತಮ್ಮ ಪ್ರತೀಕವನ್ನಾಗಿ ಹೋಲಿಸಿದ್ದಾರೆ).

ಕೆಂಪು ಕಮಲ–ಪರಮಾತ್ಮ ಭೂಮಿಯ ಮೇಲೆ ಪ್ರಕಟವಾಗುವ ಸಂಕೇತ.

ಬಿಳಿ ಕಮಲ–ದೈವೀ ಪ್ರಜ್ಞೆಯ ಸಂಕೇತ.

*

ನಮ್ಮ ಪ್ರೇಮ ಒಂದು ಶಾಶ್ವತ ಸತ್ಯ.

*

ಅವರಿಲ್ಲದಿದ್ದರೆ ನನಗೆ ಅಸ್ತಿತ್ವವಿಲ್ಲ,
ನಾನಿಲ್ಲದಿದ್ದರೆ ಅವರು ಪ್ರಕಟವಾಗುವುದಿಲ್ಲ.

*

ಯಾವಾಗ ನೀವು ನಿಮ್ಮ ಹೃದಯದಲ್ಲಿ ಮತ್ತು ಆಲೋಚನೆಗಳಲ್ಲಿ ನನ್ನ ಮತ್ತು ಶ್ರೀ ಅರವಿಂದರ ಮಧ್ಯೆ ಯಾವುದೇ ವ್ಯತ್ಯಾಸಗಳನ್ನು ಮಾಡದಿದ್ದರೆ, ಯಾವಾಗ ಶ್ರೀ ಅರವಿಂದರ ಕುರಿತು ಆಲೋಚನೆ ಮಾಡುವಾಗ ನನ್ನನ್ನೂ ಕುರಿತು ಆಲೋಚಿಸಿವಂತೆ ಮತ್ತು ನನ್ನ ಕುರಿತು ಆಲೋಚಿಸಿದಾಗ ಅನಿವಾರ್ಯವಾಗಿ ಶ್ರೀ ಅರವಿಂದರನ್ನು ಆಲೋಚಿಸಿದಂತೆ, ಯಾವಾಗ ಒಬ್ಬರನ್ನು ನೋಡಿದಾಗ ಅನಿವಾರ್ಯವಾಗಿ ಇನ್ನೊಬ್ಬರನ್ನೂ ನೋಡಬೇಕು. ಏಕೆಂದರೆ ಇಬ್ಬರೂ ಒಂದೇ ವ್ಯಕ್ತಿ.

ನೀವು ಸುಪ್ರಮಾನಸ ಶಕ್ತಿ ಮತ್ತು ಪ್ರಜ್ಞೆಗೆ ನಿಮ್ಮನ್ನು ತೆಗೆದುಕೊಂಡ ಹಾಗೆ ತಿಳಿಯಲು ಪ್ರಾರಂಭವಾಗುತ್ತದೆ.

*

ಶ್ರೀಮಾತೆ: ಶ್ರೀ ಅರವಿಂದರು ನನ್ನ ಆಶ್ರಿತರು

**ಒಂದೇ ಪ್ರಜ್ಞೆ**

ಶ್ರೀಮಾತೆಯ ಪ್ರಜ್ಞೆಗೂ ನನ್ನ ಪ್ರಜ್ಞೆಯ ವೈರುಧ್ಯವನ್ನು ಹುಟ್ಟುಹಾಕಿದ್ದು ಹಳೆಯ ದಿನಗಳಲ್ಲಿ (x ಮತ್ತು y ಹಾಗು ಇತರರಿಂದ ಆ ದಿನಗಳಲ್ಲಿ ಮುಖ್ಯವಾಗಿ ಆಗಿದ್ದು) ಅವರಿಂದ ಮತ್ತು ಶ್ರೀಮಾತೆ ಅವರನ್ನು ಪ್ರಾರಂಭದ ದಿನಗಳಲ್ಲಿ ಅಷ್ಟಾಗಿ ಒಪ್ಪುತ್ತಿದ್ದ ಸಮಯದಲ್ಲಿ ಮಾತ್ರ ಹುಟ್ಟಿದ್ದು. ಆಕೆಯನ್ನು ಗುರುತಿಸಿದ ಬಳಿಕವೂ ಕೂಡ ಅವರು ಈ ಅರ್ಥಹೀನ ವಾದಕ್ಕೆ ಒತ್ತು ಕೊಡಬಾರದು.

**ಹಿಂದಿನ ಜನ್ಮಗಳ ಸಂಬಂಧ**

*ಯಾವ ಪುಣ್ಯದ ಫಲದ ಕೃಪೆಯಿಂದ ದೈವೀ ಪಾದದ ಸನಿಹ ಬರುವ ಸುಯೋಗ ಬಂದಿದೆ?*

ನಿಮ್ಮ ಆತ್ಮದ ಕರೆ ನಿಮ್ಮನ್ನು ಇಲ್ಲಿಗೆ ಕರೆತಂದಿದೆ ಮತ್ತು ಏನೋ ಒಂದು ಅಭೀಪ್ಸೆ ಅಥವಾ ಏನೋ ಒಂದು ಹಿಂದಿನ ಜನ್ಮದಲ್ಲಿ ನನ್ನ ಮತ್ತು ಶ್ರೀಮಾತೆ ಸಂಬಂಧ ನಿಮ್ಮನ್ನು ಇಲ್ಲಿಗೆ ಕರೆತಂದಿದೆ.

*

*ನನ್ನ ಪೂರ್ವಜನ್ಮದ ಯಾವ ತರಹದ ವ್ಯಕ್ತಿ ಶ್ರೀಮಾತೆಯ ಪಾದದಡಿಗೆ ಕರೆತಂದಿದೆ?*

ದೈವದೊಂದಿಗೆ ಸೇರಬೇಕೆಂಬ ಅಭೀಪ್ಸೆ ಮತ್ತು ಬಹುಶಃ ದೈವವು ಭೂಮಿಯ ಮೇಲೆ ತಿಳಿದು ಬಂದಿರುವುದು.

*

*ಜನರು ದೈವದ ದರ್ಶನದ ಸಲುವಾಗಿ ಏನೆಲ್ಲ ಪ್ರಯತ್ನ ಮಾಡುತ್ತಾರೆ; ಕೆಲವೊಬ್ಬರು ರೋದಿಸುತ್ತಾರೆ, ಮತ್ತೂ ರೋದಿಸುತ್ತಾರೆ, ಆದಾಗ್ಯೂ ಅವರು ಅದರಲ್ಲಿ ವಿಫಲರಾಗುತ್ತಾರೆ. ನಾವು ಆಶ್ರಮದಲ್ಲಿ ಅಂತಹ ಪ್ರಯತ್ನವನ್ನೇನೂ ಮಾಡುವುದಿಲ್ಲ ಮತ್ತು ಆದಾಗ್ಯೂ ನಿಮ್ಮ ಜೊತೆ ಇದ್ದೇವೆ. ಹಾಗಾದರೆ ಯಾವ ವಿಷಯವು ನಮ್ಮನ್ನು ಇಲ್ಲಿಗೆ ಕರೆತಂದಿದೆ?*

ಬಹಳಷ್ಟು ಸಂಗತಿಗಳು ಇಲ್ಲಿಗೆ ಕರೆತಂದಿವೆ – ಹಿಂದಿನ ಜನ್ಮದಲ್ಲಿ ನನ್ನ ಮತ್ತು ಶ್ರೀಮಾತೆಯವರೊಂದಿಗಿನ ಸಂಬಂಧ, ನಿಮ್ಮ ಪ್ರಕೃತಿಯಲ್ಲಿನ ಬೆಳವಣಿಗೆಗೆ ಹಿಂದಿನ ಜನ್ಮದಲ್ಲಾದ ಬದಲಾವಣೆ...

*

**ವಿಕಾಸವನ್ನು ಮುಂದುವರಿಸಿಕೊಂಡು ಹೋಗುವುದು**

*ನೀವು ಮತ್ತು ಶ್ರೀಮಾತೆ ಭೂಮಿ ಸೃಷ್ಟಿಯಾದಾಗಿನಿಂದ ಅದರ ಮೇಲೆ ಇದ್ದೀರಿ ಎಂದು ಕೇಳಲ್ಪಟ್ಟಿದ್ದೇನೆ, ಲಕ್ಷಾಂತರ ವರ್ಷಗಳಿಂದ ಛದ್ಮವೇಶದಿಂದ ಏಕೆ ಇರುವಿರಿ? ನಾನು ಛದ್ಮವೇಷದಿಂದ ಅಂತ ಹೇಳುತ್ತಿದ್ದೇನೆ, ಏಕೆಂದರೆ ನೀವು ಈಗ ಮಾತ್ರ ನಿಮ್ಮ ನಿಜ ಸ್ವರೂಪದಲ್ಲಿ ಪ್ರಪಂಚಕ್ಕೆ ಕಾಣಿಸಿಕೊಳ್ಳುತ್ತಿದ್ದಿರಿ.*

ವಿಕಾಸವನ್ನು ಮುಂದುವರಿಸಿಕೊಂಡು ಹೋಗುವುದಕ್ಕಾಗಿ.

*

*"ವಿಕಾಸವನ್ನು ಮುಂದುವರಿಸಿಕೊಂಡು ಹೋಗುವುದಕ್ಕಾಗಿ"* ಎನ್ನುವುದನ್ನು *ತಿಳಿಯಲು ಆಗುತ್ತಿಲ್ಲ. ನೀವು ಸಂಪೂರ್ಣವಾಗಿ ವಿವರಿಸಲಾರಿರಾ?*

ಅದರ ಅರ್ಥವೇನೆಂದರೆ ಮಾನವನ ಸಂಪೂರ್ಣ ಇತಿಹಾಸ ಬರೆದ ಹಾಗೆ. ನಾನು ಏನು ಹೇಳಬಹುದೆಂದರೆ ವಿಶೇಷವಾದ ಅವರು ಅವರೋ ಮೌಲ್ಯವಾಗಿ ಮತ್ತೂ ಹೆಚ್ಚಿನ ಹಂತಕ್ಕೆ ವಿಕಾಸವಾಗಲು ಅನುಕೂಲವಾಗುತ್ತದೆ. ಮತ್ತೊಂದು ದೈವದ ಅಂಶವಾಗಿರುವ ಏನೋ ಒಂದು, ಯಾವಾಗಲೂ ಯಾವುದೇ ದಿಕ್ಕಿನಲ್ಲಿ ಪ್ರತಿ ಹಂತದಲ್ಲೂ ಮುಂದೆ ಹೋಗಲು ಸಹಾಯ ಮಾಡಲು ಇರುತ್ತದೆ.

*

*ನೀವು ಮತ್ತು ಶ್ರೀಮಾತೆ ಪ್ರಾರಂಭದಿಂದ ಸತತವಾಗಿ ಭೂಮಿಯ ಮೇಲೆ ಇದ್ದಿದ್ದೀರಿ. ಒಬ್ಬರಾದ ನಂತರ ಮತ್ತೊಬ್ಬರು ಅವತಾರ ವಾಗಲು ಅವಶ್ಯಕತೆ ಏನು ಇತ್ತು?*

ನಾವು ಭೂಮಿಯ ಮೇಲೆ ಅವತಾರದ ತರಹ ಅಲ್ಲ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/91**

# ಯುಗಳ ತತ್ತ್ವಗಳ ಅವತಾರ

– ಪುಟ್ಟು ಕುಲಕರ್ಣಿ

ಪುರುಷ ಮತ್ತು ಸ್ತ್ರೀ, ನರ ಮತ್ತು ನಾರಾಯಣ, ಮಾನವ ಮತ್ತು ದೇವ, ಸೃಷ್ಟಿ ಮತ್ತು ಲಯ, ಪ್ರಕಾಶ ಮತ್ತು ತಮ ಹೀಗೆ ಯುಗಳ ತತ್ತ್ವಗಳಲ್ಲಿಯೇ ನಮ್ಮ ಅಸ್ತಿತ್ವವಿದ್ದರೂ, ಅವು ಬೇರೆ ಬೇರೆ ಅಲ್ಲ. ಇದನ್ನು ಶ್ರೀ ಅರವಿಂದರ 'ಸಾವಿತ್ರಿ'[1–5–56]ಯಲ್ಲಿ ಪ್ರತಿಯೊಂದು ಹಂತವನ್ನೂ ವಿವರಿಸುತ್ತಾರೆ.

ಸರ್ವ–ಮೂಲದಲಿ ಗರ್ವಿತದ ಅವಳ ಆ ಧೂರ್ತ–ಪಥದ ದಂಡು
ಅವಳೀಗ ತಾನೆ ತನ್ನಲ್ಲಿ ಮತ್ತೆ ಸಮಭಾವಗೊಳಿಸಿಕೊಂಡು,
ಪ್ರತ್ಯಭಿಜ್ಞೆಯಲಿ ನೈಪುಣ್ಯದಿಂದ ಭೂತಗಳ ತಂದು ಸೃಷ್ಟಿ
ಅವಳೀಗ ಬಟ್ಟ–ಬಯಲುಗಳ ಮುಕ್ತ–ಕೂಟದಲಿ ಲಗ್ನ–ದೃಷ್ಟಿ;

ಅಗಣಿತದ ಭಣಿತ–ಮಣಿತದಲಿ–ಕುಣಿತ ಮಣಿ–ಮುಕುಟ–ಪಾತ್ರಗಳಲಿ
ಪ್ರಜ್ಞಾನ ಘನದ ಅದ್ಭುತದ ಹಾಸು–ಹೊಕ್ಕಿನಾ ಸೂತ್ರಗಳಲಿ
ವಿಜ್ಞಾನಕೀಗ ಈ ಬೆರಗು–ನೇಯ್ಗೆ ಅನವರತ ರಕ್ಷೆಯಾಗಿ
ಜೀವ–ಸೃಜನಕ್ಕೆ ಜೀವಾಳವಾಗಿ ವೃಷ್ಟಿಗಳು ಸೃಷ್ಟಿಯಾಗಿ,

ದೈವ–ಕಲ್ಪಕದ ಅದ್ಭುತದ ಕರ್ಮಗಳ ಅಂತರಂಗವಿಲ್ಲಿ
ಸೂಕ್ಷ್ಮಾತಿಸೂಕ್ಷ್ಮ ಹಂತದಲಿ ಈಗ ಸಂಹಿತೆಯ ರೂಪದಲ್ಲಿ
ಮಾಯೆಯನು ಸಹಿತ ವಾಸ್ತವಕೆ ತರಲು ಅವಳದನು ಯೋಗಗೊಳಿಸಿ
ಇಲ್ಲದಿರೆ ನಿತ್ಯ ನಿಗ್ರಹಕೆ ಸಿಕ್ಕ ತತ್ತ್ವವನು ಮುಕ್ತಗೊಳಿಸಿ;

ದಂಡೆಗಳು ಇರದ ಮಂಡಲದಖಂಡ ಬ್ರಹ್ಮಾಂಡ ಭಾಂಡವೀಗ
ಅವಳಲ್ಲಿ ತಾನು ವಿಸ್ಮಯದ ಲೋಕ ಅದ್ಭುತದಿ ನಿತ್ಯವಾಗ
ಭೌತ–ಸಂಕುಲದ ಪಾಲಕಳು ಅವಳು ರಕ್ಷಿಸಲು ತನ್ನ ಸೃಷ್ಟಿ
ಸುಪ್ತವಾಗಿರುವ ಆ ಗುಹ್ಯ ಬಲದ ಸಾಮರ್ಥ್ಯ ಕೃಪೆಯ ದೃಷ್ಟಿ;

ಆ ಅನಂತತೆಯ ಆತೀತವಾದ ನೈಪುಣ್ಯವದುವು ತಾನು
ಅವಳಾತ್ಮ ಮಿಡಿತದಲಿ ಸ್ಮೃತಿಯ ಸತತ ವರ್ಧಿಸುವ ಚಿತ್ರಭಾನು,
ಆತೀತ ಪರದೆ ಹಿಂದಡಗಿ ಇರುವ ಅವ್ಯಕ್ತ ದೈವಲೀಲೆ

ಲೀಲೆಗಳು ಉಕ್ಕೆ ಲೋಲದಲಿ ನೆಲೆಯ ಆ ಕೃಷ್ಣರಂಧ್ರ ಮಾಲೆ

ಅಚಿತಿ ನಿರ್ಮಿತದ ಇಂದ್ರಜಾಲಗಳು ನಿಯತಿಯಾ ಅಗ್ರ ಭಾಗ
ಚಿಮ್ಮುತಲಿ ಹೊಮ್ಮಿ ಧುಮ್ಮುಕ್ಕುತಿರುವ ಹೊನಲಿನಾ ಧಾರೆಯಾಗ;
ಮುಕ್ತದಲಿ ಶಕ್ತ ಆ ಋತಂಭರದ ಅವಕಾಶ ಶಕ್ತಿ–ಪೂರ
ಶಾಸನದ ಗಡಿಯ ಆಚೆಗಿದೆ ಸತತ ಋತ–ಚೇತ ನಿಯತಿ ಸಾರ

ಸಾವಿರದ ಲೋಕದಂತರಾಳದೆದೆಯಿಂದ ಉದಿತಗೊಂಡು
ಹೊಮ್ಮುತಲಿ ಬಂದ ಚೇತನದ ಧಾರೆ–ಧಾರೆಗಳು ಇವುಗಳಿಂದು,
ಆ ಭವ್ಯ ದೇವಪ್ರಸ್ಥಾನದಿಂದ ಪಡಿಮೂಡಿಕೊಂಡು ಬಂದು
ವಾಗ್ಬೀಜಗಳು ವಾಣಿ ನಾದದಲಿ ಹ್ಲಾದ ಪ್ರಹ್ಲಾದವನ್ನು ತಂದು,

ಬ್ರಹ್ಮಾಂಡ ಪ್ರಭೆಯ ವಿಶ್ವಾತ್ಮ ಪ್ರತಿಭೆಯಾ ಆತ್ಮದಂತರಾಳ
ಅಲ್ಲಿರುವ ಸೂಕ್ಷ್ಮಧ್ವನಿಯಲ್ಲಿ ಈಗ ಅನುಶಾಸನಕ್ಕೆ ಮೇಳ
ಜಾಲಮಾರ್ಗದಲಿ ಹಣಿಕಿಕ್ಕಿ ಮತ್ತೆ ದೃಷ್ವಾರ –ದೃಷ್ಟಿ ಜಿಗಿತ
ಮತ್ತೆ ಒಳಗಿವಿಯ ಆಳದಲಿ ಇಳಿಯೆ ಸಂದೇಶ ಸಾರ ಭೂತ,
ಮಧ್ಯದಲಿ ಎದ್ದು ಬರುತಿರುವ ವಿಷಮ ಸದ್ದುಗಳು ನಿರ್ವಿಶೇಷ
ಮತ್ತದೋ ಇತ್ತ ಅತಿಚೇತನಕ್ಕೆ ಅಗಣಿತದ ಕರ್ಮವೇಷ,

ಸಮತೋಲ ಹಾಸು–ಹೊಕ್ಕಿನಲಿ ರಾಶಿ ಅದ್ಭುತದ ಜಾಲ–ಯಂತ್ರ
ಬ್ರಹ್ಮಾಂಡ ಕಲೆಯ ಅವಳ ಈ ನೇಯ್ಗೆ ಅತಿಮಾನುಷೀಯ ತಂತ್ರ.

ಏಕೈಕವಾದ ಆ ವಿಶ್ವಧಾಮದೋತ್ತೀರ್ಣ ಜ್ಯೋತಿ ದೀಪ
ಇಲ್ಲಿರುವ ಪಿಂಡ ಪಿಂಡಗಳು ಎಲ್ಲ ಅದರ ಅಸ್ಮಿತೆಯ ರೂಪ
ಅವನ ದೆಸೆಯಿಂದ ಇವರಿಗಸ್ತಿತ್ವ; ಅವನುಸಿರು ಇವರ ಜೀವ;
ಗೂಢ ಸಾನಿಧ್ಯವೀಗ ಅಚ್ಚಳಿಸಿ ವಿಸ್ಮರಣ ಮೂರ್ತ ಭಾವ

ಮಹತ್–ಶಕ್ತಿಯಾ ಜಗನ್ಮಾತೆಯಾ ಲೀಲೆಗಳ ಕ್ರೀಡೆಗಿಂದು
ಸಂದಿಗ್ಧದಲ್ಲಿ ಆವರ್ತವಿರುವ ಲೋಕದೆಡೆ ಅವನು ಬಂದು
ಶಕ್ತಿಯಲಿ ಜೊತೆಗೆ ರೂಪದಲಿ ಅವಳ ಮಾರ್ಗದಿಂದಡಗಿ ಅಲ್ಲಿ
ಸುಪ್ತ ಚೈತನ್ಯ ಸಚ್ಚಿದಾನಂದ ಸಮ್ಯಕ್ಸಮಾಧಿಯಲ್ಲಿ

**(ಸಾವಿತ್ರಿ; ದಳ 1 ರೇಣು 5 ಪುಟ 86)**

All here where each thing seems .. ಎನ್ನುವದು 'ಯತ್ಪಿಂಡೇ ತದ್ ಬ್ರಹ್ಮಾಂಡೇ' ಎಂದು ಯೋಗ ಶಾಸ್ತ್ರವೂ ಹೇಳುತ್ತಿದೆ. (ಸೂರ್ಯಾರ್ಂಕ ಗ್ರಂಥದ 106 ನೇ ಪುಟ). ಇಲ್ಲಿ ವಿಶ್ವೋತ್ತೀರ್ಣ ಎಂದರೆ, 'ಜಗತ್ ಭಾವವನ್ನು ಬಿಟ್ಟು ಆಚೆ ಹೋದ' ಎಂದಿದೆ. ಇದು ವಿಶ್ವಾತ್ಮವಾಗುವತ್ತ ಎಂತಲೂ ಅರ್ಥವಿದೆ. ಪ್ರಾಚೀನ ಕಾಲದಲ್ಲಿ ರಾಶಿ ಹೆಸರುಗಳಲ್ಲಿ (ಮಧು–ಮಾಧವ–ಶುಕ್ರ–ಶುಚಿ–ನಭ–ನಭಸ್ಯ–ಈಶ–ಊರ್ಜ–ಸಹ–ಸಹಸ್ಯ–ತಪ–ತಪಸ್ಯ ರಾಶಿಗಳು) ಇದರ ಬಳಕೆ ಇತ್ತು.

ಇದನ್ನು 'ಸೂರ್ಯ ವಿಜ್ಞಾನ'ವೆಂದು ಅಧ್ಯಯನ ಮಾಡಲಾಗುತ್ತಿದೆ. ಇದನ್ನೇ ಋಗ್ವೇದವೂ ಸಹಿತ 'ನೂನಂ ಜನಾಃ ಸೂರ್ಯೇಣ ಪ್ರಸೂತಾ। ಪ್ರಾಣಃ ಪ್ರಜ್ಞಾನವತ್॥' ಎಂದು ಅಭಿವ್ಯಕ್ತಿಸಿದೆ. ಆಗ ಸೂರ್ಯನಿಗೆ ಇಂದ್ರನೆಂದು ಹೆಸರಿತ್ತು. ಅಂತರಿಕ್ಷದ ದೇವತೆ ಇಂದ್ರ(ಸೂರ್ಯ)ನಾದರೆ ದ್ಯುಲೋಕದ ದೇವತೆ ಸೂರ್ಯನೇ ಆಗಿದ್ದಾನೆ. ಅಂತರಿಕ್ಷದ ಇಂದ್ರನಿಗೆ (ಸೂರ್ಯನಿಗೆ) 14 ರೂಪಗಳು – (1) ವಾಕ್ (2) ಪ್ರಾಣ (3) ಮನ (4) ಬಲ (5) ಗತಿ (6) ವಿದ್ಯುತ್ (7) ಪ್ರಕಾಶ (8) ಐಶ್ವರ್ಯ (9) ಪರಾಕ್ರಮ (10) ರೂಪ (11) ಸೂರ್ಯ (12) ಚಂದ್ರ (13) ಉತ್ಸಾಹ (14) ಆತ್ಮ (ಇಂದ್ರ ವಿಜ್ಞಾನದಲ್ಲಿ ಇದರ ವಿವರಗಳಿವೆ).

ಇಂದ್ರನು ಅಂತರಿಕ್ಷದಲ್ಲಿ ವಿದ್ಯುತ್ ಸ್ವರೂಪದಲ್ಲಿದ್ದಾನೆ. ಅಥವಾ ವಾಯುವಾಗಿದ್ದಾನೆ. ಇದನ್ನು ಸಹಸ್ವಾನ್ ಮತ್ತು ಮರುತ್ವಾನ್ ಎಂದು ಅಧ್ಯಯನ ಕ್ರಮವಿದೆ. ಸಹಸ್ವಾನ್ ಎಂದರೆ ಸೂರ್ಯ–ರೂಪ. ಶ್ರುತಿಯೂ ಸಹಿತ ಇದನ್ನೇ, 'ಯಥಾಗ್ನಿಗರ್ಭಾ ಪೃಥಿವೀ ತಥಾ ದ್ಯೋರಿಂದ್ರೇಣ ಅಸ್ತು ಗರ್ಭಿಣೀ' ಎಂದು ವಿವರಿಸುತ್ತದೆ. ಅಂದರೆ ಸೂರ್ಯನ ಗರ್ಭದಲ್ಲಿ ಇಂದ್ರನಿದ್ದಾನೆ ಎಂದರ್ಥ.

**ವಿಶ್ವೋತ್ತೀರ್ಣವಾದ ಏಕ (Transcedent One)**

ಇನ್ನು ನೈಜ ಸಂಖ್ಯೆಗಳನ್ನು (Real Numbers) ಈ ರೀತಿಯಲ್ಲಿ ವಿಶ್ವೋತ್ತೀರ್ಣವೆಂದು ಕರೆಯಲಾಗುತ್ತದೆ. ಇವುಗಳು ಅಬೀಜಿಯ ಸಂಖ್ಯೆಗಳ (Non algebraic Numbers) ಪರಿಮೇಯ ಸಹಾಯದಿಂದ ಯಾವುದೇ ಬೈಜಿಕ ಸಮೀಕರಣ ಗಳಿಂದ ಮೂಲವಾಗಿ ನಿರೂಪಿಸಲಾಗದ ಸಂಖ್ಯೆ ಉದಾ: ಪೈ [22/7]. ಇನ್ನು ಗಣಗಳು ಎಂದರೆ ನಕ್ಷತ್ರಗಳು. ಪತಿ ಎಂದರೆ ಒಡೆಯ. ಹೀಗಾಗಿ ಗಣಪತಿ ಎಂದರೆ ಸೂರ್ಯನೂ ಹೌದು. ಉಡುಪತಿ ಎಂದರೆ ಚಂದ್ರ. ಹೀಗಾಗಿ

ಸೂರ್ಯ ಮತ್ತು ಚಂದ್ರ ಇಬ್ಬರೂ ಇಂದ್ರನ (ವಿಶ್ವಾತ್ಮನ) ಅಂದರೆ ಋತದ ಹೆಸರುಗಳಾಗಿವೆ.

ಈ ಉಭಯವಿದ್ದಂತೆ ಕಂಡರೂ, ಅದು ಹಲವು ಲೀಲೆ ಕರ್ಮಗಳಲ್ಲಿ "ಏಕ"ವಾಗಿಯೇ ಇರುತ್ತದೆ. ದ್ವಂದ್ವಭಾವವದು ಅಳಿದು ಘನದ ತತ್ತ್ವದ ಕ್ರಿಯೆಯು ರೂಪುತಾಳುತ್ತದೆ. ಅರಿವಿನಲ್ಲಿರಲಿ ಅಥವಾ ಮರೆವಿನಲ್ಲಿರಲಿ ಅವರು ಸದಾ ಜೊತೆಜೊತೆಯಾಗಿಯೇ ಸಂವಾದದಲ್ಲಿ ಇರುತ್ತಾರೆ. ಅಲ್ಲಿರುವ ಚಿಜ್ಜ್ಯೋತಿ ಮತ್ತು ಘನಮಾಯೆಯೂ ಸಹಿತ ಅವರ ಪರಿವರ್ತನೀಯ ಸ್ವರೂಪವಾಗಿಯೇ ರೂಪುಗೊಳ್ಳುತ್ತಿರುತ್ತದೆ. ಇದರ ಪ್ರತಿಫಲನವಾಗಿಯೇ ನಮ್ಮ ತೋಷ, ನಮ್ಮ ಕ್ಲೇಶಗಳು ಮೂಡಿ, ಅವರ ಪಾಲಿಗೆ ಮಲ್ಲಯುದ್ಧದಂತಾಗುತ್ತವೆ. ನಮ್ಮ ಜೀವನದಿಯಲ್ಲಿ ಮತ್ತು ನಮ್ಮ ಚಿಂತನದಲ್ಲಿ ಅವರು ಸಂಯೋಗಗೊಳ್ಳಲು ಸದಾ ಸಿದ್ಧವಾಗಿದ್ದಾರೆ. ಹೀಗಾಗಿಯೇ ಅವರು ಪರಮಾತಿಪರಮ ಗೋಪ್ಯದಲ್ಲಿ ಸಂಲಗ್ನಗೊಂಡು ಐಕ್ಯವಾಗಿಯೇ ಇದ್ದು "ಏಕ"ವಾಗಿಯೇ ತೋರುತ್ತಾರೆ.

ವಿಕಾಸದ ಬ್ರಹ್ಮಾಂಡೀಯ ಆಯಾಮಗಳನ್ನು ಅರ್ಥೈಸಿಕೊಳ್ಳಲು ಶ್ರೀ ಅರವಿಂದರು ಸೂತ್ರಗಳನ್ನು ಅನಾವರಣಗೊಳಿಸಿದ್ದಾರೆ. ಅವುಗಳಲ್ಲಿ ಪ್ರಮುಖವಾಗಿರುವ ಸೂತ್ರವೆಂದರೆ 'ವೇದಕ್ಕೆ ವೇದವೇ ಕೀಲಿಕೈಯನ್ನು ಒದಗಿಸುತ್ತದೆ'. ಈ ಸೂತ್ರದ ಪ್ರಕಾರವೇ, ಶ್ರೀ ಅರವಿಂದರ ಅಭಿವ್ಯಕ್ತಿಗಳ ಜೊತೆಗೆ ಸ್ಪಂದಗೊಳ್ಳಲು ಸುಲಭವಾದ ಪಥವೊಂದು ದೊರಕುತ್ತದೆ. ಅದರಲ್ಲೂ ಈ ಸಂಚಿಕೆಯ ಆಶಯವಾಗಿರುವ "ಯುಗಳ ತತ್ತ್ವಗಳ ಅವತಾರ"ದ ವಿಷಯದಲ್ಲಿ, ಅವರು ನೀಡಿರುವ ಆಯಾಮಗಳನ್ನು ಅರ್ಥೈಸಿಕೊಳ್ಳುವಲ್ಲಿ ಒಂದು ಪುಟ್ಟ ಪ್ರಯತ್ನವಿದು.

**"ವೇದವೇ ವೇದಕ್ಕೆ ಕೀಲಿಕೈಯನ್ನು ನೀಡುತ್ತದೆ"**, ದಿವ್ಯ ತೇಜಕಾಂತಿಯ ನೀಹಾರಿಕೆಯು ಶಾಶ್ವತತೆಯ ನಾದಗಳಿಂದಲೇ ರೂಪಿಸಲ್ಪಟ್ಟಿದೆ ಎಂದು ಸಾವಿತ್ರಿಯಲ್ಲಿ ಅದರ ವಿವರಗಳನ್ನು ಒದಗಿಸಿದ್ದಾರೆ. ಮಾನವನ ಚಿತ್ತದ ಮತ್ತು ವೈಶ್ವಿಕ ಚಿತ್ ವಿಷಯದಲ್ಲಿ, ದೃಷ್ಟಾರರಾಗಿ ಶ್ರೀ ಅರವಿಂದರು ಆ ಶಾಶ್ವತವಾಗಿರುವ ಅಂಶಗಳ ಬಗೆಗೆ – ಅಗ್ನಿ, ಆಕಾಶ, ವಾಯು, ಜಲ ಮತ್ತು ಭೂಮಿಯ ಕುರಿತು ಹೇಳುವದರ ಜೊತೆಗೆ ನೀಹಾರಿಕೆಗಳ ಉಗಮದ ಕುರಿತೂ ಅವರು ಅಭಿವ್ಯಕ್ತಿಸಿದ್ದಾರೆ. ಪ್ರಜ್ಞೆಯ (ಪರಮ ಚಿತ್ತಿನ) ಬ್ರಹ್ಮಾಂಡ ಸ್ವರೂಪದ ಆಯಾಮದ ಕುರಿತು ಅವರ ಪಥನಿರ್ದೇಶನವಿದೆ. ಮಾನವನ 'ಮನಸ್ಸು' ಎನ್ನುವದೂ ಸಹಿತ

ವಿಶ್ವನಾದದ ಹಾಗೆ ಶಾಶ್ವತತೆಯ ಸ್ವರೂಪವನ್ನೇ ಹೊಂದಿದೆ, ಇದು ಕಾಲವೂ ಆಗಿದೆ. ಜೊತೆಗೆ ಆಕಾಶವೂ ಆಗಿದೆ. ಅದು ಪರಾಕಾಶದಲ್ಲಿ ಸ್ಥಿತಗೊಂಡಿದೆ.

ಈ ವೈಶ್ವಿಕ–ನಾದವು (ತಾರಾ) ಆಗಿದ್ದು ಇದು 'ನಾದದ' ಮೂಲವಾಗಿದೆ. ಈ ನಾದವು ಸೌರಮಂಡಲದ ವ್ಯವಸ್ಥೆಯ ತಾರಾ ಸ್ವರೂಪವೇ ಆಗಿದೆ. ಈ ನಾದವೇ ಧ್ವನಿಯ ಆಧಾರವಾಗಿರುತ್ತದೆ. ಈ ಧ್ವನಿಯು ಶಬ್ದಕ್ಕೆ ಆಧಾರ ಒದಗಿಸುತ್ತದೆ. ಈ ಹಂತದಲ್ಲಿ ದೃಷ್ಟಗೊಂಡು, ಅಭಿವ್ಯಕ್ತಗೊಂಡ ಉದ್ಗಾರಗಳೇ ವೇದ. ಈ ವೇದಗಳು ಉಪನಿಷತ್ತುಗಳಿಗೆ ಆಧಾರವಾಗಿವೆ. ಉಪನಿಷತ್ತು ವಿಶ್ವ ಪ್ರಜ್ಞೆಯ ಸ್ವರೂಪದಲ್ಲಿಯೇ ಮಾನವನ ಪ್ರಜ್ಞೆಯನ್ನು ಈ ಬ್ರಹ್ಮಾಂಡ–ಪ್ರಜ್ಞೆ ಅಥವಾ ಋತ–ಚೇತನದ ಜೊತೆಗೆ ಸ್ಪಂದಗೊಂಡು ಅನಂತಾನಂತವಾಗುವತ್ತ ವಿಕಾಸಗೊಳ್ಳುತ್ತದೆ.

ಪ್ರಜ್ಞೆಯಿಂದ ಉದಿತಗೊಂಡ ಸ್ಫೂರ್ತಿಯು ವಾಕ್ ಆಗಿ ರೂಪಾಂತರ–ಗೊಳ್ಳುತ್ತದೆ, ಇದು ಸಂಪೂರ್ಣವಾಗಿ ಸರ್ವೋಚ್ಚ ಸಂದೇಶವಾಗಿಯೇ ಸಂವಹನಗೊಳ್ಳುತ್ತಿದ್ದು, ಅದು ತೇಜಕಾಂತಿಯ ಮಿಂಚಿನೋಪಾದಿಯಲ್ಲಿ ಸ್ಪರ್ಶಗೊಳ್ಳುತ್ತದೆ. ಇದು ಸೃಷ್ಟಿಯ ಉದ್ದೇಶವನ್ನು ಈಡೇರಿಸಲು ಹಾಗೂ ಗೂಢವಾಗಿರುವ ಸರ್ವಸ್ವದ ಅಂತರಂಗದ ಲಯಬದ್ಧತೆಯನ್ನೂ ಅದೇ ರೀತಿ ಮರ್ತ್ಯ ಬದುಕಿನಲ್ಲಿಯೂ ಅತೀಂದ್ರಿಯ ಹಂತದ ಅಭಿವ್ಯಕ್ತಿಯನ್ನು ರೂಪಿಸುತ್ತದೆ. ಈ ರೀತಿಯಿರುವ 'ನಾದವು' ಯಾವಾಗಲೂ ನೀರವ ಮೌನದೊಂದಿಗೇ ಸಂವಹನ ಹೊಂದಿರುತ್ತದೆ, ಅದರೊಡನೇ ಸ್ಪಂದಿಸುತ್ತಿರುತ್ತದೆ. ಇದನ್ನು ಅರಿತುಕೊಳ್ಳುವ ಮತ್ತು ಅದರೊಡನೆ ಸದಾ ಸ್ಪಂದಗೊಳ್ಳುತ್ತಲೇ ಇರುವ ಅಭೀಪ್ಸೆಯನ್ನು ಮಾನವನು ಹೊಂದಿದ್ದಾನೆ.

ಇಂತಹ ಒಂದು ವೈಶ್ವಿಕ ಸಂಗತಿಯು ಭೂಮಿಗೆ ಲಭ್ಯಗೊಳ್ಳುವ ಸಲುವಾಗಿಯೇ, ಭೂಮಂಡಲದ ರಕ್ಷಾಕವಚ(ಗೋಲ್ಡೀ ಝೋನ್)ದಲ್ಲಿ ಸ್ಥಿತಗೊಂಡಿದೆ. ಇದು ಜ್ಞಾನೋದಯದ ದ್ವಾರವಾಗಿದೆ. ಆ ಹಂತದಲ್ಲಿ ಸ್ಪಂದಗೊಂಡಾಗ, ಅಲ್ಲಿರುವ ನಾದವು ಇದ್ದಕಿದ್ದಂತೆಯೇ ಧ್ವನಿಯಾಗಿ ರೂಪು ತಾಳುತ್ತದೆ. ಮಾನವನ ವಿಕಾಸದ ಪ್ರಕ್ರಿಯೆಯನ್ನು ಚಾಲನೆಗೊಳಿಸಿ ಪ್ರಗತಿಯತ್ತ ಒಯ್ಯುತ್ತದೆ. ಪರಿಪೂರ್ಣತೆಯತ್ತ ಪಥವನ್ನೂ ತೋರುತ್ತದೆ. ಈ ನಾದವು ವಾಣಿಯ ರೂಪದಲ್ಲಿದ್ದಾಗ, ಇದು ಉಪನಿಷತ್ತುಗಳ ಉನ್ನತ ಆಧ್ಯಾತ್ಮಿಕ ವಿಷಯಗಳನ್ನು ಹೊಂದಿರುತ್ತದೆ ಮತ್ತು ಅದನ್ನು 'ವೇದ'ವೆಂದು ಕರೆಯಲಾಗುತ್ತದೆ.

ಉಪನಿಷತ್ತಿನ ಭಾಷೆಯನ್ನು ಯೋಗ–ಭಾಷೆ ಎಂದು ಕರೆಯಲಾಗುತ್ತದೆ. ವಾಕ್‌ನ ಈ ಪಶ್ಯಂತಿ ಸ್ಥಿತಿಯು ಮಾನವನ ಹೃದಯದಲ್ಲಿದೆ. ಇದು ಪ್ರಕೃತಿ–ಲಯ–ಪ್ರಜ್ಞೆಯೊಂದಿಗೆ ಪರಿಪೂರ್ಣ ಸ್ಥಿತಿಯಾಗಿದೆ. (ಅಂದರೆ ಆಲಿಸಲು ಬೇಕಾದ ರೂಪಕ್ಕೆ ಇನ್ನೂ ಪರಿವರ್ತಗೊಡಿರುವದಿಲ್ಲ). ಇದು ಬೀಜದ ರೂಪದಲ್ಲಿ ಮಾತ್ರ ಇರುತ್ತದೆ. ಈ ವೈಶ್ವಿಕನಾದವನ್ನು ತಾರಾ (ಈಥರ್) ಎಂದು ಕರೆಯಲಾಗುತ್ತದೆ ಮತ್ತು ಇದು ಭೂಮಿಗೆ ರಕ್ಷಣೆಯ ಪದರವನ್ನು ಒದಗಿಸುವ ಸೌರ–ವ್ಯವಸ್ಥೆಯ ಗೋಲ್ಡಿ ವಲಯದಲ್ಲಿ ತನ್ನ ಅಲೆಗಳಲ್ಲಿ ಸದಾ ಸಂಚಲನದಲ್ಲಿ ಇರುತ್ತದೆ.

## ಕಾಲ, ಅವಕಾಶ ಮತ್ತು ಪ್ರಜ್ಞೆ (ಚಿತ್ತು)

ಇಲ್ಲಿ ಋತವು ಭೂಮಂಡಲದ ವ್ಯವಸ್ಥೆಯಲ್ಲಿ ರಚಿತಗೊಳ್ಳುವ ಜೀವನದ ಕುರಿತು ಗಮನಿಸಿದಲ್ಲಿ, ಬ್ರಹ್ಮಾಂಡದ ಸತ್ಯ–ಪ್ರಜ್ಞೆಯ(ಋತ ಚೇತನದ) ಅನಂತತೆಯ ನ್ಯಾನೋ(ಸೂಕ್ಷ್ಮಾತಿಸೂಕ್ಷ್ಮ) ರೂಪವೇ, ಇದು ಸುರಕ್ಷಾ ವಲಯದಿಂದ ಅವತರಣಗೊಂಡು ಬಂದು, ಒಂದು ನಿಗದಿತ ಅವಧಿಗೆ ಮಾತ್ರ ಭೌತಿಕ ದೇಹವಾಗಿ ರೂಪಾಂತರಗೊಳ್ಳುತ್ತದೆ, ಇದು ಸಾಕ್ಷಾತ್ಕಾರದ ಅಥವಾ ಪರಿಪೂರ್ಣತೆಯತ್ತ ವಿಕಾಸದ ಪ್ರಕ್ರಿಯೆಯ ಅಲೆಯನ್ನು ಮುಂದುವರಿಸಲು. ಜೀವನವೇ ಒಂದು ಶಾಶ್ವತ ವಿದ್ಯಮಾನವಾಗಿರುವಂತೆ ರೂಪಣೆಗೊಂಡಿದೆ. ತನ್ನನ್ನು ತಾನು ಅರಿತುಕೊಳ್ಳಲು ನಿಶ್ಶೂನ್ಯದ ಹಂತದ ಮಿಡಿತವು ಇದಾಗಿದ್ದು, ಇದು "ಸ್ಥಿತಿ ಮತ್ತು ಪ್ರಕೃತಿ"ಯಾಗಿ ಜೀವನವನ್ನು ಸೂಚಿಸುತ್ತದೆ.

## ಜೀವನದ ಶಾಶ್ವತ ಮಾರ್ಗ

ಅನಂತವಾದ ಬ್ರಹ್ಮಾಂಡ(ಕಾಸ್ಮಿಕ್) ಪ್ರಜ್ಞೆಯ ಸೂಕ್ಷ್ಮಾತಿಸೂಕ್ಷ್ಮ ಸ್ಫುಲಿಂಗ (ನ್ಯಾನೋ ಸ್ಪಾರ್ಕ್), ಹಾಗೂ ಖೇಖಮಧ್ಯದಿಂದ(ಕಾಸ್ಮಿಕ್ ಝೆನಿತ್) ತನ್ನ ಪ್ರಯಾಣವನ್ನು ಪ್ರಾರಂಭಿಸಿ, ಸೌರವ್ಯೂಹದ ವ್ಯವಸ್ಥೆಯಲ್ಲಿ ಭೂಮಿಯ ಸ್ವರ್ಣಮಯ ವಲಯವನ್ನು ಪ್ರವೇಶಿಸಿದ ನಂತರ, ನೈಸರ್ಗಿಕವಾಗಿ ತನ್ನದೇ ಆದ ರೂಪವನ್ನು ಪಡೆಯುತ್ತದೆ. ಶ್ರೀ ಅರವಿಂದರವರ "ಥಿಯರಿ ಆಫ್ ಹ್ಯೂಮನ್ ಬೀಯಿಂಗ್"ನಲ್ಲಿ ಈ ವಿಷಯದ ಬಗೆಗೆ ವಿವರಗಳಿವೆ ಸೂಚಿಸುತ್ತದೆ. "ಅಮರತ್ವದ ಅಕ್ಷಿಗಳು ಅವನ ಬಳಿಗೆ ಬಂದು ದೃಷ್ಟಿಸುತ್ತವೆ, ಮತ್ತು ಅನೇಕ ರಾಜ್ಯಗಳನ್ನು ರೂಪಿಸುತ್ತವೆ ಮತ್ತು

ಸಂಭಾಷಿಸುತ್ತವೆ ಕೂಡಾ", ಮತ್ತು "ನಾವು ಯಾವುದು ಮೃತಪ್ರಾಯವೆಂದು ಭಾವಿಸಿದ್ದೇವೆಯೋ ಆ ರೀತಿಯಲ್ಲಿ ಹೆಸರಿಸುತ್ತಿರುವೆವೋ ಅದು ಸದಾ ಜೀವಂತವಾಗಿದೆ. ಬ್ರಹ್ಮಾಂಡದ ಶಾಶ್ವತತೆಗೆ ತನ್ನದೇ ಆದ ಜೀವನ ವಿಧಾನವಿದೆ. ಈ ಪ್ರಕ್ರಿಯೆಯನ್ನು ಯಜ್ಞ ಎಂದು ಕರೆಯಲಾಗುತ್ತದೆ. ಯಜ್ಞವು ತನ್ನನ್ನು ತಾನು ಅರಿತುಕೊಳ್ಳಲು ಇರುವ ಬ್ರಹ್ಮಾಂಡದ ಶಾಶ್ವತ ಚಟುವಟಿಕೆಯಾಗಿದೆ.

ಇದು ವೈರಾಜ್ಯಂನ ಉತ್ತುಂಗವಾಗಿದ್ದು ಇದನ್ನು ಕಾಸ್ಮೋ–ಕಾಸ್ಮಿಕ್–ಝೆನಿತ್ ಎಂದು ಶ್ರೀ ಅರವಿಂದರು ಅಭಿವ್ಯಕ್ತಿಸಿದ್ದಾರೆ. ಈ ಅವಸ್ಥೆಯು ಸಾಕಾರ ರೂಪದಲ್ಲಿರುವ ಪ್ರಜ್ಞೆಯ ರೂಪವೇ(ದೇಹ) ಆಗಿದೆ: ಹೀಗಾಗಿ ಇಲ್ಲಿ ಭೂಮಿಯಿಂದ ಅನಂತದವರೆಗೆ ಪ್ರಜ್ಞೆಯ ಸ್ತರಗಳು ಇವೆ. ಮಾನವ ಪ್ರಜ್ಞೆ ಮತ್ತು ಆಕಾಶದ ಪ್ರಜ್ಞೆಯು ಭೂಮಿಯ ಖಮಧ್ಯ(ಝೆನಿತ್‌ನಲ್ಲಿ)ದಲ್ಲಿ ಸಂಧಿಸುತ್ತವೆ. ಇದನ್ನು ಸಾಮ್ರಾಜ್ಯ ಎಂದು ಕರೆಯಲಾಗುತ್ತದೆ; ಸತ್ಯ – ಪ್ರಜ್ಞೆ ಮತ್ತು ಬಾಹ್ಯಾಕಾಶವು ಕಾಸ್ಮೋ–ಕಾಸ್ಮಿಕ್ – ಉತ್ತುಂಗದಲ್ಲಿ "ಒಂದು"ದಲ್ಲಿ ರೂಪಾಂತರಗೊಳ್ಳುತ್ತದೆ, ಇದನ್ನು ವೈರಾಜ್ಯಂ ಎಂದು ಕರೆಯಲಾಗುತ್ತದೆ. ಕಾಲ, ಅವಕಾಶ, ನಾದ ಅಥವಾ ಪ್ರಜ್ಞೆಯು "ಒಂದು ವಿಶಿಷ್ಟ ರೂಪದಲ್ಲಿ" ಸ್ವಂತ ಬೆಳಕಿನೊಂದಿಗೆ ಇರುತ್ತದೆ. ಆದ್ದರಿಂದ ಇದು ಶಾಶ್ವತವಾಗಿದೆ. ಸೃಷ್ಟಿಯ ರಹಸ್ಯವನ್ನು ಅರಿತುಕೊಳ್ಳಲು ಶಾಶ್ವತತೆಯು ತನ್ನ ಸ್ವಂತ ಶಕ್ತಿಯೊಂದಿಗೆ ರೂಪ ಮತ್ತು ಲೋಕಕ್ಕೆ ರೂಪಾಂತರಗೊಳ್ಳಲು ಉತ್ಸುಕವಾಗಿದೆ.

ಇಂತಹ ಅದ್ಭುತಾದ್ಭುತ ಬೀಜದ ನ್ಯಾನೋ ರೂಪವು ಮಾನವನ ಹೃದಯದಲ್ಲಿ ಅಂಕುರಗೊಳ್ಳುತ್ತದೆ ಮತ್ತು ಈ ವಿಕಾಸದ ಅಲೆಗಳ ಮೂಲಕ ಆಯಾಮಗಳನ್ನು ಪಡೆಯುತ್ತದೆ. ಆದ್ದರಿಂದ ಇದನ್ನು ಕಾಸ್ಮಿಕ್–ಪ್ರಜ್ಞೆ ಮತ್ತು ಗೋಲ್ಡಿಲಾಕ್ಸ್ ಝೋನ್‌ನ ಪ್ರಜ್ಞೆಯು ಬೆಂಬಲಿಸುತ್ತದೆ – ಇದು ಜಡಕ್ಕೆ "ಪ್ರಾಣ"ವನ್ನು ಹೊಂದಲು ಬೆಂಬಲಿಸುತ್ತದೆ. ಇಲ್ಲಿ ಸತ್ತೆಯ("ಬೀಯಿಂಗ್") ಪರಿಪೂರ್ಣ ಅಭಿವ್ಯಕ್ತಿಯು ಈ ಜಡದ ಸರ್ವೋಚ್ಚ ಕಾರ್ಯವಾಗಿದೆ. ಈ ವಸ್ತುವು ಅನ್ನ (ಆಹಾರ), ದೇಹ(ರೂಪ)ವಾಗಿ ಮತ್ತು ಸಸ್ಯಗಳಾಗಿ ಜೀವನವನ್ನು ಒಂದು ಸ್ವರೂಪದಲ್ಲಿ ಸೃಷ್ಟಿಸುತ್ತದೆ. ಸೃಷ್ಟಿಯ ಸ್ವರೂಪ ಮತ್ತು ಅದರ ವಿಕಾಸವು ಈ ನಿರ್ಮಿತಗೊಂಡ ಸ್ವರೂಪದಲ್ಲಿ ಅತ್ಯಂತ ಕೆಳಮಟ್ಟದಲ್ಲಿದೆ, ಇದನ್ನು ಅರಿತೇ ಉಪನಿಷತ್ತುಗಳಿಂದ ಅನ್ನಮಯಕೋಶ ಎಂದು ಕರೆಯಲ್ಪಡುತ್ತದೆ.

ಇಲ್ಲಿ ಮಾನವ ಮನಸ್ಸಿನ ಜೀವಿ. ಆದ್ದರಿಂದ ಇದನ್ನು "ಮನೋಮಯಃ ಪ್ರಾಣ" ಎಂದು ಕರೆಯಲಾಗುತ್ತದೆ [ಪ್ರಬುದ್ಧ ಮನಸ್ಸಿನ ಪ್ರಾಣ]. ಆದ್ದರಿಂದ ಈ ಪದರವು ಅಜ್ಞಾನ ಮತ್ತು ಅಂಧಕಾರದೊಳಗೆ ಮುಸುಕಿನಲ್ಲಿ ಇದೆ ಎಂದು ಪರಿಗಣಿಸಲ್ಪಟ್ಟಿದ್ದರೂ ಸಹ, ಹೃದಯವನ್ನು ಅರಿತುಕೊಳ್ಳಲು ಮತ್ತು ಸ್ಪಂದಗೊಳ್ಳುವಂತೆ ಮಾಡಲು ಮನಸ್ಸನ್ನು ಬೆಂಬಲಿಸಲು ಅದು ಯಾವಾಗಲೂ ಉತ್ಸುಕವಾಗಿದೆ. ಶ್ರೀ ಅರವಿಂದರು ಇದನ್ನು ಸೂಚಿಸುತ್ತಾರೆ – "ಪ್ರಪಂಚದ ಬಯಕೆಯು ಅವಳ ಮರ್ತ್ಯಜನ್ಮವನ್ನು ಆಶಿಸಿತು. ಅನಾದಿಕಾಲದ ಅನ್ವೇಷಣೆಯ ಮುಂಭಾಗದಲ್ಲಿ ಒಂದು, ನಿಗೂಢ ನಾಟಕದ ನಾಯಕನಂತೆ, ಇದರಲ್ಲಿಯೇ ಅಜ್ಞಾತವು ಸಹಿತ ರೂಪಗಳ ಮೂಲಕ ಹಿಂಬಾಲಿಸುತ್ತದೆ. ಮತ್ತು ಆ ಶಾಶ್ವತತೆಯನ್ನು ನಿಗದಿತ ಸಮಯದ ಮೂಲಕ ಮಿತಿಗೊಳಿಸುತ್ತದೆ. ಆದರೆ ತಮದಿಂದ ಕೂಡಿರುವ ಶೂನ್ಯವು ಸಹಿತ ಬದುಕಲು ಮತ್ತು ನೋಡಲು ಹೆಣಗಾಡುತ್ತದೆ, ಆದರೆ ಚಿಂತನದ ವಾಯುವಿನ ವ್ಯವಸ್ಥೆಯಲ್ಲಿ ಈ ಚಿಂತಕನು ಶ್ರಮಜೀವಿ ಆಗುತ್ತಾನೆ, ಭೂಮಿಯ ಮೌನಕ್ಕೆ ಅದರದೇ ಆದ ವಿಕಾಸಮಯವಾದ ತೇಜದುಂಬಿದ ಶಕ್ತಿಯ ಅಗತ್ಯತೆಯಲ್ಲಿ ಇರುತ್ತದೆ." (ಸಾವಿತ್ರಿ ಪುಟ 22)

**ಭಾಷೆ ಮತ್ತು ಆಯಾಮಗಳು**

ಇಂತಹ ಅನೂಹ್ಯ ಸಂಗತಿಗಳನ್ನು ಅನುಭವದ ಮೂಲಕವೇ ಅರ್ಥೈಸಿಕೊಳ್ಳಲು ಅದರದೇ ಆದ ಭಾಷಾವ್ಯವಸ್ಥೆಯೂ ಸಹಿತ ನಿಸರ್ಗದತ್ತವಾಗಿಯೇ ರೂಹುಗೊಂಡಿರುತ್ತದೆ. ಹೀಗಾಗಿ ಯೋಗ ಪ್ರಜ್ಞೆಯೊಂದಿಗೆ ಮಿಡಿಯುವ ಕಾವ್ಯವು ಪ್ರತಿಮಾತ್ಮಕವಾಗಿಯೋ ಇಲ್ಲವೇ ಸಂಕೇತಗಳ ಮೂಲಕವೋ ಅಭಿವ್ಯಕ್ತಿಗೊಳ್ಳುತ್ತದೆ. ಸಾಂಕೇತಿಕ ಕಾವ್ಯವು ನೈಸರ್ಗಿಕ ವಿದ್ಯಮಾನವಾಗಿದೆ. ಸಂಕೇತವೇ ಪ್ರಕೃತಿ ಆದರೆ ಚಿತ್ರ ಸಂಸ್ಕೃತಿ. ಇನ್ನು ಚಿಹ್ನೆಗಳನ್ನು ಗಮನಿಸಿದರೆ ಮತ್ತು ಅವೂ ಸಹಿತ ಇದೇ ಮಾದರಿಯ ಆರಂಭದ ಹೆಜ್ಜೆಯಾಗಿರುತ್ತವೆ. ಐಕಾನ್‌ಗಳು ಮತ್ತು ಚಿಹ್ನೆಗಳು ಯಾವಾಗಲೂ ಸಾಮಾನ್ಯ ಬದುಕಿನಲ್ಲಿ ವಿಜೃಂಭಿಸುತ್ತಿದ್ದರೂ, ಸಾಂಕೇತಿಕವು ಮಾತ್ರ ಪ್ರಾತಿನಿಧ್ಯವು ಭವಿಷ್ಯವನ್ನು ಪ್ರಬುದ್ಧಗೊಳಿಸಲು ಯಾವಾಗಲೂ ಧ್ಯಾನಿಸುತ್ತಿದೆ. ಇದು ಜೀವನ ಶೈಲಿಯ ಮೂಲಕ ಶಾಶ್ವತ ಸತ್ಯಗಳು ಮತ್ತು ಅಭಿವ್ಯಕ್ತಿಗಳೊಂದಿಗೆ ಸಂಪರ್ಕಗಳನ್ನು ಪುನರ್

ರೂಪಿಸಲು ಪ್ರಸ್ತುತದೊಂದಿಗೆ ಸಮನ್ವಯಗೊಳಿಸುತ್ತದೆ. ಶಾಶ್ವತ ಮೌಲ್ಯಗಳು ಯಾವಾಗಲೂ ವೈಶ್ವಾತ್ಮಿಕವಾಗಿರುತ್ತವೆ (ಕಾಸ್ಮಿಸಿಟಿಯಲ್ಲಿವೆ) ಮತ್ತು ಸೌಂದರ್ಯದ ಕ್ರಿಯೆಯೊಂದಿಗೆ ಸ್ಥಿರತೆಯನ್ನೂ ಆಧರಿಸಿವೆ. ಸಾಂಕೇತಿಕ ಕಾವ್ಯದ ಮಿಡಿತದ ಬಾಂಧವ್ಯವು ಪರಿಪೂರ್ಣ ವಿಕಾಸದ ಆಶಯವನ್ನು ಹೊಂದಿದೆ. ಇಲ್ಲಿ ಸಂತೋಷದ ವಿವಿಧ ಸಂರಚನೆಗಳನ್ನು ಮತ್ತು ವಿನ್ಯಾಸಗಳನ್ನು ಬೆಂಬಲಿಸುತ್ತವೆ ಮತ್ತು ಗಮ್ಯದ ಡೆಸ್ಟಿನಿ  ಸದಾ ಯಾನದಲ್ಲಿ ಇರುತ್ತವೆ.

ಶ್ರೀ ಅರವಿಂದೋ ಇದನ್ನು ಸಾವಿತ್ರಿಯಲ್ಲಿ (ಪುಸ್ತಕ 1 ಕ್ಯಾಂಟೊ 2 ಪುಟ 120) ಸಾಂಕೇತಿಕವಾಗಿ ವಿವರಿಸುತ್ತಾರೆ: 'ಅವರು ಯಾನ ನಡೆಸಿರುವ ಪಥದಲ್ಲಿ ಅವರ ಹಿಂದೆ ಅವರದೇ ಸ್ಮರಣೆಯ ಕಾಂತಿಮಯದಿಂದ ಕೂಡಿರುವ ಸ್ಮರಣೆಯ ಪಥವಿರುತ್ತದೆ. ಪರಿಪೂರ್ಣವಾಗಿರುವ ಸಾಮ್ರಾಜ್ಯದ ಎಲ್ಲ ಅನುಭವಗಳೂ ಸಹಿತ ಪಯಣದಲ್ಲಿ ದೃಷ್ಟಗೊಳ್ಳುತ್ತ ಆಗಮಿಸುತ್ತವೆ. ದೃಷ್ಟಿಸಲಾಗುವ ದೃಷ್ಟಿಯು ಕ್ಷಣಿಕವಾಗಿದ್ದರೂ ಸಹಿತ, ಸುವಿಶಾಲವಾದ, ವೈಶಾಲ್ಯತೆಯಲ್ಲಿ ಭೂಮವಾಗಿರುವ ಸಂಭ್ರಮದ ಭೂದೃಶ್ಯಗಳೇ ಸದಾ ಕಣ್ಣ ಮುಂದೆ ಇರುತ್ತಿದ್ದು, ಅಲ್ಲಿ ಕಾಣ್ಕೆಯ ಸ್ವರೂಪವನ್ನು ತೋರಿಸುತ್ತವೆ, ಇದು ನಮ್ಮ ಕಣ್ಣುಗಳ ಮುಂದೆಯೇ ಘಟಿಸುವ ಕನಸೂ ಆಗಿರಬಹುದು ಅಥವಾ ತುರೀಯ ಹಂತದ ಅನುಭಾವದ ದೃಷ್ಟಾಂತವೂ ಅಗಿರಬಹುದು, ಇದು ಇದು ನಾದಮಯತೆಯಿಂದಲೇ ಸ್ಪಂದಿಸುತ್ತಿರುತ್ತದೆ. ಸ್ವಪ್ನ–ಜಾಗ್ರತ–ಸುಷುಪ್ತಿ ಸ್ಥಿತಿಗಳು ಈ ವೈಶ್ವಿಕ ನಾದವೇ ಆಗಿವೆ. ಏಕೆಂದರೆ ಇವೆಲ್ಲವೂ ಪ್ರಕೃತಿಯ ಸ್ಪಂದನಗಳಾಗಿವೆ."  ಮುಖ್ಯವಾಗಿ ಇದು ವಿಶ್ವ ರಹಸ್ಯವನ್ನು ಅರಿತುಕೊಳ್ಳಲು ಇರುವ ಪ್ರಮುಖ ಸೂತ್ರವಾಗಿದೆ. ಈ ಹಂತದಲ್ಲಿ ಆದ ಅನುಭವವು ಜ್ಞಾನವಾಗಿ ದಾಖಲಾಗುತ್ತಿರುತ್ತದೆ.

ಈ ರೀತಿಯಲ್ಲಿ – ಪ್ರಸ್ತುತಪಡುವ ಅಥವಾ ಅಭಿವ್ಯಕ್ತಿಗೊಳ್ಳುವ ಸಲುವಾಗಿನ ಧ್ಯಾನವು, ಮಾನವ ಪ್ರಜ್ಞೆಯ ವಿಕಸನ ಮತ್ತು ವಿಜ್ಞಾನದ ಆವಿಷ್ಕಾರಗಳು(ಕಾಸ್ಮಿಕ್ ಸಂಶೋಧನೆ ಸೇರಿದಂತೆ) ಜಾಗತಿಕವಾಗಿ ವಿಶಿಷ್ಟ ಒಕ್ಕೂಟಕ್ಕೆ ಕಾರಣವಾಗುತ್ತವೆ. ನಕ್ಷೆಗಳಲ್ಲಿ ಚಿತ್ರಿಸಿದ ಗಡಿಗಳು ಮಾತ್ರ ಉತ್ತುಂಗದ ಕಡೆಗೆ ಏರಲು ಹಂಪ್‌ಗಳನ್ನು ಹಾಕುವುದಿಲ್ಲ. ರಸ್ತೆಯಲ್ಲಿ ಅಥವಾ ಗಾಳಿಯ ಮೂಲಕ ನಡೆಯುವ ವಾಹನಗಳ ಭೌತಿಕ ಚಲನೆಗಳು ಸಹಿತ ವಿಕಾಸದ ಪ್ರಗತಿಯನ್ನೇ ಒದಗಿಸುತ್ತವೆ. ಆದರೆ, ಮನಸ್ಸಿನಲ್ಲಿರುವ ವಿಕಾಸದ ಅವಕಾಶವು ಮಾತ್ರ ಅದರ ಜೊತೆಗೆ ಸಮಸ್ಪಂದಿಯಾಗಿ ಮಿಡಿಯುವ ಹೃದಯದೊಂದಿಗೆ ವಿಶಾಲವಾದ ಬಾಹ್ಯಾಕಾಶದ ಕಡೆಗೆ

ವಿಕಸನಗೊಳ್ಳುವವರೆಗೆ ಆಶಿಸುತ್ತಿದೆ, ಏಕೆಂದರೆ ಅಲ್ಲಿಯೇ ಶಾಶ್ವತವಾದ ಸಾಕ್ಷಾತ್ಕಾರ ಪ್ರಕಾಶವಿದೆ.

ಹೀಗಾಗಿ ಮಾನವನ ಭಾವನೆಗಳು, ವಿಕಾಸದ ಪ್ರಕ್ರಿಯೆಯ ಸ್ಮರಣೆಗಳ ಮೂಲಕ ರೂಪುಗೊಂಡಿವೆ, ಆಲೋಚನೆಗಳಿಗೆ ಹೊಸ ಆಯಾಮಗಳನ್ನು ಒದಗಿಸುತ್ತವೆ. ಕೇವಲ ಆನಂದವನ್ನು ನೀಡುವ ಕಾವ್ಯವು ಭೌತಿಕ ಬಯಕೆಗಳ ಅಗತ್ಯವನ್ನು ಮಾತ್ರ ಪೂರೈಸುತ್ತದೆ. ಒಂದು ಅಂತಃಪ್ರಜ್ಞೆಯ ಕವಿತೆಯು ಮನಸ್ಸಿನ ಕುತೂಹಲವನ್ನು ಮಾತ್ರ ತಣಿಸಲು ತನ್ನನ್ನು ನಿರ್ಬಂಧಿಸಿಕೊಂಡಿರುವಂತೆ ತೋರುತ್ತದೆ. ಈ ಹಂತದಲ್ಲಿ ಪ್ರಸ್ತುತಪಡಿಸಲಾಗಿರುವ ನೆನಪುಗಳು, ಸದ್ಯಕ್ಕೆ ಮಾತ್ರ ಮಿಂಚುತ್ತಿರುವ ಮನಸ್ಥಿತಿಯಲ್ಲಿರಬಹುದು, ಆದರೆ ವ್ಯರ್ಥವಾಗಿ ಕೊನೆಗೊಳ್ಳುತ್ತವೆ. ಆದ್ದರಿಂದ, ಕವಿತೆ ಅಥವಾ ಮಾನವನ ಯಾವುದೇ ಅಭಿವ್ಯಕ್ತಿಯು, ಅದು ಅಜ್ಞಾತವನ್ನು ಅನಾವರಣಗೊಳಿಸುವ ಕಡೆಗೆ ಸಾಗುತ್ತಿರುವಾಗ ಮಾತ್ರ ಮತ್ತು ಭವಿಷ್ಯದ ಕುರಿತು ಪೂರ್ಣತೆಯ ಭಾವನೆಯನ್ನು ವ್ಯಕ್ತಪಡಿಸುವಂತಿದ್ದಲ್ಲಿ ಮಾತ್ರ ಕಾಲಾತೀತವಾಗಿ ಸ್ಪಂದನವನ್ನು ಒದಗಿಸುತ್ತದೆ.

ನಿಸರ್ಗದ ವಿಕಸನವನ್ನು ಅಧ್ಯಯನ ಮಾಡುವಾಗಲೂ ಸಹಿತ ಎಚ್ಚರಿಕೆಯಿಂದ ಗಮನಿಸಿದರೆ, ಈ ಮೃಣ್ಮಯದ ಆಧಾರವು ಭೌತಿಕವಾದಂತೆ ಕಾಣುತ್ತದೆ. ಆದರೆ ಇದು ಕೇವಲ ವಿಷಯವಲ್ಲ. ಉಪನಿಷತ್ತು ಇದನ್ನು “ಅನ್ನ ಕೋಶ” (ಅನ್ನಮಯ ಕೋಶ) ಎಂದು ಹೇಳುತ್ತದೆ. ಆದರೆ ಇದು  ಕೇವಲ ಮೃತಪ್ರಾಯದ ವಸ್ತುವಲ್ಲ, ಅದು ಅಗ್ನಿಯ ದೇಹ(ಬೆಂಕಿಯಾಗಿ)ವನ್ನು ಹೊಂದಿರುವಾಗ, – ಏಕೆಂದರೆ, ಈ ಸ್ತರವೇ ಸೃಷ್ಟಿಗೆ ಆಧಾರವಾಗಿದೆ; ಸಸ್ಯಗಳಿಗೆ ಆಧಾರ ಮತ್ತು ಸೃಷ್ಟಿಯ ಮುಂದುವರಿಕೆಗೆ ಆಧಾರವಾಗಿದೆ. ಮನುಷ್ಯನು ಸಹ ದೇಹದೊಳಗೆ ಮನೋಮಯ ಪ್ರಾಧಾನ್ಯತೆಯಲ್ಲಿರುವ ಆತ್ಮದ ಸ್ಥಿತಿಯಲ್ಲಿರುತ್ತಾನೆ.

ಹೀಗೆ ಸಾಂಕೇತಿಕ ಕಾವ್ಯವು ದಿನನಿತ್ಯದ ಜೀವನ ಶೈಲಿಯ ಪದಗಳಿಂದ ರೂಪುಗೊಂಡಿದ್ದರೂ ಸಹ, ಪದಗಳ ಸ್ಥಾನವು ಬ್ರಹ್ಮಾಂಡದೊಂದಿಗಿನ ಒಳಗೊಳ್ಳುವಿಕೆ ಮತ್ತು ಅದೇ ಲಯದೊಂದಿಗೆ ಶ್ರುತಿಯೊಂದಿಗೆ ಸ್ವಾಭಾವಿಕವಾಗಿ ಉನ್ನತೀಕರಿಸಲ್ಪಟ್ಟಿದೆ. ಈ ನಾಡಿಮಿಡಿತವನ್ನು ಅರಿಯಲು, ನಕ್ಷತ್ರದಂತಹ ಮಹಾ ವಿಶಾಲವಾದ ಮತ್ತು ವಿಶಾಲವಾದ ಬಾಹ್ಯಾಕಾಶದ ಅಗಾಧತೆಗಳಲ್ಲಿ ಯಾರೊಂದಿಗಾದರೂ ಸರಿ ದಿಗ್ಭ್ರಮೆಗೊಳ್ಳದೇ ಸಾಗಬೇಕು.

"ಕಾಲದ ಮುಂದೆ ಮುಂದೆ ಕನ್ನಡಿಯನ್ನು ಸ್ಥಾಪಿಸಿದರೆ ಏನಾಗಬಹುದು? ಪ್ರತಿಬಿಂಬಗಳು ಶಾಶ್ವತವಾಗಿರುತ್ತವೆಯೇ? ಮತ್ತು ಜಟಿಲತೆಯನ್ನು ಕಣ್ಮರೆ–ಯಾಗಿಸಲು ಸಾಧ್ಯವಾಗುತ್ತದೆಯೇ? ಈ ನಕ್ಷತ್ರಗಳು, ಗ್ರಹಗಳು ಈ ನೀಹಾರಿಕೆಗಳು ಇತ್ಯಾದಿಗಳೆಲ್ಲವೂ ಏಕೆ ಈ ವೈಶ್ವಿಕ–ನಿಯಮ(ನಿಯತಿ)ವನ್ನು ಪಾಲಿಸುತ್ತಿವೆ ಎಂದು ನಾವು ನಮ್ಮನ್ನು ಕೇಳಿಕೊಳ್ಳಬೇಕು. ತಮ್ಮ ತಮ್ಮ ಅಸ್ಮಿತೆಯನ್ನು ರಕ್ಷಣೆ ಮಾಡಿಕೊಳ್ಳುವದಕ್ಕಾಗಿಯೇ? ಅಥವಾ ಕಪ್ಪು ಕುಳಿಯ(ಕೃಷ್ಣರಂಧ್ರ) ಭಯಾನಕ ಗುರುತ್ವಾಕರ್ಷಣೆಯಿಂದ ತಪ್ಪಿಸಿಕೊಳ್ಳಲೋ" ಏಕೆಂದರೆ ಆ ಕೃಷ್ಣರಂಧ್ರವಂತೂ – ಸಂಪೂರ್ಣವಾಗಿ ನುಂಗಲು ಉತ್ಸುಕರಾಗಿಯೇ ಇರುತ್ತದೆ. ಈ ಎಲ್ಲ ಪ್ರಶ್ನೆಗಳಿಗೂ ಪರಿಪೂರ್ಣ ಉತ್ತರವನ್ನು ಶ್ರೀ ಅರವಿಂದರು ಸಾವಿತ್ರಿ(1–5–84)ಯಲ್ಲಿ ನೀಡಿದ್ದಾರೆ. "ಸರ್ವಶಕ್ತನಾದವನೋರ್ವ ನಿಗೂಢವಾಗಿಯೇ ಪರಾಕಾಶದಲ್ಲಿ ಸ್ಥಿತಗೊಂಡಿದ್ದಾನೆ, ಇಂದ್ರಿಯಗಳಿಗೆ ಮೋಸದಂತೆ ಕಾಣುವದೇ ಈ ಬಾಹ್ಯ ಪ್ರಪಂಚವಾದಂತೆ ಕಾಣುತ್ತದೆ. ಆದರೆ ಅವನು ತನ್ನ ಗೂಢ ಪ್ರಜ್ಞೆಯ ಎಳೆಗಳ ಮೂಲಕ ನವೀನತೆಯನ್ನು ನೇಯುತ್ತಿದ್ದಾನೆ. ತನ್ನ ನಿರಾಕಾರತ್ವವನ್ನು ಪ್ರತಿನಿಧಿಸುವ ಸಲುವಾಗಿ ಶಕ್ತಿಯ ಅಂಶ ಹೊಂದಿರುವ ದೇಹಗಳನ್ನು ರೂಪಿಸುತ್ತಾನೆ."

## ವಿಕಾಸದ ವೈಶ್ವಿಕ ಆಯಾಮಗಳು ಮತ್ತು ಸ್ವರೂಪಗಳು

ಈ ರೀತಿಯ "ಅಭಿವ್ಯಕ್ತಿ" ಅಥವಾ ಅಭಿವ್ಯಕ್ತಿಗಳು ಯಾವಾಗಲೂ ನವಿಲುಗರಿಯ ಸಂರಚನಾ ವ್ಯವಸ್ಥೆಯಲ್ಲಿ("ಪೀಕಾಕ್ ಪ್ಲಮೇಜ್ ಮೋಡ್") ಇರುತ್ತದೆ. ಗಂಡು ನವಿಲಿನ ಗರಿಯು ಅದ್ಭುತವಾದ ಸೌಂದರ್ಯವನ್ನು ಹೊಂದಿದೆ, ಏಕೆಂದರೆ ಅದ್ಭುತ, ಅಪರೂಪದ, ವೈವಿಧ್ಯಮಯದ, ವರ್ಣರಂಜಿತ ಕಣ್ಣಿನ ಮಾದರಿಗಳಲ್ಲಿ ಇರುತ್ತದೆ. (ಜಿಯಾನ್ ಝಿ, ಚೀನಾ ವಿಜ್ಞಾನಿ, ಶಾಂಘೈ). ಈ ಗರಿಗಳ ಗಾಢವಾದ ಬಣ್ಣಗಳು ವರ್ಣದ್ರವ್ಯಗಳಿಂದ ಉತ್ಪತ್ತಿಯಾಗುತ್ತವೆ, ಆದರೆ ಚಿಕ್ಕದಾದ, ಸಂಕೀರ್ಣವಾದ ಎರಡು ಆಯಾಮದ ಸ್ಫಟಿಕದಂತಹ ರಚನೆಗಳಿಂದ ಇವು ಉತ್ಪತ್ತಿಯಾಗುತ್ತವೆ. ಈ ಸೂಕ್ಷ್ಮ ರಚನೆಗಳ ಅಂತರದಲ್ಲಿ ಸ್ವಲ್ಪ ಬದಲಾವಣೆಯಾದರೂ, ಬೆಳಕಿನ ವಿವಿಧ ತರಂಗಗಳನ್ನು ಫಿಲ್ಟರ್ ಮಾಡಲು ಮತ್ತು ಪ್ರತಿಫಲಿಸಲು ಕಾರಣವಾಗುತ್ತದೆ, ಈ ಗರಿಗಳ ವಿವಿಧ ರೀತಿಯ ಅಸ್ಪಷ್ಟ ವರ್ಣಗಳನ್ನು ಸೃಷ್ಟಿಸುತ್ತದೆ. (ವಿವರಗಳಿಗಾಗಿ ನೋಡಿ; 'ಎ ಸೈಕಲಾಜಿಕಲ್ ಪರ್ಸ್ಪೆಕ್ಟಿವ್ ಆನ್ ಜಾಯ್ ಅಂಡ್ ಎಮೋಷನಲ್ ಫಿಲ್‌ಫಿಲ್‌ಮೆಂಟ್' –

ಚಾರಿಸ್ ಎಮ್ ಮೆಡೋಸ್, (ಎನ್‌ವೈ) ಲಂಡನ್) ಪ್ರಕಟಿತ 2014.) ಹಿಮದ ಸಂರಚನೆಯೂ (ಐಸ್ ಪ್ಯಾಟರ್ನ್) ಕೂಡ ಇದೇ ತತ್ವವನ್ನು ಆಧರಿಸಿದೆ. ಜಾನ್ ಪಿಕಲ್ (ಇಂಗ್ಲೆಂಡ್) ರಾಷ್ಟ್ರೀಯ ಭೂಗೋಳದಲ್ಲಿ (17–10–2013) ಈ ನೈಸರ್ಗಿಕ ವಿದ್ಯಮಾನಗಳ ವಿವರಗಳೊಂದಿಗೆ ಸಂಶೋಧನಾ ಪ್ರಬಂಧವನ್ನು ಪ್ರಕಟಿಸಿದರು. ವಿಜ್ಞಾನಿ ಐಸಾಕ್ ನ್ಯೂಟನ್ ಕೂಡ ತಮ್ಮ ಸಂಶೋಧನಾ ಕಾರ್ಯದಲ್ಲಿ ಇದನ್ನು ಉಲ್ಲೇಖಿಸಿದ್ದಾರೆ.

ಆದರೆ ಶ್ರೀ ಅರವಿಂದರು ಇದನ್ನು ಅಂದರೆ ಈ ನವಿಲು ಗರಿಗಳ ಕಿರೀಟವನ್ನು ಶ್ರೀ ಕೃಷ್ಣನ ಸಂಕೇತವಾಗಿ ಗಣಿಸುತ್ತಾರೆ ಮತ್ತು ಇದು ಸೃಷ್ಟಿಯ ಅದೇ ರಹಸ್ಯವನ್ನು ಮತ್ತು ನಾನಾ ರೂಪಗಳಾಗಿ ರೂಪಾಂತರಗೊಳ್ಳುವಾಗ ವರ್ಣರಂಜಿತ ನೋಟವನ್ನು ಹೇಳುತ್ತದೆ ಎನ್ನುವದನ್ನು ಅಭಿವ್ಯಕ್ತಿಸುತ್ತಾರೆ. ಸಾಂಖ್ಯ ಸಿದ್ದಾಂತ ಕೂಡ ಇದನ್ನೇ ಹೇಳುತ್ತದೆ, ವೈಶ್ವಿಕ(ಕಾಸ್ಮಿಕ್) ಪ್ರಜ್ಞೆಯಿಂದ ಒಳಗೊಂಡಿರುವ ಶಕ್ತಿಯಿಂದ ರಚಿಸಲಾದ ವಸ್ತುವಿನ ಎಲ್ಲಾ ಆಯಾಮಗಳ ಪರಿಪೂರ್ಣ ಲೆಕ್ಕಾಚಾರವು ಬ್ರಹ್ಮಾಂಡದ ರಹಸ್ಯವನ್ನು ತಿಳಿಯಲು ಪರಿಪೂರ್ಣ ಸೂತ್ರವಾಗಿದೆ. ಈ ರೀತಿಯಲ್ಲಿ ಶ್ರೀ ಅರವಿಂದರು ವೈಜ್ಞಾನಿಕ ಮತ್ತು ಮಾನಸಿಕ ಆಯಾಮಗಳಲ್ಲಿ ಈ ವಿಷಯದ ಬಗ್ಗೆ "ಋಗ್ವೇದದ ಮೊದಲ ಋಕ್"ನಲ್ಲಿ ವಿವರಿಸುತ್ತಾರೆ.

**ಮಾನವ ಮತ್ತು ವಿಜ್ಞಾನದ ಪಾತ್ರ; ವಿಜ್ಞಾನದ ವಿಕಾಸ ಎಲ್ಲಿಗೆ?**

ಶ್ರೀ ಅರವಿಂದರು ಅಂತರ್ಬೋಧೆಯಿಂದ(ದಿ ಲೈಫ್ ಡಿವೈನ್) ವಿವರಿಸುತ್ತಾರೆ, "ದೈವಿಕ ಅಸ್ತಿತ್ವದ ಆಕ್ರಮಣ, ಆಧ್ಯಾತ್ಮಿಕ ಆಯಾಮ ಮತ್ತು ಜಡದ ಅಸ್ಪಷ್ಟವಾದ ಅಜ್ಞಾನವು ವಿಕಾಸದ ಆರಂಭಿಕ ಹಂತವಾಗಿದೆ. ಆದರೆ ಆ ಪ್ರಕಟಣೆಯು ಅದರ ಸ್ವಭಾವದಲ್ಲಿ, ಶಾಶ್ವತವಾದ ಅಸ್ತಿತ್ವ, ಪ್ರಜ್ಞೆ, ಅಸ್ತಿತ್ವದ ಆನಂದವೆ ಆಗಿರುತ್ತದೆ: ಹೀಗಾಗಿಯೇ ವಿಕಾಸವು ಈ ಅಸ್ತಿತ್ವದ ಹೊರಹೊಮ್ಮುವಿಕೆಯಾಗಿದೆ. ಇಲ್ಲಿ ಪ್ರಜ್ಞೆಯು ಅಸ್ತಿತ್ವದ ಆನಂದವಾಗಿರಬೇಕು, ಇದು ಮೊದಲಿಗೆ ಅದರ ಸಾರ ಅಥವಾ ಸಂಪೂರ್ಣತೆಯಲ್ಲಿ ಇರದೇ ಇದ್ದರೂ, ಆದರೆ ವ್ಯಕ್ತಪಡಿಸುವ ಹಂತದಲ್ಲಿ ಅಥವಾ ಮರೆಮಾಚುವಂತೆ ಇರುವ ವಿಕಸನೀಯ ರೂಪಗಳಲ್ಲಿ ಇದ್ದಂತೆ ತೋರುತ್ತದೆ. ಹೀಗಾಗಿ ಇದು ಅಪ್ರಜ್ಞಾಪೂರ್ವಕವಾಗಿಯೇ, ಅಸ್ತಿತ್ವವು ಪ್ರಾರಂಭದಲ್ಲಿ ತನ್ನದೇ ರೂಪದಲ್ಲಿ ಅಪ್ರಜ್ಞಾಪೂರ್ವಕ ಶಕ್ತಿಯಿಂದ ರಚಿಸಲ್ಪಟ್ಟ ವಸ್ತುವಿನ ವಸ್ತುವಾಗಿ ಹಾಗೆ ಕಾಣಿಸಿಕೊಳ್ಳುತ್ತದೆ."

"ಆಧುನಿಕ ವೈಜ್ಞಾನಿಕ ವಿಶ್ಲೇಷಣೆಯು ಸಹಿತ ಈ ಬ್ರಹ್ಮಾಂಡದ ಈ ಸೃಜನಶೀಲ–ಪ್ರಕ್ರಿಯೆಯ ವ್ಯವಸ್ಥೆಯನ್ನು ಮುಕ್ತವಾಗಿ ವಿಶ್ಲೇಷಿಸಲು ಸುಳಿವುಗಳನ್ನು ನೀಡುತ್ತದೆ ಮತ್ತು ಪರಿಪೂರ್ಣ ಸ್ಥಾನವನ್ನು ಹೊಂದಲು ಹಲವಾರು ರೂಪಗಳಾಗಿ ರೂಪಾಂತರಗೊಳ್ಳುತ್ತದೆ ಎಂದೇ ವಿವರಿಸುತ್ತದೆ. ಇದಕ್ಕಾಗಿ ವಿಜ್ಞಾನವು ತನ್ನ ರೆಕ್ಕೆಗಳನ್ನು ವಿಜ್ಞಾನ ಘನಸತ್ತೆ(ನಾಸ್ಟಿಕ್–ಬೀಯಿಂಗ್) ಆಗಿ ವಿಸ್ತರಿಸಿದೆ. ಇದನ್ನು ಅರ್ಥಗರ್ಭಿತವಾಗಿ ಹೀಗೆ ವಿವರಿಸಲಾಗಿದೆ – "ದೇವತೆಗಳು (ಎಲ್ಲ ಶಕ್ತಿಗಳು ಅಥವಾ ಪಂಚಭೂತಗಳು) ಈ ಬಾಹ್ಯಾಕಾಶ ಮತ್ತು ಕಾಲದ ವ್ಯವಸ್ಥೆಗೆ ಒಳಪಟ್ಟಿವೆ ಮತ್ತು ಒಳಪಡಲ್ಪಡುತ್ತವೆ, ಬಾಹ್ಯಾಕಾಶ ಮತ್ತು ಸಮಯ ಇಲ್ಲಿ ಈ ಯಾನದ (ಸ್ಪಂದನದ ಅಥವಾ ಚಲನೆಯ) ಭಾಗವಾಗಿದೆ, ಎಂದು ಶ್ರೀ ಅರವಿಂದರು ಉಪನಿಷತ್ತುಗಳ ವ್ಯಾಖ್ಯಾನಗಳಲ್ಲಿ ವಿವರಿಸುತ್ತಾರೆ. (ಎಂಟು ಉಪನಿಷತ್ತುಗಳು 1965. ಆವೃತ್ತಿ. ಪುಟ 5)".

ಇಷ್ಟೆಲ್ಲಾ ಇದ್ದರೂ, ನಮ್ಮ (ಭಾರತೀಯ) ಜೀವನ ಶೈಲಿಯು ಮಾತ್ರ ಪಾಶ್ಚಾತ್ಯ ಚಿಂತನೆಗಳು ಮತ್ತು ಭಾರತೀಯ ವಾತಾವರಣದ ಸಂಯೋಜನೆಯೊಂದಿಗೆ ಒಂದು ಸಂಕೀರ್ಣಮಯವಾದ ವಿಶಿಷ್ಟ ಸ್ಥಿತಿಯಲ್ಲಿವೆ. ದಿನನಿತ್ಯದ ಜೀವನಕ್ಕಾಗಿ ವಿಜ್ಞಾನವು ಸ್ಥಳೀಯರ ಆಲೋಚನೆಗಳ ಮೇಲೆ ಮಹತ್ತರವಾದ ಪ್ರಾಬಲ್ಯವನ್ನು ಸಾಧಿಸುತ್ತಿದೆ. ಆದರೆ, ಖಭೌತ–ಶಾಸ್ತ್ರ, ಬ್ರಹ್ಮಾಂಡ ಸಂರಚನಾ ಅಧ್ಯಯನದ ಕ್ಷೇತ್ರದಲ್ಲಿನ ಇತ್ತೀಚಿನ ಸಂಶೋಧನೆಗಳು ಬೆರಗುಗೊಳಿಸುವ ಫಲಿತಾಂಶಗಳನ್ನು ಸುರಿಯುತ್ತವೆ ಮತ್ತು ಈ ಭೂಮಿಯ ಮಾನವನ ಪ್ರಾಚೀನ ಆಲೋಚನೆಗಳ ಸಂಬಂಧವನ್ನೂ ಸೂಚಿಸುತ್ತವೆ.

**ಮನುಷ್ಯ ಮತ್ತು ವಿಕಾಸ**

ಉಪನಿಷತ್ತುಗಳು ಅನ್ನಮಯ–ಪ್ರಾಣಮಯ ಮತ್ತು ಮನೋಮಯ ಪದರಗಳ ಬಗ್ಗೆ ಹೇಳಿ ಮತ್ತೆ ಮುಂದೆ ಪ್ರಗತಿಗೊಳ್ಳುವ ವಿಷಯದ ಕುರಿತು ಉಲ್ಲೇಖಿಸುತ್ತವೆ. ಈಗ ಇದು "ವಿಜ್ಞಾನಮಯ" ಮತ್ತು "ಆನಂದಮಯ" ಪದರಗಳ ಕಡೆಗೆ ನಮ್ಮ ನಿರಂತರ ಯಾನವನ್ನು ಬೆಂಬಲಿಸುತ್ತದೆ. ಶ್ರೀ ಅರವಿಂದರು ಇಂತಹ ಸೂಕ್ಷ್ಮ ವಿಷಯವನ್ನೂ ಸಹಿತ ಪಾಶ್ಚಾತ್ಯ ಭಾಷೆಯಲ್ಲಿ(ಇಂಗ್ಲೀಷ) ಈ ಭಾರತೀಯ ಚಿಂತನೆಗಳನ್ನು ವಿವರಿಸುತ್ತಾರೆ. "ಏನೂ ಇಲ್ಲದಿರುವಿಕೆಯಿಂದ ನಿಜವಾದ

ಅಸ್ತಿತ್ವಕ್ಕೆ, ಕತ್ತಲೆಯಿಂದ ಬೆಳಕಿನೆಡೆಗೆ, ಸಾವಿನಿಂದ ಅಮರತ್ವದವರೆಗೆ ಸಾಗುವದನ್ನು (ಬೃಹದಾರಣ್ಯಕ ಉಪನಿಷತ್. 5) ಉಲ್ಲೇಖಿಸುತ್ತಾರೆ. ಆದರೆ ಮೊದಲ "ಸತ್ಯದಿಂದ ಭೂಮಿ ಮತ್ತು ಸ್ವರ್ಗವನ್ನು ಶುದ್ಧೀಕರಿಸಿಕೊಳ್ಳಬೇಕು ಎನ್ನುವ ಋಗ್ವೇದದ ಆತ್ಮಾಭಿಲಾಶೆಯನ್ನೂ ವಿವರಿಸುತ್ತಾರೆ." [1–31–6/ 1–133–1]

**ಮುಸುಕುಗಳನ್ನು ತೆಗೆದ ನಂತರ**

ದೃಷ್ಟಾರನೋರ್ವನ ಅನುಭೂತಿಗಳಿಂದ ರೂಪಿತಗೊಳ್ಳುವ ಸಾಂಕೇತಿಕ ಅಭಿವ್ಯಕ್ತಿಗಳು ತಮ್ಮಲ್ಲಿ ಅಂತರ್ಗತವಾಗಿರುವ ಗುಪ್ತ ನಿಧಿಯನ್ನು ಅನಾವರಣ–ಗೊಳಿಸಲು ಸಿದ್ಧವಾಗಿವೆ, ಏಕೆಂದರೆ ಅವುಗಳನ್ನು ಉದ್ದೇಶಪೂರ್ವಕವಾಗಿಯೇ ರಹಸ್ಯವಾಗಿಡಲಾಗಿದೆ – ಸಾಮಾಜಿಕ ಮೌಲ್ಯಗಳು ಮತ್ತು ಶಾಶ್ವತ ಮೌಲ್ಯಗಳು. ಭಾರತೀಯ ತತ್ತ್ವಶಾಸ್ತ್ರ ಎಂದರೆ ಪ್ರಕೃತಿ ಎಂದು ಕರೆಯಲ್ಪಡುವ ಸರ್ವೋಚ್ಚ ಶಕ್ತಿಯನ್ನು ಗೌರವಿಸುವುದನ್ನು ಮತ್ತು ಆರಾಧಿಸುವುದನ್ನೇ ತಿಳಿಸುತ್ತವೆ. ತನ್ನನ್ನು ತಾನೇ ಮಾನವನ ಜೀವನ ಶೈಲಿಯ "ಸ್ವಭಾವ"ವಾಗಿ ಪರಿವರ್ತಿಸುತ್ತದೆ. ಹೀಗಾಗಿ ಪ್ರಕೃತಿಯು ಲೋಕವೂ ಆಗುತ್ತದೆ ಮತ್ತು ವಿಶ್ವವೂ ಆಗುತ್ತದೆ ಜೊತೆಗೆ ಬ್ರಹ್ಮಾಂಡದ ಸ್ವರೂಪವನ್ನೂ ಹೊಂದುತ್ತದೆ. ಇದು ನಿಯತಿಯ ಪ್ರಕಾರವೇ ಎಲ್ಲವನ್ನೂ ಸೃಷ್ಟಿಸುತ್ತದೆ, ಮಾನವನಿಗೆ ತನ್ನ ಗುರಿಯನ್ನು ಅರಿತುಕೊಳ್ಳಲು ಮತ್ತು ಆ ಮೂಲಕ ತನ್ನನ್ನು ಅಲ್ಲಿಯೇ ಸ್ಪಂದನಗೊಳಿಸಿಕೊಳ್ಳುತ್ತಾ ಒಳಗೊಳ್ಳುವಂತೆ ಹಾಗೂ ಅಲ್ಲಿ ಲಭ್ಯವಾಗುವ ಅನುಭವದಿಂದ ಅದನ್ನು ಸಾಧನೆ ಮಾಡಲು ಪ್ರಬುದ್ಧನಾಗುವಂತೆ ಸಹಕರಿಸುತ್ತದೆ.

ವೇದಗಳು ಮತ್ತು ಉಪನಿಷತ್ತುಗಳ ರಹಸ್ಯವನ್ನು ಅರಿತುಕೊಳ್ಳಲು ಈ ಆಯಾಮವನ್ನು ತಿಳಿದುಕೊಳ್ಳುವದು ಅವಶ್ಯಕವಾಗಿರುವ ಮಾರ್ಗವಾಗಿದೆ. ಇಲ್ಲಿ ಶ್ರೀ ಅರವಿಂದರೂ ಬಾಹ್ಯಾಕಾಶದ ಆಯಾಮಗಳ ಬಗ್ಗೆ ವಿವರಿಸುತ್ತಾರೆ – ಕಾಲ, ಸ್ಪಂದನ ಮತ್ತು ಶಾಶ್ವತತೆ ಇವು ನಿಯತಿಯ ಪ್ರಕಾರವೇ ಇರುತ್ತವೆ. 'ಬಾಹ್ಯಾಕಾಶ'ದ ಈ ಎಲ್ಲಾ ಆಯಾಮಗಳು ಮಾನವನಿಗೆ ಆಶ್ಚರ್ಯವನ್ನುಂಟು ಮಾಡುತ್ತವೆ. ಆದರೆ ಇವೆಲ್ಲವೂ ಒಂದು ರಹಸ್ಯ ಪರದೆಯ ಹಿಂದೆ ಹುದುಗಿಸಿರುವ ನಿಧಿಯಂತಿದೆ. ಈ ನಿಧಿಯ ರಹಸ್ಯವನ್ನು ತೆರೆಯಲು ಮಾನವನು ಕುತೂಹಲದಿಂದ ಹುಡುಕುತ್ತಲೇ ಇದ್ದಾನೆ. ಏಕೆಂದರೆ ಅವಕಾಶ, ಕಾಲ ಮತ್ತು

ಲಯ ಎಲ್ಲವೂ ನಿರಾಕಾರ ರೂಪದಲ್ಲಿವೆ. ಆದಾಗ್ಯೂ ಅವು ಸ್ಪರ್ಶಗೋಚರ; ಆತ್ಮಕ್ಕೆ ದೃಷ್ಟವಾಗುತ್ತವೆ. ಆತ್ಮವು ಅವುಗಳನ್ನು ಸ್ಪರ್ಶಿಸಬಹುದು.

ಈ ವಿಧಾನದಲ್ಲಿ ವೇದಗಳು ಶಾಶ್ವತತೆಯ ಸಾಕ್ಷಾತ್ಕಾರದಿಂದ, ಖಚಿತವಾದ ಸೂತ್ರದ ಅನುಷ್ಠಾನದ ಬಗ್ಗೆ ಹೇಳುತ್ತವೆ ಮತ್ತು ಈ ಸೃಷ್ಟಿಯೂ ಅದನ್ನೇ ಪ್ರತಿನಿಧಿಸುತ್ತದೆ. ಇಂತಹ ವಿಶ್ವಪ್ರಜ್ಞೆಯೊಂದಿಗೆ ಸದಾ ಸ್ಪಂದನಗೊಳ್ಳುತ್ತಿರುವ–ದರಿಂದಲೇ ಉಪನಿಷತ್ತುಗಳು ಪರಿಪೂರ್ಣತೆಯ ಪಥದಲ್ಲಿ ಜ್ಞಾನಪೂರ್ಣ ಜೀವನವನ್ನು ರೂಪಿಸಲು ಸದಾ ನೆಲೆಸಿವೆ. ಇಂತ ವಿಶೇಷತೆಯಿಂದಾಗಿಯೇ ಉಪನಿಷತ್ತುಗಳನ್ನು ಶುದ್ಧ ವಿಜ್ಞಾನ (ಪರಾವಿದ್ಯಾ) ಎಂದೇ ಆರಾಧಿಸಲಾಗುತ್ತಿದೆ. ನಾದ–ಶಾಶ್ವತತೆ–ಕಾಲ ಇವು ಸೃಷ್ಟಿಯ ಆಯಾಮಗಳು. ಇವೆಲ್ಲವುಗಳ ಪರಿಪೂರ್ಣ ಸಂಯೋಜನೆಯು ಮತ್ತು ಇವುಗಳ ಆತ್ಮವಾಗಿರುವ ಪ್ರಜ್ಞೆಯೇ ಪ್ರಕೃತಿಯಾಗಿರುತ್ತದೆ. ಇದು ಪರಿಶುದ್ಧವಾಗಿರುವ ಸ್ವಾಭಾವಿಕವಾಗಿರುವ ವಿಕಾಸಕ್ಕೆ ಅವಕಾಶವನ್ನು ಒದಗಿಸುವ ಸಾರ್ವತ್ರಿಕ ಘಟನೆಗಳಾಗುತ್ತ ಸಾಗುತ್ತವೆ. ಇದರಿಂದ ಮಾನವನಿಗೆ ಈ ನಿತ್ಯ ನಿರಂತರ ವಿಕಾಸದ ಅಲೆಯ ಮೇಲೆ ಸುಲಲಿತವಾಗಿ ತೇಲಿಕೊಂಡು ಪ್ರಗತಿಯ ಪಥದಲ್ಲಿ ಸಾಗಿ, ಗಮ್ಯವನ್ನು ತಲುಪಲು ಸಾಕಷ್ಟು ಸಾಮರ್ಥ್ಯವನ್ನೂ ಒದಗಿಸುತ್ತವೆ.

## ಯೋಗನಿದ್ರೆಯಲ್ಲಿ ಹೃದಯವು ಜ್ಞಾನದಿಂದ ಪೂರ್ಣಗೊಳ್ಳುತ್ತದೆ

ಈ ವೈಶ್ವಿಕ ನಾದವನ್ನೇ ವಾಕ್ ಎಂದು ಕರೆಯಲ್ಪಡುತ್ತದೆ. ಇದು ಸೌರಮಂಡಲದ ವ್ಯವಸ್ಥೆಯಲ್ಲಿ ಪ್ರಜ್ಞೆಗೆ ಪ್ರವೇಶಿಸಿದಾಗ, ಅದು ಸಹಜವಾಗಿ ಲೋಕನಾದವಾಗಿ ಪರಿವರ್ತನಗೊಳ್ಳುತ್ತದೆ. ಮತ್ತೆ ವಿಕಾಸದ ಅಲೆಯ ಗತಿಯಲ್ಲಿ ಅದು ಭೂಮಂಡಲದ ಅವಕಾಶಕ್ಕೆ ಪ್ರವೇಶಿಸಿ, ಮಾನವನ ಪ್ರಜ್ಞೆಯು ಲಯಬದ್ಧಗೊಳ್ಳಲು ತೊಡಗಿಸಿಕೊಳ್ಳುತ್ತದೆ. ಇದು ಧ್ವನಿಯ ಸ್ವರೂಪದಲ್ಲಿ ಅಭಿವ್ಯಕ್ತ ಗೊಳ್ಳುತ್ತದೆ. ಇದರಿಂದ ಉತ್ಪತ್ತಿಗೊಳ್ಳುವ ಶಬ್ದಗಳು ಕಾಲಾತೀತವಾಗುವ ಮಂತ್ರಸ್ವರೂಪವನ್ನೇ ಹೊಂದಿರುತ್ತವೆ.

ಹೀಗಾಗಿ ಪ್ರಜ್ಞೆಯು ಶಬ್ದದ ಸ್ವರೂಪದಲ್ಲಿ ಇದ್ದಾಗ ಆಲಿಸಲು ಸಾಧ್ಯವಾಗುತ್ತದೆ. ವೈಶ್ವಿಕ ಪ್ರಜ್ಞೆಯೊಂದಿಗೆ ಸ್ಪಂದನಗೊಳ್ಳುತ್ತಿರುವ ಮತ್ತು ಅದರಲ್ಲಿಯೇ ತಲ್ಲೀನಗೊಳ್ಳುವದೇ ಅದರ ಆತ್ಮದ ಅಭೀಪ್ಸೆಯೂ ಆಗಿರುವಾಗ, ಹೃದಯದ

ಸ್ವರೂಪದಲ್ಲಿ ಮಾನವನಲ್ಲಿ ರೂಹುಪಡೆಯುತ್ತದೆ. ಇದರಿಂದ ಮಾನವನ ಆತ್ಮವು ವೈಶ್ವಿಕ ಚಿತ್ತದ ಅನಂತಾನಂತ ಗುಣವನ್ನೇ ಹೊಂದಿರುತ್ತದೆ. ಹೀಗಾಗಿ ಅದು ಮಾನವನ ದೇಹದಲ್ಲಿ – ತಾತ್ಕಾಲಿಕವಾಗಿ ಬಂಧನದಲ್ಲಿದ್ದಂತೆ ಕಂಡರೂ– ತಲ್ಲೀನ ಸಮಾಧಿಯ ಹಂತದಲ್ಲಿ ಸಮ್ಮಿಲನಗೊಳ್ಳಲು ಸದಾ ಏಕಾಗ್ರಚಿತ್ತದಲ್ಲಿ ಧ್ಯಾನ ಮಾಡುತ್ತದೆ. ಮಾನವನ ದೇಹಸಂರಚನೆಯೂ ಸಹಿತ ಈ ವ್ಯವಸ್ಥೆಗೆ ಹೊಂದಿಕೊಳ್ಳುವಂತೆಯೇ ರೂಪಿಸಲ್ಪಟ್ಟಿದೆ. ಇದು ಸೃಷ್ಟಿಯ ರಹಸ್ಯವಾಗಿದೆ. ವೈಶ್ವಿಕ ನಾದದ ಸ್ಪಂದದೊಡನೆ ಸಮಸ್ಪಂದಿಯಾಗುವ ಎಲ್ಲ ಅಂಶಗಳನ್ನೂ ಮಾನವನ ದೇಹವು ಹೊಂದಿದೆ. ಇಲ್ಲಿ ವಾಕ್–ನಾದ–ಧ್ವನಿ–ಶಬ್ದ ಇವೆಲ್ಲವೂ ಆತ್ಮದ ಮಿಡಿತಕ್ಕೆ ಅನುಗುಣವಾಗಿಯೇ ಹೃದಯದ ಸ್ಪಂದನವಾಗಿ ವೈಶ್ವಿಕ ಮಾನವ(ಅತಿಮಾನವ)ನಾಗುವ ವ್ಯವಸ್ಥೆ ರೂಪುಗೊಂಡಿದೆ. ಇದನ್ನು ಉಪನಿಷತ್ತೂ ಕೂಡ ಸ್ಪಷ್ಟವಾಗಿಯೇ ಹೇಳುತ್ತಿದೆ. ಪಶ್ಯಂತಿಯು ವಾಕ್‌ನ ಮೂರನೇ ಹಂತವಾಗಿದೆ. ಇದರ ಸ್ಥಾನವು ಮಾನವನ ಹೃದಯ. ಹೀಗಾಗಿ ತಲ್ಲೀನ ಧ್ಯಾನದಲ್ಲಿರುವ ಹೃದಯವು ಸದಾ ಜ್ಞಾನಪೂರ್ಣವಾಗಿ ಬೆಳಗುತ್ತದೆ.

*

## ಶ್ರೀ ಅರವಿಂದರ

## 'ಗೀತಾ ಪ್ರಬಂಧಗಳು'

**– ಅನುವಾದ: ಜಾನ್ವಿ**

**8**

## ಅಧ್ಯಾಯ – 7

## ಕ್ಷತ್ರಿಯನ ಆರ್ಯ ಧರ್ಮ

ಕುರುಕ್ಷೇತ್ರದಲ್ಲಿ ತನ್ನೊಡನೆ ಯುದ್ಧ ಮಾಡಲು ನಿಂತಿರುವ ಸ್ವಜನರನ್ನು ಕಂಡು, ಅವನ ಮನ ಛಿದ್ರ–ವಿಚ್ಛಿದ್ರವಾಗಿ ಹೋಯಿತು. ಅವನನ್ನು ಆ ದೃಶ್ಯವು ತೀವ್ರ ಆತ್ಮ ನಿರೀಕ್ಷಣೆಗೆ ತೊಡಗುವಂತೆ ಮಾಡಿತು. ಕುರುಕ್ಷೇತ್ರದಲ್ಲಿ ಆಗಬಹುದಾದ ಮಹಾ ಹತ್ಯಾಕಾಂಡ, ಘೋರ ರಕ್ತಪಾತದಿಂದ ವೈಯಕ್ತಿಕವಾಗಿ ತಾನಾದರೂ ದೂರ ಉಳಿಯಬಹುದಲ್ಲ ಎಂದು ಅವನು ಯೋಚಿಸಿದನು; ಅವನ ದುರ್ಬಲ ಮನವು ಯುದ್ಧದಿಂದ ಹಿಂದೆ ಉಳಿಯುವಂತೆ ಅವನಿಗೆ (ಕು) ಸಲಹೆ ನೀಡಿತು. ತಾನು ಬಹುದೊಡ್ಡ ಪಾಪ ಮಾಡಲು ಸನ್ನದ್ಧನಾಗಿರುವುದಾಗಿ ತೋರಿತು. ಅದರಿಂದ ತುಂಬ ದುಃಖವಾಯಿತು. ಈ ಪಾಪಕರ್ಮದಿಂದ ತಾನು ದೂರ ಉಳಿಯಬೇಕೆಂದು ಅವನಿಗೆ ಅನಿಸತೊಡಗಿತು. ಯುದ್ಧ, ಲಕ್ಷಾಂತರ ಜನರ ನಾವು, ಸಾಮಾಜಿಕ ಜೀವನದಲ್ಲಿ ಅಪಾರ ಏರು–ಪೇರು, ವೈಯಕ್ತಿಕವಾಗಿ ಜನರ ಜೀವನದಲ್ಲಿ ಅಮಂಗಳ, ಅಶುಭ ಪರಿಣಾಮವಾಗುವುದೆಂಬ ಯೋಚನೆಯೇ ಅವನನ್ನು ಎದೆಗುಂದಿಸಿತು. ತನ್ನ ಮನದ ನೆನೆಗುದಿಯನ್ನು ತನ್ನ ಪರಮ ಮಿತ್ರನೂ, ದೈವೀ ಗುರುವೂ ಆದ ಶ್ರೀಕೃಷ್ಣನೆದುರು ಮನ ಬಿಚ್ಚಿ ತೋಡಿಕೊಂಡನು.

ಆದರೆ ಶ್ರೀಕೃಷ್ಣನು ಅವನ ವಾದವನ್ನು ಬೆಂಬಲಿಸುವುದಂತೂ ದೂರ ಉಳಿಯಿತು. ಅತಿ ಕಠಿಣ, ಶಬ್ದಗಳಲ್ಲಿ ಅರ್ಜುನನ ಚಿಂತನೆಯನ್ನು ನಿಂದಿಸಿದನಲ್ಲದೇ, ಕತ್ತರಿಸಿ ಹಾಕಿದನು. ಅವನು ಹೇಳಿದನು– "ಅರ್ಜುನಾ! ಇದೆಲ್ಲ ನಿನ್ನ ಮನದ ಗೊಂದಲ. ನಿನ್ನ ಭ್ರಮೆ, ನಿನ್ನ ಷಂಡತನವು ನಿನ್ನ ವಾದದಲ್ಲಿ ಎದ್ದು ಕಾಣುತ್ತದೆ. ವೀರನಾದವನಿಗೆ, ಯೋಧನಾದವನಿಗೆ ಯುದ್ಧ ಸಾಮಾನ್ಯ ಮತ್ತು ಆದ್ಯ ಕರ್ತವ್ಯ. ಕುಂತಿಯ ಮಗನಾಗಿ ನೀನು ಈ ರೀತಿ ಹೇಡಿಯಂತೆ ಮಾತನಾಡುವುದು ಯೋಗ್ಯವಲ್ಲ. ಧರ್ಮ ಮತ್ತು ನ್ಯಾಯಗಳಿಗೆ ನೀನೇ

ಆಶ್ರಯಸ್ಥಾನ. ನ್ಯಾಯ ಮತ್ತು ಧರ್ಮಗಳಿಗೆ ಸಂಕಟವೊದಗಿದಾಗ ನೀನೀ ರೀತಿ ಪಲಾಯನವಾದ ಪಠಿಸುತ್ತಿರುವುದು ಅಯೋಗ್ಯ. ಕೇವಲ ರಣಾಂಗಣದ ದರ್ಶನ ಮಾತ್ರದಿಂದ ನಿನ್ನ ಮನ, ಹೃದಯಗಳು ಕ್ಷೋಭೆಗೊಳಗಾಗುವುದೆಂದರೆ ಏನು? ಇಂದ್ರಿಯಗಳು ಹತವೀರ್ಯವಾಗಿ, ಬುದ್ಧಿ ಸಂಶಯಗ್ರಸ್ತವಾಗಿ, ಇಚ್ಛಾಶಕ್ತಿ, ಕ್ರಿಯಾಶಕ್ತಿ ನಷ್ಟವಾಗುವುದೆಂದರೇನು? ನಿನ್ನಲ್ಲಿರುವ ಮಹಾಮಹಾ ದಿವ್ಯಾಸ್ತ್ರಗಳನ್ನೆಲ್ಲ ಕೈಚೆಲ್ಲಿ ಹತಾಶನಾಗಿ ಕುಳಿತಿರುವುದು ಖಂಡನೀಯ, ಸರ್ವಥಾ ನಿಂದನೀಯ. ಪರಮೇಶ್ವರನು ನಿನಗೆ ವಹಿಸಿಕೊಟ್ಟಿರುವ(ಯುದ್ಧವೆಂಬ) ಕರ್ತವ್ಯವನ್ನು ನಿರಾಕರಿಸಿ ಹೀಗೆ ಕರ್ಮಪಲಾಯನನಾಗುವುದು ಯೋಗ್ಯವಲ್ಲ. ಆರ್ಯ ವೀರನು ಹೇಡಿತನವನ್ನೆಂದಿಗೂ ಸತ್ಕರಿಸುವುದಿಲ್ಲ. ನೀನು ಮಾಡುತ್ತಿರುವುದು ಅನಾರ್ಯ, ಅಸ್ವರ್ಗ್ಯ, ಅಕೀರ್ತಿಕರ, ಕ್ಷಾತ್ರ ಧರ್ಮಾನುಷ್ಠಾನದಿಂದ ಲಭ್ಯವಾಗಬಹುದಾದ ವೈಭವ, ಕೀರ್ತಿ, ರಾಜ್ಯಭೋಗ, ಐಶ್ವರ್ಯ, ಎಲ್ಲದಕ್ಕೂ ಎರವಾಗಿ, ಸ್ವರ್ಗ ಉನ್ನತ ಲೋಕ ಎಲ್ಲವನ್ನು ಕಳೆದುಕೊಳ್ಳುವಿ, ಆತ್ಮಾನುಕಂಪ ಅತ್ಯಂತ ಹೇಯವಾದುದು. ವೀರ ವೃತ್ತಿಯನ್ನಾಧರಿಸು, ಕ್ಷಾತ್ರ ಧರ್ಮವನ್ನು ಮೆರೆ. ಶತ್ರುಗಳನ್ನು ಸಂಹಾರಮಾಡು. ಏಳು ಕರ್ತವ್ಯಪರನಾಗಿ ಕರ್ಮಮಾಡು"

ಶ್ರೀಕೃಷ್ಣನ ಈ ಮಾತು ವೀರೋಚಿತವಾಗಿದೆ. ಹತವೀರ್ಯನಾಗಿದ್ದ ಅರ್ಜುನನನ್ನು ಯುದ್ಧಕ್ಕೆ ಹುರಿದುಂಬಿಸುವಂಥದಾಗಿದೆ ಎಂಬುದೇನೋ ನಿಜ. ಆದರೆ ದೈವೀ ಪುರುಷನಾದವನು ಈ ರೀತಿ ಹೇಳುತ್ತಾನೆಯೇ? ಸಾಧು ವೃತ್ತಿ, ಸೌಮ್ಯ ಪ್ರವೃತ್ತಿ, ವೈರಾಗ್ಯ, ಸ್ವಾರ್ಥತ್ಯಾಗ, ಪರೋಪಕಾರ, ಅಹಿಂಸೆ ಮುಂತಾದ ಗುಣಗಳನ್ನಲ್ಲವೇ ದಿವ್ಯ ಪುರುಷ ಬೋಧಿಸಬೇಕು? ಆದರೆ ಗೀತೆಯಲ್ಲಿ ದಿವ್ಯಗುರು ಇದಕ್ಕೆ ವಿರುದ್ಧವಾಗಿ ಮಾತನಾಡುತ್ತಿದ್ದಾನೆ ಅನಿಸುವುದಿಲ್ಲವೇ? ವೈರಾಗ್ಯವನ್ನು, ಅಹಿಂಸೆಯನ್ನು, ದಯೆಯನ್ನು, ಅನುಕಂಪವನ್ನು ಗೀತೆಯು ಹೃದಯ ದೌರ್ಬಲ್ಯವೆಂದು, ಧರ್ಮಭ್ರಷ್ಟತೆ ಎಂದು ಜರಿಯುತ್ತಿದೆಯಲ್ಲ ಎಂದು ಮೇಲ್ನೋಟಕ್ಕೆ ಅನಿಸಿಬಿಡುವುದಲ್ಲವೇ? ಅರ್ಜುನನ ಮನಸ್ಸು ವಿಷಾದದಿಂದ, ನಿರುತ್ಸಾಹದಿಂದ ತುಂಬಿದೆ, ಕಣ್ಣುಗಳಲ್ಲಿ ಅಶ್ರು ತುಂಬಿ ನಿಂತಿವೆ, ಅನುಕಂಪ–ದಿಂದಾವೃತ್ತವಾದ ಮನವು ಯುದ್ಧ ವಿಮುಖತೆಯನ್ನು ಯೋಚಿಸುತ್ತಿದೆ; ಇಂಥ ಸ್ಥಿತಿಯನ್ನು ಅನುಚಿತ, ಅಯೋಗ್ಯ, ನಿಂದನೀಯ ಎಂದು ಶ್ರೀಕೃಷ್ಣನು ಜರಿಯುತ್ತಿರುವುದು ಸರಿಯೇ? ಇದು ದೌರ್ಬಲ್ಯವೇ? ಅನುಕಂಪವು

ನಿರ್ಭರ್ತ್ಸನಾ ಯೋಗ್ಯವೇ? ಗೀತೆಯು ಈ ಮೂಲಕ ಮಾನವೀಯ ಗುಣಗಳಾದ ಅನುಕಂಪ, ದಯೆ, ಅಹಿಂಸೆ, ವೈರಾಗ್ಯ ಇವೆಲ್ಲ ಖಂಡನೀಯ ಎಂದು ಸಾರುವುದೇನು? ಮಾನವನ ಜೀವನದಲ್ಲಿ ವಿರೋದಾತ್ತ ಕರ್ಮ, ಶೌರ್ಯ ಇವುಗಳಿಗೆ ಮಾತ್ರ ಬೆಲೆ ಇದೆಯೇ ಎಂದು ಅನಿಸಿಬಿಡುವುದಲ್ಲವೇ? ನಾರ್ವೆ ದೇಶದ ಮಹಾ ವೀರನೊಬ್ಬನು ತನಗೆ ಅತಿ ಕಠಿಣವಾದ, ದಯಾಹೀನ ಹೃದಯವನ್ನು ನೀಡಿದ್ದಕ್ಕಾಗಿ ದೇವರನ್ನು ಕೊಂಡಾಡುತ್ತಿದ್ದನಂತೆ. ಹಿಬ್ರೂ, ಪುರಾತನ ಟ್ಯೂಟನ್ ಈ ದೇಶಗಳು ದಯೆಯನ್ನು ದೌರ್ಬಲ್ಯವೆಂದೇ ತಿಳಿಯುತ್ತಿದ್ದವು. ನೀತ್ಸೆ ಎಂಬ ತತ್ವಜ್ಞಾನಿಯಂತೂ ಅಧಿಕಾರ, ಅಹಂಕಾರದ ಶಕ್ತಿ, ಇವೇ ಮಾನವನ ಜೀವನದ ಉನ್ನತ ಮೌಲ್ಯಗಳೆಂದು ಹೇಳುತ್ತಿದ್ದನು. ಅವುಗಳನ್ನೇ ವೈಭವೀಕರಿಸಿ ಆತ ಕೆಲ ಗ್ರಂಥಗಳನ್ನು ಬರೆದ್ದಾನೆ.

ಗೀತೆಯೂ ಸಹ, ಹಿಬ್ರೂ, ಟ್ಯೂಟನ್, ಜರ್ಮನ್‌ನ ನೀತ್ಸೆಯಂತೆ ನಿರ್ದಯೆ, ಹಿಂಸೆ, ಯುದ್ಧಗಳೇ ಶ್ರೇಷ್ಠ, ಉಳಿದಂತೆ ಸೌಮ್ಯ ಗುಣಗಳು ಖಂಡನೀಯ ಎಂದು ಹೇಳುವುದೇನು? ಅರ್ಜುನನನ್ನು ಶ್ರೀಕೃಷ್ಣನು ಜರಿಯುವ ರೀತಿ ನೋಡಿದರೆ ಇಂಥ ಸಂದೇಹ ಬರುವುದು ಸಹಜವಿದೆ. ಆದರೆ ನಾವು ಈ ಬಗ್ಗೆ ಆಳವಾಗಿ ವಿಚಾರ ಮಾಡಿದಾಗ ಮಾತ್ರ ಸತ್ಯ ಸಂಗತಿ ತಿಳಿಯುತ್ತದೆ. ಗೀತೆಯ ಬೋಧನೆ ಏನೂ ಬೇರೆಲ್ಲಿಂದಲೋ ಬಂದಿಲ್ಲ. ಅದು ಭಾರತ ಧರ್ಮದ ಮೂಲದಿಂದಲೇ ಬಂದಿದೆ. ಭಾರತೀಯರಿಗೆ ದಯೆ, ಅನುಕಂಪ ಯಾವಾಗಲೂ ಅತ್ಯಂತ ಶ್ರೇಷ್ಠ ದೈವೀ ಗುಣಗಳೆ ಆಗಿವೆ. ಮುಂಬರುವ ಅಧ್ಯಾಯಗಳಲ್ಲಿ ದೈವೀ ಗುಣ ಸ್ವಭಾವಗಳನ್ನು ಹೇಳುವ ಸಂದರ್ಭದಲ್ಲಿ ಶ್ರೀಕೃಷ್ಣನು ಸರ್ವಭೂತಹಿತ, ಅನುಕಂಪ, ದಯೆ, ಮಾರ್ದವತೆ, ಅಕ್ರೋಧ, ಅಹಿಂಸೆ ಮುಂತಾದವುಗಳನ್ನು ಪ್ರಶಂಸಿಸಿದ್ದಾನೆ. ಅವು ದೌರ್ಬಲ್ಯ ಅಲ್ಲ, ಬದಲಾಗಿ ಬಲಿಷ್ಠನಾದವನ ಗುಣ ಸ್ವಭಾವ ಎಂದೇ ಹೇಳಿದ್ದಾನೆ. ಕಠೋರತನ, ಕ್ರೌರ್ಯ, ಹಿಂಸೆಯಲ್ಲಿ ಆನಂದ ಪಡುವ ಗುಣ, ಕೊಲ್ಲುವುದರಲ್ಲಿ ಸಂತೋಷಿಸುವ ಸ್ವಭಾವ, ಅನ್ಯರ ಸಂಪತ್ತನ್ನು ದೋಚುವುದು ಮತ್ತು ಸಂಗ್ರಹಿಸುವ ನೀಚಪ್ರವೃತ್ತಿ ಇವೆಲ್ಲವನ್ನು ಆಸುರಿ ಗುಣಗಳೆಂದು ಸ್ವತಃ ಶ್ರೀಕೃಷ್ಣನೇ ವಿವರಿಸಿದ್ದಾನೆ. ಇವೆಲ್ಲ ಪರಮಾತ್ಮನ ವಿರೋಧಿ ಗುಣಗಳು, ಪರಮಾತ್ಮನ ಸರ್ವಾಂತರ್ಯಾಮಿತ್ವವನ್ನು ಅಲ್ಲಗೆಳೆಯುವ ಗುಣಗಳು, ತಾವು ಆರಾಧಿಸುವ ದೈವವೊಂದೇ ಏಕೈಕ ಶ್ರೇಷ್ಠ ದೈವ, ಮಿಕ್ಕವೆಲ್ಲ ವಿಕಾರಗಳೆಂದು ಸಾರುವುದು

ಆಸುರಿಗುಣ ಎಂದು ಬಹಳ ವಿವರವಾಗಿ ದೈವೀ ಗುರು ಹೇಳಿರುವುದನ್ನು ನೋಡಬಹುದು. ನಾವೆಲ್ಲ ಸ್ಪಷ್ಟವಾಗಿ ಅರ್ಥೈಸಿಕೊಳ್ಳಬೇಕಾಗಿರುವುದೇನೆಂದರೆ, ಇವೆಲ್ಲ ದೈವೀ ಮೂಲದಿಂದ ಬಂದವುಗಳಲ್ಲ.

ಶ್ರೀಕೃಷ್ಣನು ಅರ್ಜುನನ್ನು ಈ ರೀತಿ ಪ್ರಶ್ನಿಸುತ್ತಾನೆ. "ಈ ತೆರನಾದ ಕಶ್ಮಲ ವಿಚಾರ ನಿನಗೆ ಎಲ್ಲಿಂದ ಬಂದಿತು? ಅದೂ ಇಂಥ ವಿಕಟ ಪರಿಸ್ಥಿತಿಯಲ್ಲಿ?" ಈ ಒಂದೇ ಒಂದು ಪ್ರಶ್ನೆ ಸಾಕು. ಅರ್ಜುನನು ತನ್ನ ವೀರ ಭಾವದಿಂದ ಚ್ಯುತನಾದ ವಿಸಂಗತಿಯನ್ನು ತೋರಿಸುತ್ತದೆ. ದೈವೀ ಅನುಕಂಪ ಅಥವಾ ದಯೆ ಉನ್ನತವಾದ ಸ್ತರದಿಂದ ಇಳಿದುಬರುತ್ತದೆ; ಆದರೆ ಯಾರಲ್ಲಿ ಮೂಲತಃ ಆ ಸ್ವಭಾವ ಇಲ್ಲವೋ, ಅವನ ಮೂಲ ಪ್ರಕೃತಿಯಲ್ಲಿ ಅದು ಸ್ಥಾಪಿತವಾಗಿಲ್ಲವೋ, ಯಾರು ತಾನು ಅತಿ ಶ್ರೇಷ್ಠನಾದ ಯೋಚನೆಯಿಂದ ಕೂಡಿದ ಮಾನವನೆಂದು ನಟಿಸಲು ಪ್ರಯತ್ನ ಮಾಡುತ್ತಾನೋ, ತಾನು ಶ್ರೇಷ್ಠ, ಅತಿಮಾನವನೆಂಬಂತೆ ತೋರಿಸಿಕೊಳ್ಳಲು ಪ್ರಯತ್ನ ಮಾಡುತ್ತಾನೋ ಅವನು ಹಾಗೆ ವರ್ತಿಸುವುದು ಮೂಢತನವಷ್ಟೇ ಅಲ್ಲ ಉದ್ಧಟತನ ಕೂಡ, ಯಾರಲ್ಲಿ ದೈವೀ ಗುಣಗಳು ಸ್ವಯಂ ಆಗಿ ಸ್ಥಾಪಿತವಾಗಿವೆಯೋ, ಯಾರ ಪ್ರಕೃತಿಯೇ ದಿವ್ಯವಾಗಿದೆಯೋ ಅವನು ಮಾತ್ರ ದೇವಮಾನವ ಅಥವಾ ಅತಿಮಾನವನು. ದೈವೀ ಕೃಪೆ ಅಥವಾ ಅನುಕಂಪವು ಎಲ್ಲವನ್ನೂ ಪ್ರೇಮದಿಂದ ಹಾಗೂ ವಿವೇಕದಿಂದಲೇ ಗಮನಿಸುತ್ತದೆ; ಶಾಂತವಾದ ಶಕ್ತಿಯಿಂದಲೇ ಮಾನವನ ಯುದ್ಧ, ಹೋರಾಟಗಳನ್ನು ವೀಕ್ಷಿಸುತ್ತದೆ; ಮಾನವ ಸಾಮರ್ಥ್ಯ ಹಾಗೂ ದೌರ್ಬಲ್ಯ ಎರಡನ್ನೂ, ಅವನ ಪಾಪ, ಪುಣ್ಯಗಳನ್ನು, ಸುಖ, ದುಃಖಗಳನ್ನು, ಜ್ಞಾನ, ಅಜ್ಞಾನಗಳನ್ನು, ಅವನ ಜಾಣತನ ಅವನ ದಡ್ಡತನ ಎಲ್ಲವನ್ನೂ, ಅವನ ಅಭೀಪ್ಸೆ ಹಾಗೂ ಅಪಯಶಸ್ಸು ಎಲ್ಲವನ್ನೂ ಗಮನಿಸುತ್ತದೆ ಮತ್ತು ಅವಶ್ಯವಿದ್ದಾಗ ಸಹಾಯ ಮಾಡುತ್ತದೆ. ಪರಿಸ್ಥಿತಿಯನ್ನು ಸರಿಪಡಿಸುತ್ತದೆ. ಸಾಧುಪುರುಷನಲ್ಲಿ ಪರೋಪಕಾರಿಯಾದವನಲ್ಲಿ ಅದು ಔದಾರ್ಯವಾಗಿ, ಪ್ರೀತಿಯಾಗಿ ಪ್ರಕಟವಾಗುತ್ತದೆ; ಬುದ್ಧಿಜೀವಿಯಲ್ಲಿ(ವಿಚಾರವಂತನಲ್ಲಿ), ಮುಂದಾಳುವಿನಲ್ಲಿ ಅದು ವಿಶಾಲನಾದ, ಇತರರಿಗೆ ಸಹಾಯ ನೀಡುವ ಶಕ್ತಿಯಾಗಿ, ವಿವೇಕವಾಗಿ ಪ್ರಕಟವಾಗುತ್ತದೆ. ಈ ಗುಣವೇ ಆರ್ಯಯೋಧನಲ್ಲಿ, ಅವನ ದಯೆಯೇ ಅನುಕಂಪದ ಹೃದಯವಾಗಿ ವ್ಯಕ್ತವಾಗುತ್ತದೆ; ಅದು ತೊಂದರೆಗೊಳಗಾದವರನ್ನು ಮತ್ತಷ್ಟು ಹಿಂಸಿಸುವುದಿಲ್ಲ. ಬದಲಾಗಿ ಅವರಿಗೆ

ರಕ್ಷಣೆ ನೀಡುತ್ತದೆ. ಪತಿತರನ್ನು, ಗಾಯ ಹೊಂದಿದವರನ್ನು, ಹಿಂಸೆಗೊಳಗಾದವರನ್ನು ರಕ್ಷಿಸುತ್ತದೆ. ಅವರಿಗೆ ಆಶ್ರಯವೊದಗಿಸಿ ಕೊಡುತ್ತದೆ. ಆದರೆ ಅದೇ ಶಕ್ತಿಯು, ಶೌರ್ಯದಿಂದ, ದೈವೀ ಅನುಕಂಪದಿಂದಲೇ ದುಷ್ಟರನ್ನು, ರಾಕ್ಷಸರನ್ನು, ಜನ ಪೀಡಕರನ್ನು ನಾಶಮಾಡುತ್ತದೆ. ಅದೇನೂ ಕ್ರೋಧದ ಅಥವಾ ದ್ವೇಷದ ಕ್ರಿಯೆಯಲ್ಲ – ಏಕೆಂದರೆ ಕ್ರೋಧ, ದ್ವೇಷಗಳು ದೈವೀ ಗುಣಗಳಲ್ಲ ಅದು ಕೂಡ ತನ್ನ ಬಲದಿಂದ ಸೊಕ್ಕಿ ಮೆರೆದು ದಾರಿ ತಪ್ಪಿದ ರಾಕ್ಷಸನನ್ನು ಪ್ರೀತಿಯಿಂದಲೇ, ದಯೆಯಿಂದಲೇ ನಾಶಮಾಡುವ ದೈವೀ ಕಾರ್ಯವಾಗಿದೆ. ಏಕೆಂದರೆ ಅವರನ್ನು ಕೂಡ ಹೆಚ್ಚಿನ ಪಾಪಕರ್ಮಗಳಿಂದ ತಡೆಯಬೇಕಾಗಿದೆ. ರಕ್ಷಿಸಬೇಕಾಗಿದೆ. ಭಾರತದ ಪುರಾಣಗಳಲ್ಲಿ ಇಂಥ ಅನೇಕ ಕಥೆಗಳನ್ನು ನಾವು ಕೇಳಬಲ್ಲೆವು, ಸ್ವರ್ಗ, ನರಕಗಳ ಸಂಗತಿಗಳನ್ನು ಚೆನ್ನಾಗಿ ಬಲ್ಲೆವು. ಅಲ್ಲಿ ಕೂಡ ದಾರಿ ತಪ್ಪಿ ಜನ ಪೀಡಕರಾಗಿ ಮೆರೆದ ಅಸುರರನ್ನು ಸರಿ ದಾರಿಗೆ ತರುವ ಪ್ರಯತ್ನವಿದೆಯೇ ಹೊರತು. ಅವರನ್ನು ನಾಶ ಮಾಡುವ ಉದ್ದೇಶವಿಲ್ಲ. ಇದು ಭಗವಂತನ ಎಲ್ಲ ಅವತಾರದ ಕಾರ್ಯಗಳಲ್ಲಿ ಪ್ರಕಟವಾಗಿರುವುದು ನಮಗೆ ಚೆನ್ನಾಗಿ ಗೊತ್ತಿದೆ.

ಆದರೆ ಅರ್ಜುನನು ಯುದ್ಧದಿಂದ ನಿವೃತ್ತಿನಾಗಲು ಇಂಥ ದೈವೀ ಅನುಕಂಪ ಅಥವಾ ದಯೆ ಕಾರಣವಾಗಿರಲಿಲ್ಲ ಎಂಬುದನ್ನು ನಾವು ಗಮನಿಸಬೇಕು. ಅದು ಅನುಕಂಪವಲ್ಲ. ಬದಲಾಗಿ ದೌರ್ಬಲ್ಯ, ಆತ್ಮಾನುಕಂಪ, ಅಪೌರುಷತ್ವ, ನಪುಂಸಕತನ, ತನಗೆ ವಿಧಿಸಲಾದ ಕರ್ತವ್ಯದಿಂದ ಪಾರಾಗಲೆತ್ನಿಸುವ ಮನೋದೌರ್ಬಲ್ಯ ಅದು– ಈ ಆತ್ಮಾನುಕಂಪವೆಂಬುದು ನಿಜವಾಗಿ ಎಲ್ಲಕ್ಕಿಂತ ಹೀನಾಯವಾದದ್ದು, ನೀಚಪ್ರವೃತ್ತಿಯದು. ಆರ್ಯ ಜಾತಿಗಂತೂ ಅದು ಅಯೋಗ್ಯವಾದ ಮನೋಭಾವ. ಅಷ್ಟೇ ಏಕೆ ಪರರಿಗಾಗಿ ಅನುಕಂಪ ಪಡುವುದು ಕೂಡ ಈ ಆತ್ಮಲೋಲುಪ್ತತೆಯ ಒಂದು ರೂಪವೇ ಆಗಿದೆ. ಈ ಆತ್ಮಾನುಕಂಪವೇ ಹತ್ಯೆಯ ಆಲೋಚನೆ ಅಥವಾ ದೃಶ್ಯದಿಂದ ಹಿಂದೆ ಸರಿಯುವಂತೆ ಮಾಡುತ್ತದೆ. ಇದು ನರದೌರ್ಬಲ್ಯದ ಪರಿಣಾಮವಾಗಿದೆ. ಸ್ವಜನರೇ ಆದ ಧೃತರಾಷ್ಟ್ರನ ಮಕ್ಕಳನ್ನು ಕೊಲ್ಲಬೇಕಲ್ಲ ಎಂಬ ಅನುಕಂಪವು ಅರ್ಜುನನ ಹೃದಯವನ್ನು ದ್ರವಿಸುವಂತೆ ಮಾಡಿತು. ಅವರಿಲ್ಲದೇ ತನ್ನ ಜೀವಿತಕ್ಕೇನು ಅರ್ಥ ಅನಿಸುವಂತೆ ಮಾಡಿತು. ಇದು ಅವನ ಮನದ ದೌರ್ಬಲ್ಯವೇ. ವಿಕಾಸದ ಕೆಳ ಹಂತದಲ್ಲಿರುವ ಜನರಿಗೆ ಇದರಿಂದ ಲಾಭವಾಗಬಹುದೇನೋ; ಏಕೆಂದರೆ ಅನ್ಯಥಾ ಅಂಥವರು

ಕ್ರೂರರಾಗಿಬಿಡುವುದು, ಹಿಂಸಕರಾಗಿ ಬಿಡುವುದು. ಅಂಥವರು ದುರ್ಬಲ–ರಾಗಿರುವದೇ ಒಳ್ಳೆಯದು. ಅಂಥವರು ಇಂದ್ರಿಯ ಲೋಲುಪರಾಗಿರುವುದುಂಟು, ತಮ್ಮ ಅಹಂಕಾರದ ತೃಪ್ತಿಗಾಗಿ ಕ್ರೂರ ಕೃತ್ಯಗಳನ್ನು ಮಾಡದಂತೆ ಅಂಥವರಿಗೆ ಸೌಮ್ಯ ವೃತ್ತಿ ಅನುಸರಿಸಲು ಕಲಿಸಬೇಕು. ಸೌಮ್ಯ ಅಹಂಕಾರದ ಮೂಲಕ ಪ್ರಬಲ ಅಹಂಕಾರದ ಕೃತ್ಯಗಳ ದುಷ್ಪರಿಣಾಮಗಳನ್ನು ಕಡಿಮೆ ಮಾಡಲು ಅಂಥವರನ್ನು ಪ್ರೇರೇಪಿಸಬೇಕು. ಅದು ಜನರಿಗೂ, ಸ್ವತಃ ಅವರಿಗೂ ಸಹ ಹಿತಕರವೇ, ಅಂಥವರಲ್ಲಿ ರಜೋಗುಣ ಬಹಳ ಹೆಚ್ಚಾಗಿರುವುದು, ಅದನ್ನು ಕಡಿಮೆ ಮಾಡಬೇಕಾದರೆ ಅವರು ತಮೋಗುಣವನ್ನು ಆಶ್ರಯಿಸಬೇಕಾಗುವುದು. ಆದ್ದರಿಂದ ಈ ರೀತಿಯ ದೌರ್ಬಲ್ಯವು ದೋಷವೆನಿಸದೇ ಗುಣವೆನಿಸಬಹುದು. ಆದರೆ ಸಾಕಷ್ಟು ವಿಕಾಸ ಹೊಂದಿರುವ, ಸಾಂಸ್ಕೃತಿಕವಾಗಿ ಆರ್ಯ ಜನಾಂಗದ ಮಟ್ಟಕ್ಕೆ ಬೆಳೆದಿರುವ ವ್ಯಕ್ತಿಗೆ ಇಂಥ ದೌರ್ಬಲ್ಯದ ಅಗತ್ಯವಿರುವುದಿಲ್ಲ. ಅವನು ದೌರ್ಬಲ್ಯದ ಮೂಲಕ ಬೆಳೆಯಬೇಕಾಗಿಲ್ಲ. ಅವನು ಶಕ್ತಿಯಿಂದ ಹೆಚ್ಚಿನ ಶಕ್ತಿಗೆ ಬೆಳೆಯಬೇಕಿದೆ. ಅರ್ಜುನಂತೂ ನರ ಶ್ರೇಷ್ಠನು. ದೇವ ಮಾನವನು, ಅವನನ್ನೂ ಈ ಕಾರ್ಯಕ್ಕೆ ದೇವತೆಗಳೇ ಆಯ್ಕೆ ಮಾಡಿದ್ದಾರೆ. ಅವನಿಗೊಂದು ದಿವ್ಯ ಕರ್ತವ್ಯವನ್ನು ದೇವತೆಗಳೇ ವಿಧಿಸಿದ್ದಾರೆ. ಸ್ವತಃ ಭಗವಂತನೇ ಅವನ ರಥದ ಸಾರಥಿಯಾಗಿ ಮುನ್ನಡೆಸುತ್ತಿದ್ದಾನೆ. ದೇವತೆಗಳೇ ವರವಾಗಿ ನೀಡಿದ ಅಪೂರ್ವ ಗಾಂಢೀವ ಧನಸ್ಸು ಅವನಲ್ಲಿದೆ, ನಾನಾ ವಿಧದ ದಿವ್ಯಾಸ್ತ್ರಗಳಿವೆ. ಅವನ ವಿರೋಧಿಗಳು ಅನಾಚಾರಿಗಳು, ದೈವ ವಿರೋಧಿಗಳು ಹೀಗಿರುವಾಗ ತಾನು ಏನು ಮಾಡಬೇಕು. ಏನು ಮಾಡಬಾರದೆಂಬುದನ್ನು ತನ್ನ ಭಾವನೆಗನುಗುಣವಾಗಿ ನಿರ್ಧಾರ ಮಾಡುವ ಹಕ್ಕು ಅವನಿಗಿಲ್ಲ. ತನ್ನ ಕೃಪಯಾವಿಷ್ಟ ಹೃದಯದ ನೆಪ ಒಡ್ಡಿ, ಯುದ್ಧದಿಂದ ಹಿಂದೆ ಸರಿಯುವ ಹಕ್ಕು ಅವನಿಗಿಲ್ಲ, ತನ್ನ ಜೀವನಕ್ಕೇನೂ ಅರ್ಥ ಉಳಿಯದು, ತನಗೆ ಇದರಿಂದ ದುಃಖವಾಗುವುದು, ತನ್ನ ಜೀವನ ಬರಡಾಗಿ ಹೋಗಬಹುದು ಮುಂತಾಗಿ ವಿಚಾರ ಮಾಡುವ ಹಕ್ಕು ಕೂಡ ಅವನಿಗಿಲ್ಲ. ಏಕೆಂದರೆ ಸಾವಿರಾರು ಜನರ ನಾಶದಿಂದ ಜಗತ್ತಿನ ಜೀವನದಲ್ಲಿ ಏನು ಪರಿಣಾಮವಾದೀತು ಎಂದು ಯೋಚಿಸುವ ಪ್ರಸಂಗವೂ ಅದಲ್ಲ. ಏಕೆಂದರೆ ದುಷ್ಟರಾದ, ಧರ್ಮವಿರೋಧಿಗಳಾದ ಅವರು ಸಾಯಲೇಬೇಕಾಗಿರುವುದು ಜಗತ್ತಿನ ಹಿತದ ದೃಷ್ಟಿಯಿಂದ ಅನಿವಾರ್ಯವಾಗಿದೆ. ತಾನು ಏನು ಮಾಡಬೇಕಾಗಿದೆ, ತನ್ನ ಕರ್ತವ್ಯ ಏನು ಎಂಬುದನ್ನಷ್ಟೇ ಆತ ವಿಚಾರ ಮಾಡಬೇಕು. ತನ್ನ ಆರ್ಯ

ಕ್ಷತ್ರಿಯ ಧರ್ಮಕ್ಕೆ ಯೋಗ್ಯವಾದ ದೈವೀ ಆದೇಶವನ್ನಷ್ಟೇ ಅವನು ಪಾಲಿಸಬೇಕಾಗಿದೆ. ಅವನು ಮಾನವ ಕುಲದ ಹಿತವನ್ನು, ಜಗತ್ತಿನ ಒಳಿತನ್ನು ಮಾತ್ರ ನೋಡಬೇಕು. ಅವನು ಮಾನವನ ಏಳ್ಗೆಗಾಗಿ ದೈವ ನಿಯುಕ್ತನಾದ ಯೋಧನಾಗಿದ್ದಾನೆ. ಅಧರ್ಮದ ಸೈನಿಕರನ್ನು ನಾಶಮಾಡಿ ಮಾನವನ ವಿಕಾಸದ ದಾರಿಯನ್ನು ಸುಗಮಗೊಳಿಸಬೇಕಾಗಿರುವುದು ಅವನ ಕರ್ತವ್ಯವಾಗಿದೆ. ಅದರಿಂದ ಅವನು ಹಿಂತೆಗೆಯುವ ಹಾಗಿಲ್ಲ.

ಅರ್ಜುನನಿಗಾದರೂ ಶ್ರೀಕೃಷ್ಣನ ವಾದ ಒಪ್ಪಿಗೆಯಾಗುತ್ತದೆ. ಅವನ ಧಿಕ್ಕಾರವನ್ನು ಸ್ವೀಕರಿಸುತ್ತಾನೆ. ಆದರೂ ಯುದ್ಧಮಾಡಲು ತನ್ನ ಮನಸ್ಸು ಒಪ್ಪುತ್ತಿಲ್ಲ ಎಂದು ಅಳಲು ತೋಡಿಕೊಳ್ಳುತ್ತಾನೆ. ತನ್ನ ದೌರ್ಬಲ್ಯದ ಅರಿವು ಅವನಿಗಿದೆ. ಆದರೂ ಅದರಿಂದ ಹೊರಬರಲು ಮನಸ್ಸು ಮಾಡುತ್ತಿಲ್ಲ. ಅವನ ಹೃದಯ ದೌರ್ಬಲ್ಯವು ಅವನ ಕ್ಷಾತ್ರವನ್ನು ಕುಗ್ಗಿಸಿದೆ, ಅವನನ್ನು ನಿರ್ವೀರ್ಯನನ್ನಾಗಿ ಮಾಡಿದೆ. ತನ್ನ ತಪ್ಪು ತಿಳಿದಿದೆಯಾದರೂ ಸರಿಯಾದ ಮಾರ್ಗ ತುಳಿಯಲು ಅವನಿಂದ ಸಾಧ್ಯವಾಗುತ್ತಿಲ್ಲ. ಕೊನೆಗೆ ತನ್ನ ಪರಮ ಮಿತ್ರನಾದ, ಬಂಧುವಾದ, ದೇವಾಧಿದೇವನಾದ ಶ್ರೀಕೃಷ್ಣನಿಗೆ ಶರಣಾಗುತ್ತಾನೆ. ಆದರೂ ಸಹ ಅವನ ಆದೇಶ ಪಾಲಿಸಲು ಹಿಂಜರಿಯುತ್ತಾನೆ. ಏಕೆಂದರೆ ಶ್ರೀಕೃಷ್ಣನ ಮಾತು ಹಳೆಯ ವಿಚಾರವನ್ನೇ ಅವಲಂಬಿಸಿದೆ, ಹಳೆಯ ಮೌಲ್ಯಗಳನ್ನೇ ಒಳಗೊಂಡಿದೆ, ತನ್ನ ಬೇಗುದಿಗೆ ಅದೇನೂ ಹೊಸ ಆಧಾರ ನೀಡುತ್ತಿಲ್ಲ ಎಂಬ ಭಾವನೆಯೇ ಅರ್ಜುನನಲ್ಲಿ ಬೇರೂರಿದೆ. ಅಂತೆಯೇ ಅವನು ಶ್ರೀಕೃಷ್ಣನ ಆದೇಶವನ್ನು ಥಟ್ಟನೇ ಪಾಲಿಸಲಾರದವನಾಗಿದ್ದಾನೆ. ಅಷ್ಟೇ ಅಲ್ಲ ತಾನೇಕೆ ಆದೇಶ ಪಾಲಿಸುತ್ತಿಲ್ಲ, ಕೇವಲ ಹತ್ಯೆಯ ವಿಚಾರವೇ ತನ್ನನ್ನು ಧೃತಿಗೆಡಿಸುತ್ತಿದೆ, ತನ್ನ ಗುರು, ವಿದ್ಯಾಗುರು ದ್ರೋಣ, ತಾತ ಭೀಷ್ಮ ಇಂಥವರನ್ನೆಲ್ಲ ಕೊಂದರೆ ಒಳ್ಳೆಯದೇನಾಗುತ್ತದೆ? ಜೀವ ಹಾನಿ, ಪಾಪ ಕರ್ಮ, ಇಂಥ ಹೀನ ಕಾರ್ಯಗಳೇ ಆಗಬಹುದೇ ಹೊರತು ಬೇರೇನೂ ಸಾಧ್ಯವೇ ಇಲ್ಲ. ಇದೇ ಹಳೆಯ ವಿಚಾರವನ್ನೇ ಪುನಃ ಪುನಃ ಮೆಲಕು ಹಾಕಿಕೊಳ್ಳುತ್ತ, ತಾನಿನ್ನು ಯುದ್ಧ ಮಾಡಲಾರೆ ಎಂಬ ನಿರ್ಣಯಕ್ಕೆ ಬಂದು ಬಿಡುತ್ತಾನೆ. ಮೌನವಾಗಿ ಕುಳಿತು ಶ್ರೀಕೃಷ್ಣನು ಏನು ಉತ್ತರಿಸುವುನೋ ಎಂದು ಕಾಯುತ್ತಾನೆ. ಅವನ ಮಟ್ಟಿಗೆ ತನ್ನ ಸಂದೇಹ ಸರಿ ತನ್ನ ಪ್ರಶ್ನೆಗಳಿಗೆ ಉತ್ತರ ಇಲ್ಲ ಎಂಬ ಭಾವ ಇದೆ. ಅರ್ಜುನನ ಈ ಸ್ವಾರ್ಥಪರ ವಾದವನ್ನೇ ಮೊದಲು

ತೆಗೆದುಕೊಂಡು, ಅವನ ಮನವನ್ನು ತಿರುಗಿಸುವ ಕೆಲಸಕ್ಕೆ ಶ್ರೀಕೃಷ್ಣ ಕೈಹಾಕುತ್ತಾನೆ. ಏಕೆಂದರೆ ಅವನಿಗೆ ಹೊಸದಾದ ನಿಯಮವನ್ನು ಸ್ಥಾಪಿಸಬೇಕಾಗಿದೆ, ಅರ್ಜುನನ ಮುಖಾಂತರ ಎಲ್ಲ ರೀತಿಯ ಸ್ವಾರ್ಥಪರ ಚಿಂತನೆಯ ಕರ್ಮಗಳನ್ನು ಸಮೂಲ ತೊಲಗಿಸಬೇಕಾಗಿದೆ, ಇವೆಲ್ಲವುಗಳಿಗಿಂತ ಉನ್ನತವಾದ ಧರ್ಮವನ್ನು, ನಿಯಮವನ್ನು ಸ್ಥಾಪಿಸಬೇಕಾಗಿದೆ. ಈ ಕೆಲಸದಲ್ಲಿ ಶ್ರೀಕೃಷ್ಣ ತೊಡಗಿಕೊಳ್ಳುತ್ತಾನೆ.

ಭಗವದ್ಗುರುವಿನ ಬೋಧನೆಯು ಎರಡು ಬೇರೆ ಬೇರೆ ದೃಷ್ಟಿಕೋನಗಳ ಮೂಲಕ ಸಾಗುತ್ತದೆ. ಮೊದಲನೆಯದು, ಅತಿ ಸಂಕ್ಷಿಪ್ತ ಉತ್ತರ, ಆರ್ಯ ಸಂಸ್ಕೃತಿಯ ಮೂಲ ಪರಿಕಲ್ಪನೆಯ ಮೇಲೆ ಆಧಾರಿತವಾಗಿರುವಂಥದು; ಇದು ಅರ್ಜುನನಿಗೆ ಕೂಡ ಗೊತ್ತು. ಅವನು ಕಲಿತದ್ದೇ ಅದನ್ನು; ಇನ್ನು ಎರಡನೆಯದು ವಿಶಾಲವಾದ ಹಿರಿದಾದ ಜ್ಞಾನ, ತೀರ ಆತ್ಮೀಯವಾದ ಜ್ಞಾನ, ನಮ್ಮ ಅಸ್ತಿತ್ವದ ಆಳವಾದ ಸತ್ಯಗಳನ್ನು ಅನಾವರಣಗೊಳಿಸುವ ಜ್ಞಾನ; ಗೀತೆಯು ಬೋಧಿಸುವ ಜ್ಞಾನದ ನಿಜವಾದ ಆರಂಭದ ಬಿಂದು ಈ ಆಧ್ಯಾತ್ಮಿಕ ಜ್ಞಾನವೇ. ಮೊದಲನೆಯ ಉತ್ತರವು ವೇದಾಂತ ತತ್ವಗಳ ಮೇಲೆ ಆಧಾರಿತವಾಗಿರುವ ತಾತ್ವಿಕ ಮತ್ತು ನೈತಿಕ ಮೌಲ್ಯಗಳ ಮೇಲೆ ನಿಂತಿರುವಂಥದು; ಇದರಲ್ಲಿ ಮಾನವನು ಮಾಡಬೇಕಾಗಿರುವ ಕರ್ತವ್ಯ, ಸಾಮಾಜಿಕ ಜವಾಬ್ದಾರಿ, ಗುರುತರ ಹೊಣೆಗಾರಿಕೆ ಇವುಗಳ ವಿವರಣೆ ಇದೆ. ಇದು ಆರ್ಯ ಸಮಾಜದ ಸಂಸ್ಕೃತಿಯ ಮೂಲ ಆಧಾರವಾಗಿರುವಂಥದು – ಅರ್ಜುನನು ತನ್ನ ಕರ್ತವ್ಯದಿಂದ ವಿಮುಖನಾಗುವಾಗ, ನೈತಿಕ ಕಾರಣಗಳನ್ನೇ ಸಮರ್ಥನೆಯಾಗಿ ಒಡ್ಡಿದ್ದನಲ್ಲವೇ? ಆದರೆ ಅವು ಕೇವಲ ಶಬ್ದಗಳು, ಮೇಲೆ ಮಾತ್ರ ಅತಿ ತಾರ್ಕಿಕವೆಂಬಂತೆ ತೋರಿದರೂ, ತನ್ನ ಪ್ರತಿಭಟನೆಯನ್ನು ಶಬ್ದಗಳ ಬಣ್ಣ ಕೊಟ್ಟು ಹೇಳಿದಂತೆ. ಅಲ್ಲಿ ಅವನ ಅಪರಿಪೂರ್ಣ ಭಾವನೆ, ಸಂವೇದನೆಗಳು ಎದ್ದು ಕಾಣುವ ಸತ್ಯ ಎನ್ನುವ ಹಾಗೆ ಅವನು ಮಾತನಾಡಿದ್ದಾನೆ. ಆದರೆ ನಿಜವಾಗಿ ಆಳವಾಗಿ ಚಿಂತನೆ ಮಾಡುವ ಮನಿಷಿಗೆ, ಸಾಧುಪುರುಷನಿಗೆ ಇವೇನೂ ಶಾಶ್ವತ ಮೌಲ್ಯ ಅನಿಸುವುದಿಲ್ಲ. ತನ್ನ ಸ್ನೇಹಿತರ, ಬಂಧು ಬಾಂಧವರ ಮರಣದಿಂದುಂಟಾಗುವ ದುಃಖವು ನಿಜವಾದ ಜ್ಞಾನಿಯಾದವನಿಗೆ ದುಃಖ ಅನಿಸುವುದೇ ಇಲ್ಲ. ಜ್ಞಾನಿಯಾದವನು ಜೀವಿಸಿರುವುವರಿಗಾಗಿಯೂ ಶೋಕಿಸುವುದಿಲ್ಲ. ಮರಣಿಸಿದವರಿಗಾಗಿಯೂ ಶೋಕಿಸುವುದಿಲ್ಲ. ಏಕೆಂದರೆ, ದುಃಖ, ಸಾವು ಇವೆಲ್ಲ ಜೀವನದ (ಜೀವಾತ್ಮನ) ಪಯಣದಲ್ಲಿ ಬರುವ

ಘಟನೆಗಳು ಮಾತ್ರ. ಜೀವ (ಅಥವಾ ಆತ್ಮ) ಮಾತ್ರ ಸತ್ಯ, ಶರೀರವು ಅಸತ್ಯವಾದುದು. ಅರ್ಜುನನು ಯಾರಿಗಾಗಿ ಶೋಕಿಸುತ್ತಿರುವುನೋ ಅವರು ಈ ಮೊದಲೂ ಇದ್ದವರು, ಆ ಮೇಲೂ ಇರುವವರೇ; ಮರಣವು ಅವರ ಜೀವಾತ್ಮನನ್ನು ಮುಟ್ಟಲಾರದು. ಜೀವವು ಬಾಲ್ಯ, ಯೌವನ, ಜರಾ ಹೀಗೆ ಅವಸ್ಥಾಂತರಗಳನ್ನು ಹೊಂದುವಂತೆ, ಜನನ, ಮರಣ ಹೀಗೆ ದೇಹಾಂತರ ಪ್ರಾಪ್ತಿಯನ್ನು ಹೊಂದುತ್ತದೆ. ಧೀರನಾದವನು ಈ ಶರೀರದ ಅವಸ್ಥೆಗಳಿಗೆ, ಆಂತರಗಳಿಗೆ ತೋರಿಕೆಗೆ ಮರುಳಾಗುವುದಿಲ್ಲ. ಮೋಸಹೋಗುವುದಿಲ್ಲ. ಇವುಗಳಿಂದ ಅವನ ಬುದ್ಧಿ ಮಂಕು ಕವಿಯುವುದಿಲ್ಲ. ಹೃದಯವು ಭಾವಪರವಶತೆಯಿಂದ ಜ್ಞಾನವಿರೋಧಿಯಾಗಿ ವರ್ತಿಸುವುದಿಲ್ಲ. ಅವನು ಬಾಹ್ಯ ತೋರಿಕೆಗಳಾಚೆಗೆ ನೋಡುತ್ತಾನೆ. ಸತ್ತೆಯಲ್ಲಿರುವ ಸತ್ಯವನ್ನು ಗುರುತಿಸುತ್ತಾನೆ. ಭಾವ, ವಿಚಾರ, ಸಂವೇದನಾಚೆಗೆ ಹೋಗಿ ನೋಡುವ ಶಕ್ತಿ ಅವನಲ್ಲಿರುತ್ತದೆ. ಹೀಗಾಗಿ ಅವನು ಮಾನವನ ಅಸ್ತಿತ್ವದ ನಿಜಾರ್ಥವನ್ನು ತಿಳಿದುಕೊಳ್ಳ–ಬಲ್ಲವನಾಗುತ್ತಾನೆ. ಮಾನವನ ಅಸ್ತಿತ್ವದ ನಿಜವಾದ ಸತ್ಯ ಯಾವುದು? ಹುಟ್ಟುವುದು, ಸಾಯವುದು, ಮತ್ತೆ ಹುಟ್ಟುವುದು ಇದಂತೂ ಅನಾದಿ ಅನಂತವಾದ ಚಕ್ರ, ಇದಕ್ಕೆ ನಿಲುಗಡೆ ಇಲ್ಲ. ನಿಜವಾಗಿ ಈ ಚಕ್ರವೊಂದು ಸಿದ್ಧತೆ ಇದ್ದಂತೆ. ಇದರ ಮೂಲಕ ಅಭಿವೃದ್ಧಿ ಹೊಂದಿ, ವಿಕಾಸಹೊಂದಿ, ಕೊನೆಗೆ ಅಮರತ್ವ ಪಡೆಯಲು ಯೋಗ್ಯನಾಗುತ್ತಾನೆ. ಆ ಯೋಗ್ಯತೆ ಎಂಥದು? ಮಾನವನು ಮೊದಲು ತಾನು ಕೇವಲ ಪುನಃ ಪ್ರಾಣ ಶರೀರಗಳ ಸಮುಚ್ಚಯವಲ್ಲವೆಂಬುದನ್ನು ಅರ್ಥಮಾಡಿಕೊಳ್ಳಬೇಕು. ಭೌತಿಕ ಜಗದ ಸಾಮಾನ್ಯ ಘಟನೆಗಳನ್ನು, ಸಂಗತಿಗಳನ್ನು ಅವುಗಳ ಮೇಲ್ ತೋರಿಕೆಯಂತೆಯೇ ಗ್ರಹಿಸಿ ಪ್ರತಿಕ್ರಯಿಸುವುದಕ್ಕಿಂತ, ಅವುಗಳನ್ನು ಆಳವಾಗಿ ಚಿಂತಿಸಿ, ಒಳಗಿನ ಅರ್ಥ ಗ್ರಹಿಸಬೇಕು. ತಾನು, ತನ್ನ ಆತ್ಮ, ಜಗತ್ತಿನ ಜೀವಿಗಳೆಲ್ಲರ ಆತ್ಮ ಬೇರೆ ಬೇರೆ ಅಲ್ಲ, ಒಂದೇ ಎಂಬ ಭಾವ ಬೆಳೆಸಿಕೊಳ್ಳಬೇಕು. ಬಾಹ್ಯಕ್ಕಿಂತ, ಅಂತರ್ಮುಖನಾಗಿ, ಅಂತರಂಗದಲ್ಲೇ ಜೀವಿಸುವ ಯುಕ್ತಿ ಬೆಳೆಸಿಕೊಳ್ಳಬೇಕು. ಬಾಹ್ಯ ಸಮುಚ್ಚಯಕ್ಕಿಂತ ಅಂತರಾತ್ಮನೇ ಶ್ರೇಷ್ಠ ಎಂಬುದನ್ನರಿಯಬೇಕು. ಜಗದ ಜೀವಿಗಳೆಲ್ಲರೂ ಆ “ಏಕೈಕ ಆತ್ಮನ” ಸ್ವರೂಪರೇ ಎಂದರಿತು ಅದಕ್ಕನುಗುಣವಾಗಿ ವ್ಯವಹಾರ ಮಾಡಬೇಕು. ಅಮರತ್ವ ಅಂದರೆ ಸಾವಿಲ್ಲದೇ ಬದುಕುವದು ಎಂದರ್ಥವಲ್ಲ. ಶಾರೀರಿಕ ಮರಣವನ್ನು ಮುಂದೂಡುವ, ತಪ್ಪಿಸುವ

ಉಪಾಯಗಳು (ಈಗಾಗಲೇ ವಿಜ್ಞಾನದ ಬೆಳವಣಿಗೆಯ ಮೂಲಕ ಮಾನವನಿಗೆ ಕರಗತವಾಗಿವೆ) ಆದರೆ ಅಮರತ್ವ ಅಂದರೆ ಜನನ, ಮರಣಗಳಾಚೆಗೆ ಬೆಳೆಯುವುದು, ಅವುಗಳನ್ನು ಮೀರಿ ಬೆಳೆಯುವುದು. ಅಮರತ್ವ ಅಂದರೆ, ಮಾನವನು ಕೇವಲ ಮಾನಸಿಕವಾಗಿ ಅರ್ಥೈಸಿಕೊಂಡ ತನ್ನ ಶರೀರ ಮಾತ್ರ ಅಲ್ಲ, ಅದನ್ನು ಮೀರಿ ಜೀವಿಸುವ, ತಾನು ಆತ್ಮ ಸ್ವರೂಪವೆಂದು ತಿಳಿದೇ ಅದರಲ್ಲಿಯೇ ಜೀವಿಸುವ ಸಾಮರ್ಥ್ಯ ಪಡೆಯಬೇಕು. ದುಃಖ, ಯಾತನೆ, ನೋವುಗಳಿಗೆ ಒಳಗಾಗಿ, ಸಂವೇದನೆ, ಭಾವನೆಗಳಿಗೆ ಪಕ್ಕಾಗಿ ಕೇವಲ ತಾತ್ಕಾಲಿಕ ವಿಷಯ ಸಂಗತಿಗಳಿಗೆ ದಾಸರಾಗಿ ಜೀವಿಸುವವರು ಅಮರತ್ವ ಪಡೆಯಲು ಯೋಗ್ಯರಾಗುವುದಿಲ್ಲ. ಎಲ್ಲಿಯವರೆಗೆ ತಾನು ಮರಣವನ್ನು ಗೆಲ್ಲುವುದಿಲ್ಲವೋ, ಅಲ್ಲಿಯವರೆಗೆ ಈ ಭಾವ ಅವನ ಮನದಲ್ಲಿ ಇರಬೇಕು. ಎಲ್ಲ ಭೌತಿಕ ಘಟನೆಗಳನ್ನು, ಜಾಗತಿಕ ಸಂಗತಿಗಳನ್ನು ಶಾಂತ ಚಿತ್ತದಿಂದ, ಸಮತೆಯಿಂದ, ನಮ್ಮೊಳಗಿರುವ ಶಾಂತ, ಮುಕ್ತ ಆತ್ಮನು ಸ್ವೀಕರಿಸುವಂತೆಯೇ ನೋಡಲು ಕಲಿಯಬೇಕು. ಅರ್ಜುನನು ಯುದ್ಧದ ದೃಶ್ಯವನ್ನು ನೋಡುತ್ತಲೇ ಹೇಗೆ ವ್ಯಗ್ರನಾದನೋ, ಸಮತ್ವವನ್ನು ಕಳೆದುಕೊಂಡನೋ, ಆತ್ಮಾನುಕಂಪದಿಂದ ತನ್ನ ಕರ್ತವ್ಯದ ಪಥದಿಂದ ವಿಮುಖನಾದನೋ, ಕೇವಲ ಶಾರೀರಿಕ ಮೃತ್ಯುವನ್ನೇ ಅಂತಿಮ ಸತ್ಯವೆಂದು ಗ್ರಹಿಸಿ ಸ್ವಜನರ ಹತ್ಯೆಯ, ಪಾಪಕರ್ಮದ ಆಲೋಚನೆಯಿಂದ ಶೋಕ ವಿಮೋಹಿತನಾದನೋ, ಅದು, ಅನಾರ್ಯವಾದುದು, ಅದು ಆರ್ಯ ಸಂಸ್ಕೃತಿಗೆ ತಕ್ಕುದಾದ ಆಚರಣೆಯಲ್ಲ. ಆರ್ಯನಾದವನು ಶಾಂತ ಚಿತ್ತದಿಂದ ಅಮರತ್ವದೆಡೆಗೆ ಹೋಗಬಹುದಾದ ಗುರಿ ಇದಲ್ಲ.

ಹಾಗೆ ನೋಡಿದರೆ ಮರಣವೆಂಬುದು ಇಲ್ಲವೇ ಇಲ್ಲ; ಏಕೆಂದರೆ ಶರೀರವು ನಾಶವಾಗಬಹುದು. ಮರಣಹೊಂದಬಹುದು. ಆದರೆ ಮಾನವನೆಂದರೆ ಕೇವಲ ಶರೀರವಲ್ಲ. ಯಾವುದು ಇದೆಯೋ (ಸತ್) ಅದು ಸೃಷ್ಟಿಯಿಂದಾಚೆಗೆ ಎಂದಿಗೂ ಹೋಗಲು ಸಾಧ್ಯವಿಲ್ಲ (ಅಸತ್) ಅದು ಬದಲಾಗಬಹುದು, ಬೇರೆ ಆಕಾರ ತಾಳಬಹುದು. ಆದರೆ ಅಸತ್‌ನಿಂದ (ಇಲ್ಲದಿರುವಿಕೆಯಿಂದ) ಸತ್ (ಇರುವಿಕೆ) ಹೇಗೆ ಅಸ್ತಿತ್ವಕ್ಕೆ ಬರಲಾರದೋ ಹಾಗೆಯೇ ಸತ್ ಎಂದಿಗೂ ಅಸತ್ ಆಗಲಾರದು. ಆತ್ಮ ಅನ್ನುವುದು ಸತ್, ಅದೆಂದಿಗೂ ಅಸತ್ ಆಗದು. ಸತ್ ಮತ್ತು ಅಸತ್, ಇರುವಿಕೆ ಮತ್ತು ಆಗುವಿಕೆ, ಇವೆಲ್ಲ ಮನಸ್ಸು ಈ ಸೃಷ್ಟಿಯನ್ನು ನೋಡುವ ಕ್ರಮ

ಮಾತ್ರ. ಇದೆಲ್ಲ ಯಾವಾಗ ಕೊನೆಯಾಗುವುದೆಂದರೆ, ಆತ್ಮವೆಂಬ ಏಕೈಕ ವಸ್ತುವೇ ಇಡೀ ಸೃಷ್ಟಿಯನ್ನು ವ್ಯಾಪಿಸಿಕೊಂಡಿದೆ, ಅದು ಅವಿನಾಶಿಯಾಗಿದೆ ಎಂಬ ಸತ್ಯದ ಅರಿವಾದಾಗ, ಸಾಂತವಾದ ವಸ್ತುಗಳೆಲ್ಲ ಕೊನೆಯಾಗುವವು. ಆದರೆ ಎಲ್ಲವನ್ನು ಒಳಗೊಂಡಿರುವ ಯಾವ ಸತ್ಯ ಇದೆಯೋ ಅದು ಅವಿನಾಶಿಯಾಗಿದೆ, ಅದು ಶರೀರಗಳನ್ನುಪಯೋಗಿಸುತ್ತದೆ, ಅದು ಅಮರವಾಗಿದೆ, ಅನಂತವಾಗಿದೆ, ಶಾಶ್ವತವಾಗಿದೆ. ಅವಿನಾಶಿಯಾಗಿದೆ. ಅದು ಹಳೆಯ ವಸ್ತ್ರಗಳನ್ನು ಕಳಚುವಂತೆ, ಶರೀರಗಳನ್ನು ಕಳಚಿ, ಬೇರೆ ಶರೀರವನ್ನು ಧರಿಸುತ್ತದೆ. ಇದರಲ್ಲಿ ದುಃಖ ಪಡುವಂಥದು, ಶೋಕಿಸುವಂಥದೇನಿದೆ? ಆತ್ಮವು ಅಜಾತ, ಪುರಾತನ, ಸನಾತನ, ಅದು ಶರೀರವು ನಾಶವಾದರೂ ಅದರ ಜೊತೆ ನಾಶವಾಗದು. ಅದು ಅವಧ್ಯವು, ಅದನ್ನು ಯಾರೂ ಕೊಲ್ಲಲಾರರು. ಯಾವ ಶಸ್ತ್ರವೂ ಅದನ್ನು ಆಘಾತಿಸಲಾರದು. ಬೆಂಕಿಯು ಅದನ್ನು ಸುಡದು, ನೀರು ಅದನ್ನು ತೋಯಿಸದು, ಗಾಳಿಯು ಶೋಷಿಸದು. ಅದು ಶಾಶ್ವತ, ಸ್ಥಾಣು, ಅಚಲ, ಸರ್ವವ್ಯಾಪಿಯಾದುದು. ಅದು ಶರೀರದಂತೆ ಸ್ಥೂಲವಾಗಿ ಪ್ರತ್ಯಕ್ಷವಾಗದು. ಆದರೆ ಪ್ರಕಟವಾದ ಎಲ್ಲ ತತ್ವಗಳಿಂದ ಬಹು ಶ್ರೇಷ್ಠವಾದುದು. ಅದನ್ನು ವಿಚಾರ, ವಿಮರ್ಶೆಯಿಂದ ತಿಳಿಯಲಾಗದು. ಅದು ಅವಿಕಾರಿ, ಅದು ಅಪರಿವರ್ತನೀಯ ಶರೀರದಂತೆ, ಪ್ರಾಣದಂತೆ ಅದು ಬೇರೆ ಬೇರೆ ಆಕಾರ ತಾಳದು. ಅದು ಮನಃ ಪ್ರಾಣ, ಶರೀರಗಳನ್ನು ಮೀರಿದ ತತ್ವ. ನಿಜವಾಗಿ ಅದೊಂದೇ ಸತ್ಯ. ಇರುವುದು ಅದೊಂದೇ; ಅದನ್ನೇ ಪ್ರಕಟ ಪಡಿಸಲು ಇಡೀ ಸೃಷ್ಟಿ ಪ್ರಯತ್ನ ಮಾಡುತ್ತದೆ.

ನಮ್ಮ ಅಸ್ತಿತ್ವದ ಸತ್ಯವು ಇಷ್ಟೇನೋ ಉದಾತ್ತವಾಗಿಲ್ಲ. ವಿಶಾಲವಾಗಿಲ್ಲ. ಜನನ ಮರಣಗಳಿಗೆ ಅತೀತವಾಗಿಲ್ಲ ಅಂದುಕೊಂಡರೂ ಸಹ, ನಾವು ಸದಾ ಜನನ ಮರಣಗಳಿಂದ ಬಾಧಿತರಾಗಿಯೇ ಇರುತ್ತೇವೆ. ಅಂದರೂ ಸಹ ಮರಣವು ನಮ್ಮ ಶೋಕಕ್ಕೆ ಅಷ್ಟು ದೊಡ್ಡ ಕಾರಣವಾಗಬೇಕಾಗಿಲ್ಲ. ಏಕೆಂದರೆ ಅದು ಜೀವಾತ್ಮನ ಆತ್ಮ ಪ್ರಕಟನೆಯ ಅನಿವಾರ್ಯವಾದ ಅವಸ್ಥೆಯಂತಲ್ಲವೇ? ಅವ್ಯಕ್ತವಾದ ಸ್ಥಿತಿಯಿಂದ ಅಂದರೆ ನಮಗೆ ಗೋಚರವಾಗದ ಎಂಥದೋ ಅದೃಶ್ಯ ಸ್ಥಿತಿಯಿಂದ ಅದು ಪ್ರಕಟವಾಗುತ್ತದೆ. ಮರಣದ ಮೂಲಕ ಪುನಃ ಅದೇ ಅದೃಶ್ಯ ಸ್ಥಿತಿಗೆ ಮರಳಿ ಹೋಗುತ್ತದೆ ಅನ್ನುವುದಾದರೆ ಅದರಲ್ಲಿ ಶೋಕಿಸುವಂಥದೇನಿದೆ? ಮರಣವು ರುಗ್ಣ ಶಯ್ಯೆಯಲ್ಲಾದರೂ ಅಷ್ಟೇ, ರಣಾಂಗಣದಲ್ಲಾದರೂ ಅಷ್ಟೇ,

ಅದರ ಬಗ್ಗೆ ನಮ್ಮ ಭೌತಿಕ ಮನಸ್ಸು ಹಾಗೂ ಇಂದ್ರಿಯಗಳು ಮಾಡುವ ಹಾಹಾಕಾರ ಅರ್ಥವಿಲ್ಲದ್ದು, ಮಾನವರ ಸಾವಿಗಾಗಿ ನಾವು ಶೋಕಿಸುವುದೆಂದರೆ, ಅದೊಂದು ನಿರರ್ಥಕ ಕ್ರಿಯೆ ಅಷ್ಟೇ; ಏಕೆಂದರೆ ಅವರಾರೂ ಈ ಅಸ್ತಿತ್ವವನ್ನು ತೊರೆದು ಹೊರಗೆ ಎಲ್ಲೂ ಹೋಗಿಲ್ಲ. ಅವರಿಗೆ ಯಾವ ಯಾತನಾಮಯ ಬದಲಾವಣೆಯೂ ಸಂಭವಿಸಿಲ್ಲ. ಅವರೆಲ್ಲರೂ ಸಾವಿಗೆ ಅತೀತರಾದವರು, ಅವರಿಗೆ ಸತ್ತಾಗಲೂ ದುಃಖವಿಲ್ಲ. ಇರುವಾಗಲೂ ದುಃಖವಿಲ್ಲ. ಎರಡೂ ಸಮಾನ ಸ್ಥಿತಿಗಳೇ ನಿಜವಾಗಿ ಉನ್ನತವಾದ ಸತ್ಯವೊಂದೇ ನಿಜ. ಎಲ್ಲರೂ, ಎಲ್ಲವೂ ಆತ್ಮವೇ, ಆ ಏಕ ಆತ್ಮವೇ ಯಾರ ಬಗ್ಗೆ ನಾವು ಅದ್ಭುತವೆಂದು ಮಾತನಾಡುತ್ತೇವೆಯೋ, ಯಾವುದು ನಮ್ಮ ಗ್ರಹಣ ಶಕ್ತಿಯ ಆಚೆಗಿರುವ ಅದ್ಭುತವೆಂದು ಪರಿಗಣಿಸುತ್ತೇವೆಯೋ ಆ ಪರಮಾತ್ಮನೇ ಎಲ್ಲವೂ. ನಾವು ಜೀವನವಿಡೀ ಪರಿಶೋಧನೆ ಮಾಡಬಹುದು. ಬಲ್ಲವರಿಂದ, ಪಂಡಿತರಿಂದ ಪಾಠ ಪ್ರವಚನಗಳ ಮೂಲಕ ಕೇಳಿ ತಿಳಿದುಕೊಳ್ಳಬಹುದು. ಅಖಂಡ ಜ್ಞಾನ ದೊರಕಿಸಬಹುದು, ಆದರೂ ಆ ಸತ್ಯ ನಮ್ಮ ಅರಿವಿನ ಆಚೆಗೆ ಇರುವಂಥದು. ಮಾನವನ ಮನಸ್ಸು ತಿಳಿಯಲಾರದ ಸತ್ಯ ಅದು. ಆ ಸತ್ಯ ಅಥವಾ ಆತ್ಮ ಅನ್ನುವುದು ಈ ಜಗದಲ್ಲಿ ಕಾರಣದಂತೆ ಅಡಗಿಕೊಂಡಿರುವಂಥದು. ಅದು ಶರೀರದ ಸ್ವಾಮಿ, ಜೀವನವೆಂಬದು ಅದರ ನೆರಳು. ಆತ್ಮವು ಭೌತಿಕ ಪ್ರಪಂಚದಲ್ಲಿ ಬಂದು ಪ್ರಕಟವಾಗುವುದು, ಇಲ್ಲಿಂದ ಪುನಃ ಮರೆಯಾಗಿ ಅವ್ಯಕ್ತ ಪ್ರಪಂಚಕ್ಕೆ ಹೋಗುವುದು. ಇದೆಲ್ಲ ಅದರ ಚಲನೆಯ ಒಂದು ಸಣ್ಣ ರೂಪ ಅಷ್ಟೇ. ಈ ಸತ್ಯದ ಅರಿವಾದರೆ ನಾವು ಕೊಲ್ಲುತ್ತೇವೆ, ಸಾಯುತ್ತೇವೆ ಅನ್ನುವುದೆಲ್ಲ ಮೂರ್ಖತನ. ಏಕೈಕ ಸತ್ಯವಾಗಿರುವ ಆತ್ಮದಲ್ಲಿ, ಆತ್ಮ ಭಾವನದಲ್ಲಿಯೇ ನಾವು ಜೀವಿಸಬೇಕು. ಅದೊಂದೇ ಶ್ರೇಷ್ಠ ಅದೊಂದು ಸತ್ಯ, ಅದೇ ಏಕೈಕ ಪ್ರಮಾಣ. ಆತ್ಮವು ಚಕ್ರಾಕಾರದ ಪಯಣದಲ್ಲಿ ತೊಡಗಿದೆ; ಜನನ–ಮರಣಗಳು ಅದರ ಪರಿಭ್ರಮಣದಲ್ಲಿ ಕೇವಲ ಮೈಲುಗಲ್ಲಿನಂತೆ; ಈ ದೃಷ್ಯ ಪ್ರಪಂಚದಾಚೆಗಿನ ಲೋಕಗಳು ಆತ್ಮದ ವಿಶ್ರಾಂತಿ ತಾಣಗಳಿದ್ದಂತೆ. ಈ ಜಗತ್ತಿನಲ್ಲಿ ನಾವು ಅನುಭವಿಸುವ ಸುಖ, ದುಃಖಗಳೆಲ್ಲ ಆತ್ಮದ ವಿಜಯಗಾಥೆಯನ್ನೇ ಬರೆಯುತ್ತವೆ. ಆತ್ಮದ ನಡೆ ಸದಾ ಅಮರತ್ವದಡೆಗೆ, ಅಮರತ್ವವೆಂಬುದು ಅದರ ನಿಜಧಾಮ, ತವರುಮನೆ ಇದ್ದ ಹಾಗೆ, ಅದು ಸದಾ ತನ್ನ ಮನೆಯಡೆಗೇ ಪಯಣಿಸುವುದು.

ಅಂತೆಯೇ, ದೈವೀ ಗುರು ಶ್ರೀಕೃಷ್ಣ ಹೇಳುತ್ತಾನೆ. "ಈ ನಿರರ್ಥಕವಾದ ಶೋಕ, ಪ್ರಲಾಪಗಳನ್ನು ತ್ಯಜಿಸು, ಭರತರ್ಷಭವನೇ ಯುದ್ಧ ಸನ್ನದ್ಧನಾಗು" ಸರಿ, ಈ ಮಾತಿಗೆ ಆಧಾರವೇನು? ಯುದ್ಧ ಮಾಡಲೇಬೇಕೆಂಬ ಮಾತಿಗೆ ಆಧಾರವೇನು? ಶ್ರೇಷ್ಠವಾದ ಜ್ಞಾನವನ್ನು ಪರಿಶ್ರಮದಿಂದ ಗಳಿಸಬಹುದು; ಆತ್ಮ ಮನಸ್ಸುಗಳನ್ನು ತಪ್ಪಸ್ಸಿನಲ್ಲಿ ತೊಡಗಿಸಿ ಆಕ್ರೋಶ, ಇಂದ್ರಿಯಗಳ ಮೋಸ, ವ್ಯಗ್ರತೆ ಇವುಗಳನ್ನೆಲ್ಲ ಗೆಲ್ಲಬಹುದು; ನಿಜವಾದ ಆತ್ಮಜ್ಞಾನವನ್ನು ಮಾಡಿಕೊಳ್ಳಬಹುದು; ಇದರಿಂದ ನಾವು ದುಃಖ, ಭ್ರಮೆಗಳ ಚಕ್ರದಿಂದ ಹೊರಬರಬಹುದು; ಮರಣದ ಭಯ ಹೋಗಬೇಕು, ನಾವು ಯಾರನ್ನು ಮೃತರೆಂದು ಭಾವಿಸುವೆವೋ ಅವರಾರೂ ನಿಜವಾಗಿ ಮೃತರಾಗಿಲ್ಲ; ಅವರು ಮರಣಹೊಂದುವುದಿಲ್ಲ, ನಾವು ಅವರಿಗಾಗಿ ಶೋಕಿಸುವ ಅಗತ್ಯವಿಲ್ಲ; ಅವರು ಈ ಜಗದ ಆಚೆಗೆ ಹೋಗಿದ್ದಾರೆ ಅಷ್ಟೇ, ಮುಂತಾಗಿ ವಿಚಾರ ಮೂಡಿ ಅರಿವು ಬರಬಹುದು. ಜೀವನದಲ್ಲಿನ ಅತಿ ಕಠಿಣ, ವಿಪತ್ಕಾರಕ ಪ್ರಸಂಗಗಳನ್ನು ನಿರ್ವಿಕಾರ ಚಿತ್ತದಿಂದ ನೋಡುವ ಶಕ್ತಿ ನಮ್ಮಲ್ಲಿ ಮೂಡಬಹುದು; ಎಲ್ಲವು ಏಕೈಕನಾದ ಆ ಪರಮಾತ್ಮನ ಅಭಿವ್ಯಕ್ತಿಯೇ, ನಾವು ಯಾವುದಕ್ಕೂ ಎದೆಗುಂದಬೇಕಾಗಿಲ್ಲ.

ನಮ್ಮ, ನಮ್ಮೆಲ್ಲರ, ಎಲ್ಲ ಜೀವರಾಶಿಗಳ ಆತ್ಮ ಅಮರ ಎಂಬ ನಿಚ್ಚಳ ಜ್ಞಾನವಾಗಬಹುದು. ಆದರೆ ಕುರುಕ್ಷೇತ್ರದಲ್ಲಿ ಅರ್ಜುನನಿಗೆ ಯುದ್ಧಗೈಯಲು ಹೇಳಿದ ಶ್ರೀಕೃಷ್ಣನ ಮಾತಿಗೆ ಇವೆಲ್ಲವನ್ನು ಹೇಗೆ ಅನುಸಂಧಾನಮಾಡುವುದು ಹೇಗೆ? ಪ್ರಶ್ನೆ ಸಹಜವಿದೆ. ಆದರೆ ಆಗಿನ ಸಮಾಜಿಕ ಸ್ಥಿತಿಗತಿಯನ್ನು ನೋಡಿದರೆ, ಅರ್ಜುನನು ನಡೆಯುತ್ತಿರುವ ದಾರಿಯಲ್ಲಿ ಯುದ್ಧ ತೀರಾ ಸಾಮಾನ್ಯ, ಕ್ಷತ್ರಿಯನಾದವನಿಗೆ ಅದು ಅವಶ್ಯ ಕರ್ಮ, ಯುದ್ಧವು ಅವನ ಸ್ವ–ಧರ್ಮದ ಆಚರಣೆ, ಅವನ ಸಾಮಾಜಿಕ ಕರ್ತವ್ಯ, ಅದು ಅವನ ಹೊಣೆಗಾರಿಕೆ. ಅವನ ಅಂತರಂಗದ ಸತ್ವದ ಧರ್ಮ ಅವನಿಗೆ ವಿಧಿಸಿದ ಜವಾಬ್ದಾರಿ ಅದು. ಆ ಜವಾಬ್ದಾರಿ ನಿರ್ವಹಿಸುವಾಗ ಸಮರ, ಸಂಹಾರ ಇವೆಲ್ಲ ಅನಿವಾರ್ಯ. ಜಗತ್ತೆಂಬುದು ಚೈತನ್ಯದ ಪ್ರಕಟ ಸ್ವರೂಪ; ಅಲ್ಲಿ ಕೇವಲ ಆಂತರಿಕ ವಿಕಾಸದ ಸಂಗತಿ ಮಾತ್ರ ಇಲ್ಲ, ಸಾಮಾಜಿಕ, ಬಾಹ್ಯ ಜೀವನದ ಪ್ರಗತಿಯ ಹಾಗೂ ಉನ್ನತೀಕರಣದ ಕ್ಷೇತ್ರ ಕೂಡಾ ಹೌದು. ಬಾಹ್ಯ ಹಾಗೂ ಆಂತರಿಕ ಎರಡನ್ನೂ ಸಮನಾಗಿ ತೂಗಿಸುತ್ತಾ ವಿಕಾಸದ ದಾರಿ ನಡೆಯಬೇಕಾಗಿದೆ. ಇಲ್ಲಿನ ವಿಕಟ ಪರಿಸ್ಥಿತಿಗಳನ್ನು ಅಯೋಗ್ಯವೆಂದೋ, ಅನುಚಿತವೆಂದೋ ತಳ್ಳಿ ಹಾಕುವಂತಿಲ್ಲ.

ಗಂಭೀರವಾದ ರೀತಿಯಲ್ಲಿ ಆತ್ಮ ಪ್ರಕಟಣೆಯ ವಿಕಾಸದ ಹೆಜ್ಜೆ ಹಾಕಬೇಕಾಗಿದೆ. ಹೀಗಾಗಿ ಇಲ್ಲಿ ಸಂಘರ್ಷವು ತೀರಾ ಅನಿವಾರ್ಯವಾದ ತತ್ವ. ಕ್ಷತ್ರಿಯನಾದವನು ಈ ಬಾಹ್ಯ ಸಂಘರ್ಷವನ್ನು, ಸಂಹಾರವನ್ನು ಮಾಡಬೇಕು, ಜೊತೆಗೆ ಆಂತರಿಕ ವಿಕಾಸದ ಕಡೆಗೂ ಗಮನ ಹರಿಸಬೇಕು. ವೀರನಾದವನ ಕರ್ತವ್ಯ ಇದು. ಕ್ಷತ್ರಿಯನಿಗೆ ಯುದ್ಧ, ಸಾಮರ್ಥ್ಯ, ಶಕ್ತ, ಧೈರ್ಯ, ಉದಾತ್ತತೆ ಇವೆಲ್ಲ ಬೇಕೇ ಬೇಕು. ನ್ಯಾಯ, ನೀತಿ, ಶಿಷ್ಟ ರಕ್ಷಣೆ, ದುಷ್ಟ ಶಿಕ್ಷೆ ಇವೂ ಸಹಜ. ಈ ಜಗದಲ್ಲಿ ನ್ಯಾಯ–ಅನ್ಯಾಯ, ತಪ್ಪು–ಒಪ್ಪು, ರಕ್ಷಣೆ–ಅತ್ಯಾಚಾರ, ವಿನಾಶ–ದಬ್ಬಾಳಿಕೆ, ದಮನ ಇವೆಲ್ಲಾ ತಾಂಡವವಾಡುವ ಶಕ್ತಿಗಳು. ಇವುಗಳ ನಡುವಿನ ಹೋರಾಟ ಭೌತಿಕ ಸ್ಥರದಲ್ಲಿ ಅಭಿವ್ಯಕ್ತವಾದಾಗ ಕ್ಷತ್ರಿಯರು ನ್ಯಾಯದ ಪಕ್ಷ ಹಿಡಿದು ಹೋರಾಡಲೇಬೇಕಾಗುವುದು. ರಣಾಂಗಣ ನೋಡಿ ಹೆದರಿ ಹಿಂತಿರುಗಿಬಿಡುವುದು ಸರ್ವಥಾ ನಿಂದನೆಯ ಕರ್ಮ. ಅನ್ಯಾಯ ಅನೀತಿ, ಅತ್ಯಾಚಾರ, ಕ್ರೌರ್ಯ, ಹಿಂಸೆಗಳಿಗೆ ದಯೆ ತೋರಕೂಡದು. ಅದರಿಂದ ಭೀಕರ ಸಾಮಾಜಿಕ ಹಿನ್ನಡೆ ಸಂಭವಿಸುವುದು. ಆದ್ದರಿಂದ ಆರ್ಯ ಕ್ಷತ್ರಿಯರು ಅವಶ್ಯವಿದ್ದಾಗ, ಯುದ್ಧ ಅನಿವಾರ್ಯವಿದ್ದಾಗ, ಅವಶ್ಯವಾಗಿ ಮಾಡಲೇಬೇಕು. ಯುದ್ಧ ವಿಮುಖ–ನಾಗಕೂಡದು. ಇಂಥ ಪ್ರಸಂಗಗಳಲ್ಲಿ ಸಂಹಾರ ಪಾಪ ಕರ್ಮವಲ್ಲ. ಶಿಷ್ಟ ರಕ್ಷಣೆ, ದುಷ್ಟ ವಿನಾಶ ಇವು ಅನಿವಾರ್ಯವಾದ ಅಂಶಗಳು. ಇಂಥ ಪ್ರಸಂಗಗಳಲ್ಲಿ ಆರ್ಯನು ಹಿಂದೆ ಸರಿಯಕೂಡದು, ಯುದ್ಧಮಾಡದಿರುವುದೇ ಪಾಪ ಕಾರ್ಯವೆನಿಸುವುದು.

ಅರ್ಜುನನ ಇದೇ ಪ್ರಶ್ನೆಗೆ ಶ್ರೀಕೃಷ್ಣನು ಇನ್ನೊಂದು ದೃಷ್ಟಿಕೋನದಿಂದ ಹೀಗೆ ಉತ್ತರಿಸುತ್ತಾನೆ. ಕ್ಷತ್ರಿಯನಾದವ ಜೀವನ ಉದ್ದೇಶವೇನು? ಯಾವುದರಲ್ಲಿ ಅವನ ನಿಜವಾದ ಸುಖ ಅಡಗಿದೆ? ತನ್ನ ಸ್ವ–ಸಂತೋಷಕ್ಕಾಗಿ, ಪ್ರಾಪಂಚಿಕ ಸುಖೋಪಭೋಗಗಳಿಗಾಗಿ ಐಷಾರಾಮಿ ಜೀವನಕ್ಕಾಗಿ ಬಂಧು–ಬಾಧವರ ಜೊತೆ ಸುಖವಾಗಿ ಕಾಲ ಕಳೆಯುವದಕ್ಕಾಗಿ ಅವನು ಜೀವನ ಮಾಡುವುದಿಲ್ಲ. ಬದಲಾಗಿ ನ್ಯಾಯಕ್ಕಾಗಿ ಧರ್ಮಕ್ಕಾಗಿ ಹೋರಾಟ ನಡೆಸುತ್ತಾನೆ. ಪ್ರಸಂಗ ಬಂದರೆ ಅದಕ್ಕಾಗಿ ಜೀವನ ತ್ಯಾಗ ಮಾಡಲು ಸಿದ್ದನಾಗಿರುತ್ತಾನೆ. ಯುದ್ಧದಲ್ಲಿ ವಿಜಯಿಯಾದರೆ ನ್ಯಾಯಯುತ ರಾಜ್ಯಭಾರ ನಡೆಸಬೇಕು, ಸೋತರೆ ವೀರ ಮರಣ ಹೊಂದಬೇಕು. ಇದೇ ವೀರನಾದವನ ಜೀವನದ ನಿಜವಾದ ಉದ್ದೇಶ. ಇದರಲ್ಲೇ ನಿಜವಾದ

ಸುಖ ಅಡಗಿದೆ. ಧರ್ಮ ಸಮ್ಮತವಾದ ನ್ಯಾಯ ಮತ್ತು ಧರ್ಮಗಳಿಗಾಗಿ ಹೋರಾಡುವ ಯುದ್ಧಕ್ಕಿಂತ ಹೆಚ್ಚಿನ ಶ್ರೇಯಸ್ಸು ಕ್ಷತ್ರಿಯನಿಗೆ ಯಾವುದರಲ್ಲೂ ಇಲ್ಲ. ಇಂಥ ಪ್ರಸಂಗ ತಾನಾಗಿಯೇ ಒದಗಿ ಬಂದಿತೆಂದರೆ ಅವರಿಗೆ ಸ್ವರ್ಗದ ಬಾಗಿಲು ತೆರೆದಂತೆ ಅಂತ ಪುಣ್ಯವಂತ ಕ್ಷತ್ರಿಯ ಇನ್ನೊಬ್ಬನಿಲ್ಲ. "ಹೀಗಿರುವಾಗ ಅನಾಯಾಸವಾಗಿ ನಿನಗೆ ಪ್ರಸಂಗ ಒದಗಿ ಬಂದಿದೆ, ಒಂದುವೇಳೆ ನೀನು ಯುದ್ಧದಿಂದ ಹಿಂತೆಗೆದೆಯಾದರೆ ಅಪಖ್ಯಾತಿಗೆ ಗುರಿಯಾಗುವಿ, ಈ ಲೋಕದ ಜನರು ನಿನ್ನನ್ನು ಜರಿಯುವರು, ಹೀಯಾಳಿಸುವರು, ನೀನು ಪಾಪಭಾಜನನಾಗುವೆ, ಜೊತೆಗೆ ಸ್ವರ್ಗದ ದಾರಿ ಕೂಡಾ ನಿನ್ನ ಪಾಲಿಗೆ ಮುಚ್ಚಿಹೋಗುವುದು" ಎಂದು ಶ್ರೀಕೃಷ್ಣನು ಅರ್ಜುನನನ್ನು ಎಚ್ಚರಿಸಿದನು. ಕ್ಷತ್ರಿಯನಿಗೆ ಹೆಚ್ಚಿನ ಅವಮಾನ ಏನಿದೆ? ಹಾನಿ ಏನಿದೆ? ವೀರರಾದ ಶೂರರಾದ ಜನರ ನಡುವೆ ಕುಳಿತುಕೊಳ್ಳುವ ಅರ್ಹತೆ ಕಳೆದುಕೊಂಡ ಮೇಲೆ ಅದೆಂತ ಬಾಳು ಕ್ಷತ್ರಿಯರದು? ಮರಣಕ್ಕಿಂತ ಹೆಚ್ಚಿನ ದುರ್ಗತಿ ಅದು. ಯುದ್ಧ, ಧೈರ್ಯ, ಶಕ್ತಿ, ಸಾಮರ್ಥ್ಯ, ರಾಜ್ಯಭಾರ, ವೀರ ಸನ್ಮಾನ, ಶೌರ್ಯಪದವಿ, ಸತ್ತರೆ ವೀರ ಸ್ವರ್ಗ ಇವೇ ಯೋಧರ ಆದರ್ಶಗಳು. ಹೀಗಿರುವಾಗ ಯುದ್ಧದಿಂದ ಹಿಂದೆ ಸರಿದು ಅವಮಾನ, ಹೇಡಿತನದ ಕಳಂಕ ಹೊತ್ತುಕೊಂಡು ಬದುಕುವುದು ಹೀನಾಯವಾದದು, "ಯುದ್ಧದಲ್ಲಿ ಗೆದ್ದರೆ ನಿನಗೆ ಮಹಿತಳವೇ ಭೋಗ್ಯವಸ್ತುವಾಗುವದು, ವೀರಮರಣ ಹೊಂದಿದರೆ ಸ್ವರ್ಗ ಲಾಭವಾಗುವುದು. ಆದ್ದರಿಂದ ಕುಂತೀ ಪುತ್ರನೇ ಉತ್ತಿಷ್ಠತ, ಜಾಗ್ರತ, ಯುದ್ಧ ಸನ್ನದರಾಗು" ಎಂದು ಶ್ರೀಕೃಷ್ಣನು ಉಪದೇಶಿಸಿದನು.

ಈ ಮೊದಲೇ ಶ್ರೀಕೃಷ್ಣನು ಆಳವಾದ, ಗಂಭೀರವಾದ ಆಧ್ಯಾತ್ಮಿಕ ವಿಚಾರವನ್ನು ಅರ್ಜುನನಿಗೆ ಹೇಳಿದ್ದಾನೆ. ಆತ್ಮ, ಅದರ ಅಮರತ್ವ, ಶಾಶ್ವತತೆ, ಸರ್ವವ್ಯಾಪಿತ್ವ ಇವೆಲ್ಲವುಗಳ ಬಗ್ಗೆ ತಿಳಿಸಿದ್ದಾನೆ. ಹೀಗಿರುವಾಗ ಪುನಃ ಈ ರೀತಿ ಯುದ್ಧ, ಶೌರ್ಯ, ಸ್ವರ್ಗ, ಭೋಗ ಇವುಗಳ ಬಗ್ಗೆ ಮಾತನಾಡುವುದು ಸಪ್ಪೆಯೆನಿಸುವುದು. ಕೆಳಸ್ತರದ ವಿಚಾರವೇನೋ ಅನಿಸಿಬಿಡುವುದು. ಜಯಾಪಜಯ, ಸುಖ–ದುಃಖ, ಲಾಭ–ನಷ್ಟ ಎಲ್ಲವನ್ನೂ ಸಮಾನವಾಗಿ ಸ್ವೀಕರಿಸು ಎಂದು ಹೇಳುವುದು. ಆದರೆ ಯುದ್ಧಕ್ಕೆ ಸಿದ್ದನಾಗು ಎಂದು ಹೇಳುವುದು ತುಸು ವಿರೋಧಾಭಾಸವೆನಿಸಬಹುದು. ಆದರೆ ಗೀತೆಯ ಬೋಧನೆಯ ನಿಜವಾದ ತಿರುಳು ಇದೇ ಆಗಿದೆ. ಸಮತೆಯೇ ಗೀತೆಯ ನಿಜವಾದ ತಿರುಳು. ಭಾರತೀಯ ನೀತಿ ಶಾಸ್ತ್ರವು ವ್ಯವಾಹಾರಿಕ ದೃಷ್ಟಿಯಿಂದ ಮಾನವನ ನೈತಿಕ, ಆಧ್ಯಾತ್ಮಿಕ ಹೀಗೆ

ಭಿನ್ನ ಭಿನ್ನ ರೀತಿಯ ಶ್ರೇಣಿಗಳನ್ನು ಮಾಡಬೇಕಲ್ಲದೆ, ಆಯಾ ಶ್ರೇಣಿಗೆ ಆಯಾ ಆದರ್ಶವನ್ನೇ ಮುಂದೆ ಇರಿಸುತ್ತದೆ. ಸಾಮಾಜಿಕ ದೃಷ್ಟಿಕೋನದ ಹಿನ್ನಲೆಯಲ್ಲಿ ಚಾತುರ್ವರ್ಣ್ಯದ ವ್ಯವಸ್ಥೆಯನ್ನು ಹೇಳಿದರೆ, ಕ್ಷತ್ರಿಯರ ಧರ್ಮವಾಗಿ ಅರ್ಜುನನಿಗೆ ಯುದ್ಧ ಮಾಡಲು ಆದೇಶ ನೀಡುತ್ತದೆ. ಈ ಆದರ್ಶಕ್ಕೆ ಆಧ್ಯಾತ್ಮಿಕ ನೆಲೆಗಟ್ಟು ಇದೆ. ಇದನ್ನು ಮುಂದೆ ಪ್ರಸಂಗಾನುಸಾರ ವಿವೇಚನೆ ಮಾಡಲಾಗುವುದು. ಅರ್ಜುನನಿಗೆ ಶ್ರೀಕೃಷ್ಣನು ಈ ಹಂತದಲ್ಲಿ ಬೋಧಿಸುವುದಿಷ್ಟು "ಸುಖ–ದುಃಖ, ಫಲಾಫಲ ಇವೆಲ್ಲವನ್ನೂ ನಿನ್ನ ವೈಯಕ್ತಿಕ ದೃಷ್ಟಿಯಿಂದ ವಿಚಾರ ಮಾಡುತ್ತಿರುವಿ, ಆದರೆ ನಾನು ಹೇಳುವುದನ್ನು ಲಕ್ಷವಿಟ್ಟು ಕೇಳು, ಆತ್ಮಜ್ಞಾನದ ಬಗ್ಗೆ ಈಗಾಗಲೇ ಹೇಳಿದ್ದೇನೆ, ಅದು ಅತ್ಯಂತ ಶ್ರೇಷ್ಟವಾದ ಜ್ಞಾನ ಅನ್ನುವುದನ್ನು ನಿನಗೆ ಚೆನ್ನಾಗಿ ಹೇಳಿದ್ದೇನೆ. ನಿನ್ನ ಕರ್ತವ್ಯವೇನು, ನಿನ್ನ ವೈಯಕ್ತಿಕ ಹಾಗೂ ಸಾಮಾಜಿಕ ಹೊಣೆಯೇನು ಎಲ್ಲವನ್ನು ನಿನಗೆ ಈಗಾಗಲೆ ಹೇಳಿದ್ದೇನೆ. ಸಮಾಜ ಕರ್ತವ್ಯ ಹಾಗೂ ಮಾನವನ ಸ್ವಧರ್ಮದ ಬಗ್ಗೆಯೂ ನಿನಗೆ ತಿಳಿಹೇಳಿದ್ದೇನೆ, ಈಗ ನೀನೇ ಸ್ವತಃ ವಿಚಾರ ಮಾಡು, ನಿನ್ನ ಸಾಮಾಜಿಕ ಹೊಣೆ, ಕರ್ತವ್ಯ, ಸ್ವಧರ್ಮ ಹಾಗೂ ವರ್ಣ ಸಹಜ ಸ್ವಬಾವ ಇವೆಲ್ಲ ನಿನನಗೆ ಬೇಸರ ತರಿಸಿದ್ದರೆ ಇದೆಲ್ಲವನ್ನು ಬಿಟ್ಟುಬಿಡು, ಇದರಿಂದ ನಿನಗೆ ಪಾಪ ಅಂಟುತ್ತದೆ ಎಂದು ಅನಿಸಿದರೆ, ನಿನಗೆ ದುಃಖವಾಗುವುದು ಎಂದು ಅನಿಸಿದರೆ ಎಲ್ಲವನ್ನೂ ಬಿಟ್ಟುಬಿಡು, ಇವುಗಳನ್ನು ಅನುಸರಿಸಲು ಹೋಗಬೇಡ. ಆದರೆ ಇವುಗಳಿಗಿಂತ ಕೀಳಾಗಿರುವುದನ್ನು ಮಾತ್ರ ಅನುಸರಿಸಬೇಡ, ಇವುಗಳಿಗಿಂತ ಕೆಳಕ್ಕಿಳಿಯಬೇಡ, ಮೇಲಕ್ಕೇರು. ನಿನ್ನ ಅಹಂಬಾವ ಅಳಿಸಿ ಹಾಕು. ಸುಖ, ದುಃಖ, ಲಾಭ, ಹಾನಿ ಇವುಗಳ ವಿಚಾರಗಳನ್ನು ಪಕ್ಕಕಿಡು. ನೀನು ಮಾಡಬೇಕಾಗಿರುವುದು ಈಶ್ವರನ ಸಂಕಲ್ಪದ ಕೆಲಸ. ಆ ಕಡೆ ನಿನಗೆ ನಂಬಿಕೆಯಿರಲಿ, ಗಮನವಿರಲಿ ಅಂದರೆ ಮಾತ್ರ ನಿನಗೆ ಯಾವ ಕ್ಷಣಕ್ಕೂ ಎಂಥ ಕರ್ಮವಿದ್ದರೂ ಪಾಪ ಹತ್ತುವುದಿಲ್ಲ" ಹೀಗೆ ಮಹಾಭಾರತದ ಕಾಲದಲ್ಲಿ ಯಾವ ಉಚ್ಚತಮ ಆದರ್ಶಗಳಿದ್ದವೋ ಆ ಕಡೆಗೆ ಅರ್ಜುನನ ಗಮನವನ್ನು ಶ್ರೀಕೃಷ್ಣನು ಸೆಳೆದನು. ಕುಲಧರ್ಮ, ನೈತಿಕ ವ್ಯವಸ್ಥೆ ಇವೆಲ್ಲಾ ಕಾಲ ಕಾಲಕ್ಕೆ ಬದಲಾಗುತ್ತಿರುತ್ತವೆ. ಅವುಗಳಿಗೆ ಶಾಶ್ವತ ಮೌಲ್ಯವಿಲ್ಲ, ಆದರೂ ಆಯಾ ಕಾಲಘಟ್ಟದಲ್ಲಿ ಅವುಗಳನ್ನು ಕಡೆಗಣಿಸಲು ಬರುವುದಿಲ್ಲ. ಹೀಗೆ ಸಾಮಾಜಿಕ ಕರ್ತವ್ಯ, ಸಾಮಾಜಿಕ ಹೊಣೆಗಾರಿಕೆ, ನೈತಿಕ ಮೌಲ್ಯ, ಆಧ್ಯಾತ್ಮ ವಿಚಾರ ಎಲ್ಲವನ್ನೂ ಶ್ರೀಕೃಷ್ಣನು ತೆರೆದಿಟ್ಟನು.


ಇದು ಆರ್ಯ ಕ್ಷತ್ರಿಯನ ಧರ್ಮ "ಭಗವಂತನ್ನನ್ನು ಅರಿತುಕೋ ನಿನ್ನನ್ನು ನೀನು ತಿಳಿದುಕೋ ಜನರಿಗೆ ಸಹಾಯ ಮಾಡು ಜಗದಲ್ಲಿ ನ್ಯಾಯ, ನೀತಿ, ಧರ್ಮಗಳನ್ನು ರಕ್ಷಿಸು ನಿನ್ನ ಕೆಲಸ ಯುದ್ಧ ಮಾಡುವುದು ಇದು ನಿನ್ನ ಸಹಜ ಧರ್ಮ, ನೀನು ಅಂಜದೇ ಅಳುಕದೇ, ಯಾವ ಆಮಿಷಕ್ಕೂ ಬಲಿ ಬೀಳದೆ, ಅನ್ಯ ವಿಚಾರಕ್ಕೆಳಸದೆ ನಿನ್ನ ಧರ್ಮವನ್ನು ಪಾಲಿಸು. ಮನೋ ದೌರ್ಬಲ್ಯವನ್ನು ಕಿತ್ತೆಸೆ. ನೀನು ಮರಣ ರಹಿತನು, ನಿತ್ಯನು, ಶಾಶ್ವತನು, ಚೈತನ್ಯಪೂರ್ಣನು. ನಿನ್ನ ಆತ್ಮವು ಅಮರತ್ವದೆಡೆಗೆ ಸಾಗುತ್ತದೆ. ಈ ಅಮರತ್ವದ ಕಡೆಗಿನ ಪಯಣದಲಿ ದುಖಃ, ನೋವು, ಗಾಯ, ಮರಣ ಮುಂತಾದವುಗಳಿಗೆ ಬೆಲೆಯಿಲ್ಲ. ನಿನ್ನ ವಯಕ್ತಿಕ ಲಾಭಾಲಾಭಗಳ ಕೂಡಬೇಡ. ನಿನ್ನ ಸುತ್ತಲೆಲ್ಲಾ ನೋಡು ನೀನು ಮೇಲೇರಬೇಕಾಗಿರುವ ಹೊಳೆಯುವ ಸಾಧನೆಯ ಶಿಖರಗಳನ್ನು ನೋಡು. ಈ ಜಗತ್ತಿನಲ್ಲಿ ಯುದ್ಧ, ಸಂಘರ್ಷ, ಒಳ್ಳೆಯದು, ಕೆಟ್ಟದ್ದು, ಪ್ರಗತಿ, ಅವನತಿ ಈ ದ್ವಂದ್ವಗಳು ಸಾಮಾನ್ಯ. ಎಲ್ಲರೂ ನಿನ್ನನ್ನು ಯಾಚಿಸುತ್ತಾರೆ, ಸಹಾಯಕ್ಕಾಗಿ ಕರೆಯುತ್ತಾರೆ, ನಾಯಕರೆಂದು ಭಾವಿಸುತ್ತಾರೆ. ಅವರಿಗಾಗಿ ಯುದ್ಧ ಮಾಡು ಅವರಿಗೆ ಸಹಾಯ ಮಾಡು, ಎಲ್ಲೆಲ್ಲಿ ವಿನಾಶಕಾರದಿಂದ ಜಗತ್ತಿನಲ್ಲಿ ಪ್ರಗತಿಯಾಗಲಿದೆಯೋ ಅಲ್ಲಲ್ಲಿ ವಿನಾಶ ಅತ್ಯಂತ ಅಗತ್ಯ. ಅಲ್ಲಿ ವಿನಾಶವೇ ನಿನ್ನ ಕರ್ತವ್ಯ. ಆದರೆ ನೀನು ಏನನ್ನು ವಿನಾಶ ಮಾಡಲಿರಿವಿಯೋ ಅದನ್ನು (ಅವರನ್ನು) ದ್ವೇಷಿಸಬೇಡ, ಯಾರದರೂ ಸಾಯುತ್ತಾರೆಂದು ಶೋಕಿಸಲೂ ಬೇಡ. ಎಲ್ಲರಲ್ಲೂ, ಎಲ್ಲದರಲ್ಲೂ ಇರುವ ಆತ್ಮ ಒಂದೇ, ಎಲ್ಲರ ಆತ್ಮ ಅಮರ ಎಂದು ತಿಳಿದಿರಲಿ. ಶರೀರವು ವಿನಾಶಿಯಾಗಿರಬಹುದು. ಆದರೆ ಆತ್ಮ ಅವಿನಾಶಿ ಎಂದು ನೆನಪಿರಲಿ, ನಿನ್ನ ಕೆಲಸ ನೀನು ಮಾಡು. ಶಾಂತ ಚಿತ್ತದಿಂದ ಸಮತಾ ಭಾವದಿಂದ ಕರ್ತವ್ಯ ನೆರವೇರಿಸು. ಯುದ್ಧ ಮಾಡು, ಗೆಲ್ಲು, ಸೋಲುವಿಯಾ? ಗಂಭೀರವಾಗಿ ಸೋಲು. ಏಕೆಂದರೆ ಆ ಭಗವಂತನು ಹಾಗೂ ನಿನ್ನ ಪ್ರಕೃತಿಯು ನಿನಗೆ ವಹಿಸಿದ ಉದಾತ್ತ ಕರ್ಮವದು, ನೀನದನ್ನು ನಿರ್ವಹಿಸಲೇಬೇಕು" ಎಂದು ಗೀತೆಯು ಅರ್ಜುನನಿಗೆ ಬೋಧಿಸುವುದು.

(ಸಶೇಷ)

## ಶ್ರೀ ಅರವಿಂದರ ಕವನಗಳು

# "ಸ್ವರ್ಣ ಜ್ಯೋತಿ"

**ಅನುವಾದ: ಪುಟ್ಟು ಕುಲಕರ್ಣಿ**



(ಫೋಟೋ: ಇಮೆಜಿಂಗ್ ಸಾವಿತ್ರಿ)

ನನ್ನ ಸಾವಿರದ–ದಳದ ತಾವಿನೆಡೆ ಅವತರಣ ಸ್ವರ್ಣ ಜ್ಯೋತಿ
ಧೂಸರದ ಛಾಯೆ ತುಂಬಿದ್ದ ಮನಸುಗಳಿಗೀಗ ಸೂರ್ಯ–ಕಾಂತಿ
ಪ್ರಜ್ಞಾನ ಸಮತೆ ಆವರಣಗೊಳಲು ಮರುಧ್ವನಿಯು ನವ್ಯ ತೇಜ
ಘನಶಾಂತ ಸಾಂತ ಉತ್ಕ್ರಾಂತ ಜ್ವಾಲೆ ಮಿನುಮಿನುಗು ನಿತ್ಯ ಓಜ

ವೈಖರಿಯ ಸ್ವರ್ಣಕಾಂತಿಯದು ಈಗ ಕಂಠದಲಿ ಬೆಳಗಿ ಬರಲು
ನನ್ನ ಧ್ವನಿಯೆಲ್ಲ ದಿವ್ಯನಾದದಲಿ ಅಲೆಯಲೆಯ ರೂಪವಿರಲು
ನಿನ್ನ ಹೃನ್ಮನದ ದಿವ್ಯಗಾನವದು ನನಗೊಂದು ಪಾಠವಾಗಿ
ಅಮೃತದಲಿಮಿಂದು ಅಮೃತವನು ಸವಿದ ಧ್ವನಿಯೆಲ್ಲ ನನ್ನದಾಗಿ

ಆ ಸ್ವರ್ಣಜ್ಯೋತಿ ತಾನಿಳಿದು ಬಂತು ಈ ನನ್ನ ಹೃದಯದಲ್ಲಿ
ಶಾಶ್ವತದ ಜೊತೆಗೆ ನನ್ನ ಉಸಿರುಸಿರು ಮೇಳೈಸಿ ನಿತ್ಯದಲ್ಲಿ
ಬೆಳೆಬೆಳೆದು ನಿಂದು ದೇವಳದ ತೆರದಿ ಎಲ್ಲೆಡೆಗೆ ನಿನ್ನ ಕಲೆಯು
ಸರ್ವಸ್ವ ಮಿಡಿತ–ಮಿಡಿತಗಳು ನಿನ್ನೆಡೆಗೆ, ನಿತ್ಯ ಝರಿಯು

ಆ ಸ್ವರ್ಣಜ್ಯೋತಿ ತಾನಿಳಿದು ಬಂತು ದಟ್ಟಡಿಯ ಹೆಜ್ಜೆಗೀಗ
ನನ್ನ ಮೂಲವಿದು ನಿನ್ನ ಆಟಕ್ಕೆ ಜೊತೆಗೀಗ ಪೀಠವಾಗ

* * *

## ವಾರ್ತಾಪತ್ರ

### ಶ್ರೀ ಅರವಿಂದ ಸಂಕೀರ್ಣ

ಜೆ.ಪಿ.ನಗರ 1ನೇ ಹಂತ, ಬೆಂಗಳೂರು

ದಿನಾಂಕ 12–03–2022 ಶನಿವಾರ ಸಂಜೆ 4:00 ರಿಂದ 5:30 ಗಂಟೆಯ ವರೆಗೆ ಶ್ರೀ ರಮೇಶ್ ಸರಗೂರ್ ಇವರು ಶ್ರೀ ಅರವಿಂದರ 150ನೇ ಜನ್ಮವಾರ್ಷಿಕೋತ್ಸವ ಅಂಗವಾಗಿ "ಶ್ರೀ ಅರವಿಂದರ ಬೆಳಕಿನಲ್ಲಿ ಪುನರ್ಜನ್ಮ" ಎಂಬ ವಿಷಯವಾಗಿ ಆನ್‌ಲೈನ್ ಮೂಲಕ ಉಪನ್ಯಾಸ ನೀಡಿದರು. ಉಪನ್ಯಾಸ ಕಾರ್ಯಕ್ರಮದಲ್ಲಿ ಅನೇಕ ಗುರು–ಬಂಧುಗಳು ಮತ್ತು ಶ್ರೀಮಾತಾರವಿಂದರ ಭಕ್ತರು ಭಾಗವಹಿಸಿದ್ದರು.

ದಿನಾಂಕ 26–03–2022 ಶನಿವಾರ ಸಂಜೆ 4:00 ರಿಂದ 5:30 ಗಂಟೆಯ ವರೆಗೆ ಶ್ರೀ ಅನಿಲ್ ಗೋಕಾಕ್ ಇವರು ಶ್ರೀ ಅರವಿಂದರ 150ನೇ ಜನ್ಮವಾರ್ಷಿಕೋತ್ಸವ ಅಂಗವಾಗಿ "Nationalism and Internationalism in the light of Sri Aurobindo" ಎಂಬ ವಿಷಯವಾಗಿ ಆನ್‌ಲೈನ್ ಮೂಲಕ ಉಪನ್ಯಾಸ ನೀಡಿದರು. ಉಪನ್ಯಾಸ ಕಾರ್ಯಕ್ರಮದಲ್ಲಿ ಅನೇಕ ಗುರು–ಬಂಧುಗಳು ಮತ್ತು ಶ್ರೀಮಾತಾರವಿಂದರ ಭಕ್ತರು ಭಾಗವಹಿಸಿದ್ದರು.



ಫೋಟೋ: ಇಮೇಜಿಂಗ್ ಸಾವಿತ್ರಿ

ಅಭಿಮಾನಪೂರ್ಣ ಸೌಭಾಗ್ಯ ಅವನ ಅನುದಿನದ ಭವ್ಯ ಮಾಲೆ
ಅವಳುಪಾಯನವನಾಧರಿಸಿ ಅವನು ಸಂರಚಿಸಿ ಜಗದ–ಲೀಲೆ
ಬಾನಗಲದಲ್ಲಿ ವರ್ಣ ಕೋರೈಸಿ ಸಮ್ಮೇಳ ಕಾಂತಿಯಲ್ಲಿ
ಗರಿಗೆದರಿ ಕುಣಿವ ಆ ನವಿಲನೃತ್ಯ ವಿನ್ಯಾಸ ಮಾಲೆಯಲ್ಲಿ
ಜೀವತೋಷವನು ಮೊಗೆಮೊಗೆದು ಅವಳು ತುಂತುಂಬಿ ನೀಡುತಿರಲು
ಅವನೀಗ ಪಥದಿ ಮುಂದೆಳೆದುಕೊಂಡು ಅನುದಿನವು ಬೆಳಗುತಿರಲು
ತರಣಗೊಳ್ಳುತಿಹ ಅವಳ ಆ ಮಂದಹಾಸದಿಂದುತ್ಕ್ರಾಂತಿಯಲ್ಲಿ
ಅದರ ಚಿರಪ್ರಭೆಯ ಪ್ರಭಾವಳಿಯಲ್ಲಿ ಅವನುದಿತ ನಿತ್ಯದಲ್ಲಿ

**– ಪುಟ್ಟು ಕುಲಕರ್ಣಿ**

**(ಶ್ರೀ ಅರವಿಂದರ 'ಸಾವಿತ್ರಿ'; ದಳ 1 ರೇಣು 4 ಪುಟ 63)**

**RNI No. 22511/1971**
No. of Pages **64 + 4 (Cov. Page)**
KAR Reg No.: RNP/KA/BGS/368/2021-2023
Kannada Monthly Magazine
Date of Publication on 7th of Every Month
Permitted to Post 10th of Every Month. Reg. Valid till: 31-12-2023
Licensed to Post at BG PSO, Mysuru Road, Bengaluru - 560 026



ಫೋಟೋ: ಇಮೇಜಿಂಗ್ ಸಾವಿತ್ರಿ

ಪ್ರಜ್ಞಾನ ನಿನದ ವಿಜ್ಞಾನ ಮೂಲ ನೆಲೆಯ ದೃಷ್ಟಾರರಿವರು
ಮಾಧುರ್ಯಮಯದ, ಸಾಮರ್ಥ್ಯ ಘನದ ದಿವ್ಯದಾನಂದ ಘನರು,
ಸೂರ್ಯತೇಜದಲಿ ಪಡಿಮೂಡಿಕೊಂಡ ಸೌಂದರ್ಯ ಪಥಗಳನ್ನು
ಸತತ ಧ್ಯಾನದಲಿ ಆತ್ಮಭಾವದಲಿ ಶೋಧಕರು ಕಂಡರಿನ್ನು

**– ಪುಟ್ಟು ಕುಲಕರ್ಣಿ**

**(ಶ್ರೀ ಅರವಿಂದರ 'ಸಾವಿತ್ರಿ'; ದಳ 3 ರೇಣು 4 ಪುಟ 344)**

Ed: Sri Puttu Parashuram Kulkarni, Pub: Dr. Ajit Sabnis
Ptd. by M/s. Seshaasai e-forms Pvt. Ltd.,
on behalf of Sri Aurobindo Complex Trust, 'Sri Aurobindo Marg',
J.P. Nagar I Phase, Bengaluru - 560 078. Phone: 080 - 22449882.